ಕರ್ನಾಟಕ ವಿಧಾನಪರಿಷತ್ತಿನ ನಡವಳಿಕೆಗಳು

# KARNATAKA LEGISLATIVE COUNCIL DEBATES

ಅಧಿಕೃತ ವರದಿ

## OFFICIAL REPORT

ೞ೧೩೦ ನೇ ಅಧಿವೇಶನ

## 130th SESSION

ಸಂಪುಟ–೪೪೪ ಕ್ರಮಾಂಕ (೩)

## Volume -444 (No. 3)

( ೧೧ ನೇ ಜುಲೈ ೨೦೧೬)

## (11th July 2016)

ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯ, ಬೆಂಗಳೂರು

**Karnataka Legislative Council Secretariat, Bangalore**

# ಕರ್ನಾಟಕ ವಿಧಾನ ಪರಿಷತ್ತು

ದಿನಾಂಕ 11ನೇ ಜುಲೈ 2016

ಸೋಮವಾರ

## ವಿಷಯಾನುಕ್ರಮಣಿಕೆ

1. ನೂತನ ಸದಸ್ಯರ ಪ್ರಮಾಣ ವಚನ ಸ್ವೀಕಾರ 1-3

ಶ್ರೀ ಕೆ.ಟಿ.ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ)

2. ನಿಯಮ 59ರ ಮೇರೆಗೆ ನಿಲುವಳಿ ಸೂಚನೆ ಮಂಡಿಸಲು ಅನುಮತಿ ಕೋರಿ ಚರ್ಚೆ, 3–50

ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಕುಸಿದಿರುವುದು ಮತ್ತು ಪ್ರಾಮಾಣಿಕ ಅಧಿಕಾರಿಗಳಿಗೆ ಸೂಕ್ತ ರಕ್ಷಣೆ ಇಲ್ಲದೆ ಇತ್ತೀಚೆಗೆ ಡಿವೈಎಸ್‌ಪಿ ಶ್ರೀ.ಎಂ.ಕೆ.ಗಣಪತಿ ಆತ್ಮಹತ್ಯೆ ಮಾಡಿಕೊಂಡಿರುವ ಬಗ್ಗೆ.

ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು)

ಶ್ರೀ ಟಿ.ಎ.ಶರವಣp

ಶ್ರೀ ಭಾನುಪ್ರಕಾಶ್

ಶ್ರೀ ಎಂ.ಪಿ.ಸುನೀಲ್ ಸುಬ್ರಮಣಿ

ಶ್ರೀ ಕೋಟ ಶ್ರೀನಿವಾಸ ಪೂಜಾರಿ

ಡಾ|| ಜಿ.ಪರಮೇಶ್ವರ್ (ಗೃಹ ಸಚಿವರು)

ಶ್ರೀ ಕೆ.ಆರ್.ರಮೇಶ್ ಕುಮಾರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ವಿರೋಧ ಪಕ್ಷದ ಮುಖ್ಯ ಸಚೇತಕರು)

ಶ್ರೀ ವಿ.ಸೋಮಣ್ಣ

ಶ್ರೀ ಕೆ.ಟಿ.ಶ್ರೀಕಂಠೇಗೌಡ

ಶ್ರೀ ಆರ್.ಚೌಡರೆಡ್ಡಿ ತೂಪಲ್ಲಿ

ಶ್ರೀ ಪುಟ್ಟಣ್ಣ

(ಸರ್ಕಾರದ ನಿಲುವನ್ನು ಪ್ರತಿಭಟಿಸಿ ವಿರೋಧ ಪಕ್ಷದ ಸದಸ್ಯರಿಂದ ಧರಣಿ)

# **ಕರ್ನಾಟಕ ವಿಧಾನ ಪರಿಷತ್ತು**

ಗುರುವಾರ, 11ನೇ ಜುಲೈ 2016

ಸದನವು ವಿಧಾನಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ ಪೂರ್ವಾಹ್ನ 11 ಗಂಟೆ 16 ನಿಮಿಷಕ್ಕೆ ಸಮಾವೇಶಗೊಂಡಿತು.

ಸಭಾಪತಿ (ಶ್ರೀ ಡಿ.ಹೆಚ್.ಶಂಕರಮೂರ್ತಿ) ಅವರು ಪೀಠದಲ್ಲಿ ಉಪಸ್ಥಿತರಿದ್ದರು.

### 1. ನೂತನ ಸದಸ್ಯರಿಂದ ಪ್ರಮಾಣ ವಚನ ಸ್ವೀಕಾರ

**ಸಭಾಪತಿಯವರುಃ–** ಮೊನ್ನೆ ದಿನ ನಾನು ತಿಳಿಸಿದಂತೆ ಎರಡು ವರ್ಷಕ್ಕೊಮ್ಮೆ ವಿಧಾನ ಪರಿಷತ್ತಿನ ಮೂರನೇ ಒಂದು ಭಾಗದಷ್ಟು ಸದಸ್ಯರು ನಿವೃತ್ತಿ ಹೊಂದುತ್ತಿರುತ್ತಾರೆ. ಹೊಸ ಸದಸ್ಯರು ಚುನಾಯಿತರಾಗಿ ಈ ಮನೆಗೆ ಬರುತ್ತಾರೆ. ಚುನಾಯಿತರಾದ ಎಲ್ಲ ಸದಸ್ಯರು ಮೊನ್ನೆ ಪ್ರಮಾಣ ವಚನ ಸ್ವೀಕಾರ ಮಾಡುವುದಕ್ಕೆ ಸಾಧ್ಯವಾಗಿರಲಿಲ್ಲ. ಅವರಲ್ಲಿ ಒಬ್ಬರಾದ ಮಾನ್ಯ ಕೆ.ಟಿ.ಶ್ರೀಕಂಠೇಗೌಡರು ಈ ದಿನ ಪ್ರಮಾಣ ವಚನ ಸ್ವೀಕಾರ ಮಾಡುತ್ತಿದ್ದಾರೆ. ಅವರ ಪ್ರಮಾಣ ವಚನ ಸ್ವೀಕಾರದ ಮೂಲಕ ಈ ದಿನದ ಕಾರ್ಯಕಲಾಪಗಳನ್ನು ಪ್ರಾರಂಭ ಮಾಡೋಣ.

ಮಾನ್ಯ ಕೆ.ಟಿ.ಶ್ರೀಕಂಠೇಗೌಡರೇ, ತಮಗೆ ಪ್ರಮಾಣ ವಚನ ಸ್ವೀಕಾರ ಹೊಸದೇನೂ ಅಲ್ಲ. ಆದರೂ ಈ ಸದನದಲ್ಲಿ ಒಂದು ಮಾತನ್ನು ಪ್ರತಿ ಬಾರಿ ಹೇಳುತ್ತಿರುತ್ತೇನೆ, ಈ ಬಾರಿಯೂ ಹೇಳುವುದಕ್ಕೆ ಬಯಸುತ್ತಿದ್ದೇನೆ. ಬಹಳಷ್ಟು ಜನರು 'ಮಾನ್ಯ ಸಭಾಪತಿಯವರು ಪ್ರಮಾಣ ವಚನವನ್ನು ಬೋಧಿಸಿದರು' ಎನ್ನುವ ಪದ ಪ್ರಯೋಗ ಮಾಡುತ್ತಾರೆ. ಮಾನ್ಯ ಸಭಾಪತಿಗಳಾಗಲೀ ಅಥವಾ ಮಾನ್ಯ ಸಭಾಧ್ಯಕ್ಷರಾಗಲೀ ಪ್ರಮಾಣ ವಚನವನ್ನು ಬೋಧಿಸುವುದಿಲ್ಲ. ಎಲ್ಲ ರಾಜಕಾರಣಿಗಳು ನಾಮಿನೇಶನ್ ಹಾಕುವುದಕ್ಕೆ ಹೋಗುತ್ತೇವೆ. ಆ ದಿನ Returning Officer ನಮಗೆ ಪ್ರತಿಜ್ಞಾ ಬೋಧನೆ ಮಾಡುವುದಿಲ್ಲ. ಆದರೆ, ಅವರ ಸಮ್ಮುಖದಲ್ಲಿ ನಾವು ಪ್ರತಿಜ್ಞೆಯನ್ನು ಸ್ವೀಕಾರ ಮಾಡುತ್ತೇವೆ. ಅಂದರೆ, in his presence ಪ್ರಮಾಣ ವಚನ ಸ್ವೀಕಾರಕ್ಕೆ ನಮ್ಮ ರಾಜ್ಯಾಂಗದಲ್ಲಿ ಬಹಳ ಅದ್ಭುತವಾಗಿರುವ ಗೌರವವನ್ನು ಕೊಟ್ಟಿದ್ದೇವೆ. ರಾಜ್ಯಾಂಗದಲ್ಲಿ ಇಂಗ್ಲೀಷ್ ಮತ್ತು ಹಿಂದಿ ಭಾಷೆಗಳಲ್ಲಿ ಪ್ರಮಾಣ ವಚನ ಸ್ವೀಕಾರದ ಒಂದು format (ವಿಧಾನವನ್ನು) ಕೊಟ್ಟಿದ್ದಾರೆ. ಅದನ್ನು ಬಹಳ ಅರ್ಥಪೂರ್ಣವಾಗಿ ಕನ್ನಡಕ್ಕೆ ತರ್ಜುಮೆ ಮಾಡಿದ್ದೇವೆ. ರಾಜ್ಯಾಂಗದಲ್ಲಿ ನೀಡಿರುವ ವಿಧಾನವನ್ನು ಹೊರತುಪಡಿಸಿ ಬೇರೆ ರೀತಿಯಲ್ಲಿ ಪ್ರಮಾಣವಚನ ಸ್ವೀಕಾರ ಮಾಡಿರುವುದನ್ನು ನಾನು ಗಮನಿಸಿದ್ದೇನೆ. ನ್ಯಾಯಾಂಗದತ್ತವಾಗಿ ಮತ್ತು ಕಾನೂನಿನ ದೃಷ್ಟಿಯಿಂದ ನೋಡಿದರೆ, ರಾಜ್ಯಾಂಗದಲ್ಲಿ ನೀಡಿರುವ ಮಾದರಿಯನ್ನು ಬಿಟ್ಟು ಬೇರೆ ಯಾವುದೇ ಪದ ಪ್ರಯೋಗ ಮಾಡುವುದು ಅಥವಾ ಅದರಲ್ಲಿ ಇರುವಂತಹ ಪದಗಳನ್ನು ಬಿಡುವುದರಿಂದ ಪ್ರಮಾಣ ವಚನ ಅಪೂರ್ಣಗೊಳ್ಳುತ್ತದೆ. ಪ್ರಮಾಣ ವಚನ ಸ್ವೀಕಾರ ಮಾಡುವ ಸಂದರ್ಭದಲ್ಲಿ ಆ ರೀತಿ ಪ್ರಮಾಣ ವಚನ ಸ್ವೀಕಾರ ಮಾಡಬೇಕು, ಅವರ ಹೆಸರಿನಲ್ಲಿ ಸ್ವೀಕಾರ ಮಾಡಬೇಕು ಎಂದು ನಮ್ಮ ಭಾವನೆಗಳು ಬಹಳಷ್ಟಿರುತ್ತವೆ. ಆದರೆ, ನಾವು ಮೇಲ್ಮನೆಯ ಸದಸ್ಯರುಗಳು ರಾಜ್ಯಾಂಗದ ಹೆಸರಿನಲ್ಲಿ ಪ್ರಮಾಣ ವಚನವನ್ನು ತೆಗೆದುಕೊಳ್ಳುವಾಗ ರಾಜ್ಯಾಂಗದಲ್ಲಿ ಸ್ಪಷ್ಟ ಪದಗಳಲ್ಲಿ ತಿಳಿಸಿರುವ ಮಾದರಿಯಲ್ಲಿಯೇ ಪ್ರಮಾಣ ವಚನವನ್ನು ಸ್ವೀಕಾರ ಮಾಡಿದಾಗ ಮಾತ್ರ ಅದು ಸಿಂಧು ಆಗುತ್ತದೆ. ಇಲ್ಲದಿದ್ದರೆ ನನ್ನ ಮನಸ್ಸಿಗೆ ಮುಜುಗರವಾಗುತ್ತದೆ. ಅದು ಸರಿ ಹೋಗುವುದಿಲ್ಲ. ನನ್ನ ಜವಾಬ್ದಾರಿ ಮತ್ತು ಕರ್ತವ್ಯವನ್ನು ನಾನು ನಿರ್ವಹಿಸುತ್ತಿದ್ದೇನೆ. ಪ್ರಮಾಣ ವಚನ ಸ್ವೀಕಾರದ ಮಾದರಿಯನ್ನು ಮಾಡಿ ನಿಮಗೆ ಕೊಟ್ಟಿದ್ದೇವೆ. ದಯಮಾಡಿ ಆ ಮಾದರಿಯಲ್ಲಿ ಮಾತ್ರ ಪ್ರಮಾಣವಚನ ಸ್ವೀಕಾರ ಮಾಡಬೇಕು ತದನಂತರ, ನೀವು ಯಾರಿಗೆ ಧನ್ಯವಾದ ಹೇಳಬೇಕು ಅಥವಾ ಕೃತಜ್ಞತೆ ಹೇಳಬೇಕು ಅದನ್ನು ಮಾಧ್ಯಮದ ಎದುರಿಗೆ ಹೇಳಬಹುದಾಗಿದೆ. But not here; not in this House. ಪ್ರಮಾಣ ವಚನ ಸ್ವೀಕಾರ ಮಾಡುವ ಸಂದರ್ಭದಲ್ಲಿ ಅದನ್ನು ಹೇಳುವುದು ಬೇಡ. ದಯಮಾಡಿ ಇದನ್ನು ನೆನಪಿನಲ್ಲಿಟ್ಟುಕೊಂಡು ಪ್ರಮಾಣವಚನ ಸ್ವೀಕಾರ ಮಾಡಿ.

#### ಈ ಕೆಳಕಂಡ ಸದಸ್ಯರು ಪ್ರಮಾಣ ವಚನ ಸ್ವೀಕರಿಸಿದರು

#### ಶ್ರೀ ಕೆ.ಟಿ. ಶ್ರೀಕಂಠೇಗೌಡ (ಪದವೀಧರ ಕ್ಷೇತ್ರ)

**ಸಭಾಪತಿಗಳು:–** ಪ್ರಶ್ನೋತ್ತರ ಅವಧಿ ಪ್ರಾರಂಭ ಮಾಡುವುದಕ್ಕೆ ಒಂದು ವಿಷಯ ಇದೆ. ನಮ್ಮ ಸದನದ ಪದ್ಧತಿ ಪ್ರಕಾರ ಸಮಯಕ್ಕೆ ಸರಿಯಾಗಿ ವಿರೋಧ ಪಕ್ಷದ ನಾಯಕರು ಮತ್ತು ಕೆಲವು ಗೌರವಾನ್ವಿತ ಸದಸ್ಯರು ಸಹಿ ಮಾಡಿರುವ ನಿಯಮ 59ರ ಅಡಿಯಲ್ಲಿ ನಿಲುವಳಿ ಸೂಚನೆಯ ನೋಟಿಸ್ ಕೊಟ್ಟಿದ್ದಾರೆ. ನಮ್ಮ ಸದನದ

ಪದ್ಧತಿಯಂತೆ ಐದರಿಂದ ಎಂಟು ನಿಮಿಷಗಳ, ಚರ್ಚಿಸಲು ಹೊರಟಿರುವ ವಿಷಯವನ್ನು ಏತಕ್ಕೆ ನಿಲುವಳಿ ಸೂಚನೆ ಅಡಿ ತೆಗೆದುಕೊಳ್ಳಬೇಕು ಎನ್ನುವ ವಿಚಾರದ ಬಗ್ಗೆ ವಿರೋಧ ಪಕ್ಷದ ನಾಯಕರು ಅಥವಾ ಸಹಿ ಹಾಕಿರುವ ಯಾರಾದರೂ ಒಬ್ಬ ಸದಸ್ಯರು ಮಾತನಾಡಬಹುದು. ಅವರು ಮಾತನಾಡಿದ್ದು ಮುಗಿದ ಮೇಲೆ ಆ ಕುರಿತು ಏನು ಮಾಡಬೇಕು ಎಂದು ನಾನು ತೀರ್ಮಾನ ಮಾಡುತ್ತೇನೆ.

**ಶ್ರೀ ಕೆ.ಎಸ್.ಈಶ್ವರಪ್ಪ (ವಿರೋಧ ಪಕ್ಷದ ನಾಯಕರು)**:–ಮಾನ್ಯ ಸಭಾಪತಿಗಳೆ, ನಿಲುವಳಿ ಸೂಚನೆ ಮಂಡನೆ ಮಾಡುವಾಗ ಸದನದ ಪದ್ಧತಿ ಪ್ರಕಾರ ಸಭಾನಾಯಕರು ಇರಬೇಕೇ ಬೇಡವೇ?

**ಸಭಾಪತಿಗಳು:–** ಮಾನ್ಯ ಸಭಾನಾಯಕರು ಗೃಹ ಸಚಿವರೂ ಆಗಿರುವುದರಿಂದ ಕೆಳಮನೆಯಲ್ಲಿ ಮುಖ್ಯವಾದ ಕೆಲಸ ಇದೆ ಎಂದು ಹೇಳಿದರು. ಅಲ್ಲಿಯ ತನಕ ಮಾನ್ಯ ಆಂಜನೇಯರವರು ಕಾರ್ಯನಿರ್ವಹಿಸುತ್ತಾರೆ. ಮಾನ್ಯ ಸಭಾನಾಯಕರು ಹೇಳಿದ್ದನ್ನು ನಾನು ಒಪ್ಪಿಕೊಂಡಿದ್ದೇನೆ. ಸ್ವಲ್ಪ ಸಮಯದ ನಂತರ ಮಾನ್ಯ ಸಭಾನಾಯಕರೇ ಬರುತ್ತಾರೆ.

**ಶ್ರೀ ಟಿ.ಎ.ಶರವಣ:**–ಮಾನ್ಯ ಸಭಾಪತಿಗಳೆ, ನಾವೂ ಕೂಡ ಕೊಟ್ಟಿದ್ದೇವೆ. ಅದನ್ನೂ ಗಮನದಲ್ಲಿಟ್ಟುಕೊಳ್ಳಬೇಕು ಎಂದು ವಿನಂತಿ ಮಾಡುತ್ತೇನೆ.

**ಸಭಾಪತಿಗಳು:–** ಖಂಡಿತ.

**2. ನಿಯಮ 59ರ ಮೇರೆಗೆ ನಿಲುವಳಿ ಸೂಚನೆ ಮಂಡಿಸಲು ಅನುಮತಿ ಕೋರಿ ಚರ್ಚೆ.**

**ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಕುಸಿದಿರುವುದು ಮತ್ತು ಪ್ರಾಮಾಣಿಕ ಅಧಿಕಾರಿಗಳಿಗೆ ಸೂಕ್ತ ರಕ್ಷಣೆ ಇಲ್ಲದೆ ಇತ್ತೀಚಗೆ ಡಿವೈಎಸ್‌ಪಿ ಶ್ರೀ.ಎಂ.ಕೆ ಗಣೇಶ್ ಆತ್ಮಹತ್ಯೆ ಮಾಡಿಕೊಂಡಿರುವ ಬಗ್ಗೆ.**

**ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಗಳೆ, ಇತ್ತೀಚಿಗೆ ಕರ್ನಾಟಕ ರಾಜ್ಯದಲ್ಲಿ ಸಾಮಾನ್ಯ ಜನರ ಎದೆ ಝಲ್ ಎನ್ನುವಂತಹ ಘಟನೆಗಳು ನಡೆಯುತ್ತಿವೆ. ಯಾರು ಶ್ರೀಸಾಮಾನ್ಯರ ರಕ್ಷಣೆ ಮಾಡಬೇಕೋ ಅಂತಹ ಪೊಲೀಸ್ ಅಧಿಕಾರಿಗಳ ಜೀವಕ್ಕೆ ರಕ್ಷಣೆ ಇಲ್ಲ ಎನ್ನುವ ವಾತಾವರಣ ಕರ್ನಾಟಕ ರಾಜ್ಯದಲ್ಲಿ ನಿರ್ಮಾಣವಾಗಿದೆ. ಮೊನ್ನೆ ತಾನೇ ವಿಧಾನಪರಿಷತ್ತಿನಲ್ಲಿ ನಾನು ಒಂದು ವಿಷಯ ಪ್ರಸ್ತಾಪ ಮಾಡಿದೆ. ಮೈಸೂರಿನ ಜಿಲ್ಲಾಧಿಕಾರಿ ಸೋದರಿ ಶಿಖಾ ಅವರಿಗೆ, ಮುಖ್ಯಮಂತ್ರಿಗಳ ಆಪ್ತರೇ ಒಬ್ಬರು ಭಯ–ಭೀತಿ ನಿರ್ಮಾಣ ಮಾಡಿ, ಬೆದರಿಕೆ ಹಾಕಿ, ಏಕವಚನದಲ್ಲಿ ಮಾತನಾಡಿ, ಕೆಲಸವನ್ನು ಮಾಡಿಕೊಡಲೇ ಬೇಕು ಎಂದು ಒತ್ತಡ ಹಾಕಿದಾಗ, ಸ್ವತಃ ಜಿಲ್ಲಾಧಿಕಾರಿಗಳೇ ಹೋಗಿ ಪೊಲೀಸ್ ಕಚೇರಿಯಲ್ಲಿ ಎಫ್‌ಐಆರ್ ದಾಖಲಿಸಿದ ಅಂಶವನ್ನು ನಾನು ಪ್ರಸ್ತಾಪ ಮಾಡಿದೆ. ತುಂಬಾ ನೋವಿನ ಸಂಗತಿ ಎಂದರೆ, ಆ ಜಿಲ್ಲಾಧಿಕಾರಿಗಳ ಬಗ್ಗೆ ಧಮಕಿ ಹಾಕಿದ ವ್ಯಕ್ತಿಯನ್ನು ಎಫ್‌ಐಆರ್ ಹಾಕಿದ ನಂತರ ಕೂಡ ಈ ನಿಮಿಷದ ತನಕ ಅರೆಸ್ಟ್ ಮಾಡದೇ ಇರುವುದು ಒಂದು ರೀತಿ ಸರ್ಕಾರಕ್ಕೆ ಶೋಭೆ ತರುತ್ತದೆಯೇ ಎಂದು ನಾನು ಪ್ರಶ್ನೆ ಮಾಡುವುದಕ್ಕೆ ಇಷ್ಟಪಡುತ್ತೇನೆ. ಜಿಲ್ಲಾಧಿಕಾರಿಯಂಥವರಿಗೆ ರಕ್ಷಣೆ ಇಲ್ಲಾ ಎನ್ನುವುದಾದರೆ ನಮಗೆ ಹೇಗೆ ರಕ್ಷಣೆ ಸಿಗುತ್ತದೆ ಎಂದು ಸಾಮಾನ್ಯ ಜನ ಮಾತನಾಡುವ ಸ್ಥಿತಿ ಕರ್ನಾಟಕ ರಾಜ್ಯದಲ್ಲಿ ನಿರ್ಮಾಣ ಆಗಿದೆ. ಮೊನ್ನೆ ನಾವು ಸದನವನ್ನು ಮುಂದೂಡಿ ಹೊರಟೆವು. ಆ ಅವಧಿಯಲ್ಲಿ ಮಡಿಕೇರಿಯ ಡಿವೈಎಸ್‌ಪಿ ಗಣಪತಿ ಎನ್ನುವವರ ಆತ್ಮಹತ್ಯೆ ಆಗುತ್ತದೆ. ಆ ಸಂದರ್ಭದಲ್ಲಿ ಅವರು ಒಂದು ಡೆತ್‌ನೋಟ್ ಇಟ್ಟು ಸತ್ತಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಸರ್ಕಾರ, ಆ ಡೆತ್‌ನೋಟ್‌ನಲ್ಲಿ ಯಾರ್‍ಯಾರ ಹೆಸರು ಇತ್ತೋ ಅವರ ಮೇಲೆ ಎಫ್‌ಐಆರ್ ಹಾಕಿ, ಕ್ರಿಮಿನಲ್ ಕೇಸ್ ಹಾಕಿ ಅರೆಸ್ಟ್ ಮಾಡುವ ಕೆಲಸ ಮಾಡಬೇಕು. ಈ ಪದ್ಧತಿ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಇದೆ. ಸುಪ್ರೀಂ ಕೋರ್ಟ್, ಆತ್ಮಹತ್ಯೆ ಮಾಡಿಕೊಂಡ ವ್ಯಕ್ತಿ ಏನು ಹೇಳುತ್ತಾನೋ ಅದು ಸಾಕ್ಷಿ ಆಗಿರುತ್ತದೆ ಎನ್ನುವ ಮಾತನ್ನು ಹೇಳಿದೆ. ನಮ್ಮ ಕರ್ನಾಟಕ ರಾಜ್ಯದ ದುರಾದೃಷ್ಟ ಎಂದರೆ, ಆತ್ಮಹತ್ಯೆ ಮಾಡಿಕೊಂಡ ಡಿವೈಎಸ್‌ಪಿ ಗಣಪತಿಯ ಮಕ್ಕಳು ಮತ್ತು ಹೆಂಡತಿ ಪೊಲೀಸ್ ಸ್ಟೇಷನ್‌ಗೆ ಹೋಗಿ ಗಣಪತಿಯವರ ಆತ್ಮಹತ್ಯೆಗೆ ಇಂಥಿಂಥ ವ್ಯಕ್ತಿಗಳು ಕಾರಣರಾಗಿದ್ದಾರೆ, ಇವರ ಬಗ್ಗೆ ಎಫ್‌ಐಆರ್ ಹಾಕಿ ಎಂದು ಬೇಡಿಕೊಳ್ಳಬೇಕಾಯಿತು. ವಿಜಯ ಕರ್ನಾಟಕ ದಿನಪತ್ರಿಕೆಯಲ್ಲಿ **"ಜಾರ್ಜ್ ವಿರುದ್ಧ ಚಾಜ್"**, **"ಸಚಿವ– ಪೊಲೀಸ್ ಅಧಿಕಾರಿಗಳ ಮೇಲೆ ಎಫ್‌ಐಆರ್ ದಾಖಲಿಸಲು ಧರಣಿ"** ಎಂದು ಬಂದಿರುವುದನ್ನು ನೋಡಿದೆ. ಇದು ಕರ್ನಾಟಕದ ದುರಾದೃಷ್ಟತ್ ಎಂದು ಹೇಳಬೇಕಾಗಿದೆ. ಒಂದು ಕಡೆ ಅಪ್ಪ ಸತ್ತಿದ್ದಾರೆ, ಮತ್ತೊಂದು ಕಡೆ ಗಂಡ ಸತ್ತಿದ್ದಾನೆ. ಸತ್ತಂಥವರು

ಡೆತ್‌ನೋಟ್‌ನಲ್ಲಿ, ನನ್ನ ಸಾವಿಗೆ ಜಾರ್ಜ್ ಕಾರಣ ಎಂದು ಬರೆದಿಟ್ಟಿದ್ದಾರೆ. ಆದರೆ, ಈ ನಿಮಿಷದ ತನಕ ಎಫ್‌ಐಆರ್ ಹಾಕಿಲ್ಲ ಎಂದರೆ ಕರ್ನಾಟಕ ರಾಜ್ಯದಲ್ಲಿ ಪ್ರಜಾಪ್ರಭುತ್ವ ಇದೆಯೇ? ಶ್ರೀಸಾಮನ್ಯರಿಗೆ ರಕ್ಷಣೆ ಸಿಗುತ್ತದೆಯೋ ಇಲ್ಲವೋ ಎನ್ನುವುದಕ್ಕೆ ಒಂದು ಸ್ಪಷ್ಟ ಉದಾಹರಣೆ ಎಂದರೆ ಗಣಪತಿ ಸಾವು, ಆತ್ಮಹತ್ಯೆ. ಪೊಲೀಸ್ ಠಾಣೆಗೆ ಹೋಗಿ ದೂರು ಕೊಟ್ಟರೂ ಕೂಡ, ಸುಪ್ರೀಂ ಕೋರ್ಟ್‌ನ ಜಡ್ಜ್‌ಮೆಂಟ್ ಮೀರಿ, ಇದು ಸಾಕ್ಷಿ ಅಲ್ಲ ಎನ್ನುವ ಮಾತನ್ನು ಹೇಳಿ ಎಫ್‌ಐಆರ್ ದಾಖಲು ಮಾಡಿಕೊಳ್ಳುವುದಕ್ಕೆ ಆಗುವುದಿಲ್ಲ ಎಂದರೆ ಕರ್ನಾಟಕ ರಾಜ್ಯದಲ್ಲಿ ಸರ್ಕಾರ ಇದೆಯೇ ಎಂಬ ಅನುಮಾನ ಬರುತ್ತದೆ. ಹಾಗಾದರೆ ಇನ್ನು ಮುಂದೆ ಯಾರು ಯಾರನ್ನು ಬೇಕಾದರೂ ಕೊಲೆ ಮಾಡಬಹುದು. ದೂರು ಕೊಡುವ ಪ್ರಶ್ನೆಯೇ ಇಲ್ಲ. ಏಕೆಂದರೆ ಎಫ್‌ಐಆರ್ ದಾಖಲು ಮಾಡಿಕೊಳ್ಳುವುದಿಲ್ಲ. ಸಂಬಂಧಪಟ್ಟವರನ್ನು ಅರೆಸ್ಟ್ ಮಾಡುವುದಿಲ್ಲ. ಕ್ರಿಮಿನಲ್ ಕೇಸ್ ಹಾಕುವುದಿಲ್ಲ. ಹಾಗಾದರೆ ಏಕೆ ದೂರು ಕೊಡಬೇಕು? ಇದು ನೋವಿನ ಸಂಗತಿಯಾಗಿದೆ. ಗಣಪತಿ ಎಂತಹ ವ್ಯಕ್ತಿ? ಅವರು ಪೊಲೀಸ್ ಇಲಾಖೆಗೆ ಸೇರಿದಾಗಿನಿಂದ ಯಾವ ಯಾವ ಭಾಗದಲ್ಲಿ ಹೋಗಿ ಕೆಲಸ ಮಾಡುತ್ತಾರೋ ಅಲ್ಲಿನ ರೌಡಿಗಳಿಗೆ ಸಿಂಹಸ್ವಪ್ನದಂತಿರುತ್ತಿದ್ದರು, ರೌಡಿಗಳು ಗಣಪತಿಯವರನ್ನು ಕಂಡರೆ ಭಯ ಪಡುತ್ತಿದ್ದರು. ಅವರು ಒಳ್ಳೆ ವಾಲಿಬಾಲ್ ಆಟಗಾರ. ಕೊಡಗು ಎಂದ ತಕ್ಷಣ ಒಂದು ರೀತಿ ಗಂಡುಗಲಿಗಳ ನಾಡು. ಆ ಕೊಡುಗಿನ ವೀರ ಆತ್ಮಹತ್ಯೆ ಮಾಡಿಕೊಳ್ಳಬೇಕಾದರೆ ಎಷ್ಟರ ಮಟ್ಟಿಗೆ ಆತನಿಗೆ ಮಾನಸಿಕವಾಗಿ ಹಿಂಸೆ ಅನುಭವಿಸಿರಬಹುದೆಂದು ಯೋಚನೆ ಮಾಡಿ. ನಾನು ಬಹಳ ನೊಂದು ಹೇಳುತ್ತಿದ್ದೇನೆ. ರಾಜ್ಯ ಸರ್ಕಾರ ಏಕೆ ಈ ರೀತಿ ಮಾಡುತ್ತಿದೆ ಎಂಬುದು ಇಲ್ಲಿ ಪ್ರಶ್ನೆ ಬಂದಿರುವುದು. ನಾನು ಇವತ್ತಿನ ಸಂಯುಕ್ತ ಕರ್ನಾಟಕ ದಿನಪತ್ರಿಕೆಯನ್ನು ನೋಡಿದೆ. "ನಿಜ ಹೇಳಿ ಸಿದ್ದರಾಮಣ್ಣ, ಇದು ಆತ್ಮ ವಂಚನೆ ಅಲ್ಲವೆ" ಎಂದು ಬರೆದಿದ್ದಾರೆ. ಮುಕ್ಕಾಲು ಪಾಲು ಸಂಯುಕ್ತ ಕರ್ನಾಟಕ ಪತ್ರಿಕೆಯ ಮುಖಪುಟ (ಹೆಡ್‌ಲೈನ್)ದಲ್ಲಿ ಈ ರೀತಿಯ ಆರ್ಟಿಕಲ್, ನನಗೆ ಗೊತ್ತಿರುವ ಪ್ರಕಾರ ನನ್ನ ಜೀವನದಲ್ಲಿ ಮೊದಲ ಸಲ ನೋಡುತ್ತಿರುವುದು. ಒಬ್ಬ ಮುಖ್ಯಮಂತ್ರಿಗೆ ಆತ್ಮವಂಚನೆ ಅಲ್ಲವೆ ಎಂದು ಈ ರೀತಿ ಕೇಳುತ್ತಿರುವುದು ಮೊದಲ ಸಲ. ಏನೇನೋ ಸಬೂಬು ಹೇಳುತ್ತಿದ್ದಾರೆ. ತುಂಬಾ ನೋವಿನ ಸಂಗತಿ ಏನೆಂದರೆ, ಇದನ್ನು ಮುಚ್ಚಿ ಹಾಕುವ ಪ್ರಯತ್ನ ಎಷ್ಟರ ಮಟ್ಟಿಗೆ ಮಾಡುತ್ತಿದ್ದಾರೆಂದರೆ ಅಲ್ಲಿ ಡೆತ್ ನೋಟೇ ಇರಲಿಲ್ಲ ಎಂದು ಹೇಳುತ್ತಿದ್ದಾರೆ. ಇವರು ಒಬ್ಬ ಮಂತ್ರಿಯನ್ನು ರಕ್ಷಣೆ ಮಾಡಬೇಕೆನ್ನುವ ತೀರ್ಮಾನ ಮಾಡಿಬಿಟ್ಟಿದ್ದಾರೆ ಎನ್ನುವುದಕ್ಕೆ ಅನೇಕ ಉದಾಹರಣೆಗಳನ್ನು ನಾನು ಕೊಡಬಲ್ಲೆ. ಒಂದು ಕಡೆ, ಮಾನ್ಯ ಗೃಹ ಮಂತ್ರಿಗಳು, ಮುಖ್ಯಮಂತ್ರಿಗಳು ಹೇಳಿಕೆಯನ್ನು ಕೊಡುತ್ತಾರೆ. "ಡಿವೈಎಸ್‌ಪಿ ಆತ್ಮಹತ್ಯೆಗೂ, ಜಾರ್ಜ್‌ಗೂ ಸಂಬಂಧವಿಲ್ಲ" ಗೃಹ ಮಂತ್ರಿ. "ಗಣಪತಿ ಅವರು ಆತ್ಮಹತ್ಯೆಗೂ ಮುನ್ನ ಜಾರ್ಜ್‌ರವರ ಹೆಸರು ಪ್ರಸ್ತಾಪಸಿದ್ದಾರೆ ಅಷ್ಟೆ, ಅದನ್ನೇ ಸಾಕ್ಷಿ ಎಂದು ಪರಿಗಣಿಸಲು ಸಾಧ್ಯವಿಲ್ಲ" ಗೃಹ ಸಚಿವರು ಸುಪ್ರೀಮ್ ಕೋರ್ಟ್‌ಗಿಂತ ದೊಡ್ಡವರೆ? ಸುಪ್ರೀಮ್ ಕೋರ್ಟ್ ಜಡ್ಜ್‌ಮೆಂಟ್‌ನಲ್ಲಿ ಬಹಳ ಸ್ಪಷ್ಟವಾಗಿ ಹೇಳಿದೆ. ಆತ್ಮಹತ್ಯೆ ಮಾಡಿಕೊಳ್ಳುತ್ತಿರುವ ವ್ಯಕ್ತಿ ಹೇಳಿಕೆ ಕೊಟ್ಟಿದ್ದು, ಡೆತ್ ನೋಟ್ ಕೊಟ್ಟಿದ್ದು, ಇದು ಸಾಕ್ಷಿ, ಇದನ್ನು ಪರಿಗಣಿಸಬೇಕು ಎಂದು ಸುಪ್ರಿಮ್‌ಕೋರ್ಟ್ ಹೇಳಿದೆ. ಅವರು ಟಿ.ವಿ. ಮಾಧ್ಯಮದಲ್ಲಿ ಹೇಳಿರುವುದಾಗಲಿ, ಡೆತ್ ನೋಟ್ ಕೊಟ್ಟಿದ್ದಕ್ಕಾಗಲಿ, ಜಾರ್ಜ್‌ರವರು ಆ ಆತ್ಮಹತ್ಯೆಗೆ ಸಂಬಂಧವಿಲ್ಲ ಎನ್ನುವ ಮಾತನ್ನು ಸ್ವತಃ ಗೃಹ ಮಂತ್ರಿಗಳು ಹೇಳುತ್ತಾರೆ. "ಗಣಪತಿ ಆತ್ಮಹತ್ಯೆಗೆ ಬೇರೆ ಕಾರಣಗಳು ಇರಬಹುದು" ಎಂದು ಮುಖ್ಯಮಂತ್ರಿಗಳು ಹೇಳುತ್ತಾರೆ. ಇದು ಅವರದ್ದೇ ಊಹೆ. ನಾನು ಮುಖ್ಯಮಂತ್ರಿಗಳನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ, ಈ ರೀತಿ ಇಡೀ ಸರ್ಕಾರದ ಅಧಿಕಾರಿಗಳು, ಪ್ರಾಮಾಣಿಕವಾಗಿ ಕೆಲಸ ಮಾಡುವವರು, ಕಂದಾಯ ಇಲಾಖೆ ಇರಬಹುದು, ಪೊಲೀಸ್ ಇಲಾಖೆ ಇರಬಹುದು, ಗೂಂಡಾಗಳನ್ನು, ರೌಡಿಗಳನ್ನು ಹತ್ತಿಕ್ಕಬೇಕು, ಸರ್ಕಾರದ ಆಸ್ತಿಯನ್ನು ಲೂಟಿ ಮಾಡಬೇಕು ಎನ್ನುವಂತಹ ವ್ಯಕ್ತಿಗಳಿಗೆ ಸಿಂಹಸ್ವಪ್ನವಾಗಿ ನಾನು ಏಕಿರಬೇಕೆಂದು ಅನಿಸುವುದಿಲ್ಲವೆ? ನಾನು ಮೊನ್ನೆ ಮರಳು ಬಗ್ಗೆ ಮಾತನಾಡಬೇಕಾದರೆ ಹೇಳಿದೆ, ಸರ್ ನನ್ನ ಹೆಂಡತಿ ಮಕ್ಕಳನ್ನು ಯಾರು ರಕ್ಷಣೆ ಮಾಡುತ್ತಾರೆ ಎಂದು ಎಸ್.ಪಿ.ಯವರು ಹೇಳುತ್ತಾರೆ. ನಾನು ಈ ವಿಧಾನ ಪರಿಷತ್ತಿನಲ್ಲಿ ಹೇಳದೆ ಮತ್ತೆ ಎಲ್ಲಿ ಹೇಳಲಿ? ನಾನು ಗೃಹ ಸಚಿವರ ಬಗ್ಗೆ, ಮುಖ್ಯಮಂತ್ರಿಗಳ ಬಗ್ಗೆ, ಇಡೀ ಕರ್ನಾಟಕ ರಾಜ್ಯದ ಜನರಿಗೆ ಒಂದು ರೀತಿ ಸರ್ಕಾರದವರು ಆತ್ಮವಂಚನೆ ಮಾಡಿಕೊಳ್ಳುತ್ತಿದ್ದಾರೆ ಎಂದು ನೇರವಾಗಿ ಸಂಯುಕ್ತ ಕರ್ನಾಟಕದಂತಹ ಪತ್ರಿಕೆಯಲ್ಲಿ ಪ್ರಶ್ನೆ ಹಾಕಿದರು ಕೂಡ ಮುಖ್ಯಮಂತ್ರಿಗಳು ಸಚಿವ ಸಂಪುಟ ಸಭೆಯಲ್ಲಿ

ಎಲ್ಲಾ ಸಚಿವರು ಕೂಡ ಜಾರ್ಜ್‌ರವರ ಬೆಂಬಲಕ್ಕೆ ನಿಂತುಕೊಳ್ಳಬೇಕೆಂದು ಹೇಳಿಕೆ ಕೊಡುತ್ತಾರೆ. ಅದು ಪತ್ರಿಕೆಯಲ್ಲಿ ಬಂದಿದೆ. "ಮುಖ್ಯಮಂತ್ರಿ ಸಿದ್ದರಾಮಯ್ಯರವರಿಗೆ ಹಿರಿಯ ಕಾಂಗ್ರೆಸ್ ಮುಖಂಡ ಜನಾರ್ಧನ ಪೂಜಾರಿಯವರ ತಾಕೀತು" ಎಂದು ಪತ್ರಿಕೆಯಲ್ಲಿ ಬಂದಿದೆ. ಒಂದು ಕಡೆ ಮಾನ್ಯ ಜನಾರ್ಧನ ಪೂಜಾರಿಯವರು "ಸಾಮಾನ್ಯವಾಗಿ ಸಾಯುವವರು ಸುಳ್ಳು ಹೇಳುವುದಿಲ್ಲ, ಸಾವಿನ ಮುನ್ನ ನೀಡಿರುವ ಹೇಳಿಕೆಯನ್ನು ಮಾನ್ಯ ಮಾಡಬೇಕು ಎಂದು ಸುಪ್ರೀಂ ಕೋರ್ಟ್ ಸಹ ಹೇಳಿದೆ. ಆದರೆ ಸಿದ್ದರಾಮಯ್ಯ ಸರ್ಕಾರ ಕೆ.ಜೆ.ಜಾರ್ಜ್‌ರವರನ್ನು ರಕ್ಷಿಸಲು ಪ್ರಯತ್ನಿಸುತ್ತಿದೆ" ಎಂದು ಹೇಳಿದ್ದಾರೆ. ಸಿದ್ದರಾಮಯ್ಯನವರ ನಡೆಯಿಂದ ಕಾಂಗ್ರೆಸ್.....ಅವರ ಪಕ್ಷದ ಬಗ್ಗೆ ನಾನು ಮಾತನಾಡುವುದಿಲ್ಲ. ಅವರು ಒಬ್ಬ ಹಿರಿಯ ಕಾಂಗ್ರೆಸ್ ನಾಯಕರು, ಕೇಂದ್ರ ಸಚಿವರಾಗಿದ್ದವರು, ರಾಜ್ಯದಲ್ಲಿ ಸಾಕಷ್ಟು ಜವಾಬ್ದಾರಿಯನ್ನು ಇಟ್ಟುಕೊಂಡಿರುವಂಥವರು ನೀವು ಇವರನ್ನು ಡಿಫೆಂಡ್ ಮಾಡಿಕೊಳ್ಳುವುದಕ್ಕೆ ಹೋಗಬೇಡಿ, ನೀವು ತಕ್ಷಣ ಜಾರ್ಜ್‌ರವರ ರಾಜೀನಾಮೆಯನ್ನು ತೆಗೆದುಕೊಳ್ಳಿ ಎಂದು ಹೇಳುತ್ತಾರೆ. ಇದು ಪತ್ರಿಕೆಗಳಲ್ಲಿ ಜನರ ಮಧ್ಯೆ ಇರುವಂತಹ ಭಾವನೆಗಳು. ಇಂತಹ ಸಂದರ್ಭದಲ್ಲಿ ನಾನು ಈ ರಾಜ್ಯ ಸರ್ಕಾರಕ್ಕೆ ಏನು ಹೇಳುವುದಕ್ಕೆ ಹೊರಟಿದ್ದೇನೆಂದರೆ,....

**ಸಭಾಪತಿಯವರು:–** ಈಗ ಹತ್ತು ನಿಮಿಷವಾಯಿತು. ಇನ್ನು ಎರಡು ನಿಮಿಷಗಳಲ್ಲಿ ತಮ್ಮ ಮಾತನ್ನು ಮುಗಿಸಿ.

**ಶ್ರೀ ಐವನ್ ಡಿ'ಸೋಜಾ(ಸರ್ಕಾರದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ಪ್ರಿಲಿಮಿನರಿ ಸಬ್‌ಮಿಷನ್‌ನಲ್ಲಿ ನಾವೇನು ಮಾತನಾಡಿಲ್ಲ, ಅವರು ಬೇಗ ಮಾತನಾಡಿ ಮುಗಿಸಲಿ. ನಾವು ಸರ್ಕಾರದ ಪರವಾಗಿ ಹೇಳುತ್ತೇವೆ. ಆಮೇಲೆ ಮುಂದಕ್ಕೆ ಹೋಗಬಹುದು.

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರೆ, ತಾವು ನಿಲುವಳಿ ಸೂಚನೆಯನ್ನು ಏಕೆ ಕೊಟ್ಟಿದ್ದೀರಿ ಎಂಬುದನ್ನು ಎರಡು ನಿಮಿಷದಲ್ಲಿ ಹೇಳಿದರೆ ನಾನು ಸರ್ಕಾರಕ್ಕೆ ಅವಕಾಶ ಕೊಡುತ್ತೇನೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್(ವಿರೋಧ ಪಕ್ಷದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ಇಡೀ ರಾಜ್ಯದಲ್ಲಿ ಇದು ಚರ್ಚೆಯಾಗುತ್ತಿದೆ, ಎರಡು ನಿಮಿಷದಲ್ಲಿ ಮಾತನಾಡುವುದಕ್ಕಾಗುವುದಿಲ್ಲ. ಇದರಲ್ಲಿ ತುಂಬಾ ಸಂಗತಿಗಳಿವೆ.

**ಶ್ರೀ ಬಿ.ಜೆ.ಪುಟ್ಟಸ್ವಾಮಿ:–** ಮಾನ್ಯ ಸಭಾಪತಿಯವರೇ, ಇವತ್ತು ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ವಿಫಲವಾಗಿ ಪೊಲೀಸ್‌ನವರೇ ಆತ್ಮಹತ್ಯೆ ಮಾಡಿಕೊಳ್ಳುವ ಪರಿಸ್ಥಿತಿ ಬಂದಾಗ ನಾವು ಐದು ನಿಮಿಷ, ಎರಡು ನಿಮಿಷ ಎಂದು ಮಾತನಾಡುವುದಕ್ಕಾಗುವುದಿಲ್ಲ. ದಯವಿಟ್ಟು ಸ್ವಲ್ಪ ಹೆಚ್ಚು ಸಮಯ ಕೊಡಿ.

**ಸಭಾಪತಿಯವರು:–** ನಾನು ಈ ವಿಷಯ ಎರಡು ನಿಮಿಷಕ್ಕೆ ನಿಲ್ಲಿಸಿ ಎಂದು ಹೇಳುತ್ತಿಲ್ಲ. ನಿಲುವಳಿ ಸೂಚನೆಗೆ ಏಕೆ ತೆಗೆದುಕೊಳ್ಳಬೇಕು ಎಂದು ಹೇಳುವುದಕ್ಕೆ ಇನ್ನು ಎರಡು–ಮೂರು ನಿಮಿಷ ಕಾಲಾವಕಾಶ ಕೊಡುತ್ತೇನೆ. ಆಮೇಲೆ ನಿಲುವಳಿ ಸೂಚನೆಯಲ್ಲಿ ತೆಗೆದುಕೊಳ್ಳುವುದಕ್ಕೆ ಬರುತ್ತದೆಯೋ ಇಲ್ಲವೋ ಎಂದು ಸರ್ಕಾರ ಏನು ಹೇಳುತ್ತದೆ ಎಂಬುದನ್ನು ಕೇಳಿ ನಾನು ನಿರ್ಣಯ ಹೇಳುತ್ತೇನೆ. ಆಮೇಲೆ ಮುಂದುವರೆಸೋಣ. ಈ ಚರ್ಚೆಯೇ ಕ್ಲೋಸ್ ಅಲ್ಲ. ಜೆಡಿಎಸ್ ಗೌರವಾನ್ವಿತ ಸದಸ್ಯರು ಕೂಡ ಇದೇ ವಿಷಯದ ಬಗ್ಗೆ ನೋಟಿಸ್ ಕೊಟ್ಟಿದ್ದಾರೆ. ಅವರಿಗೂ ನಾಲ್ಕೈದು ನಿಮಿಷ ಅವಕಾಶ ಕೊಡಬೇಕಾಗುತ್ತದೆ. ನಾನು ಐದು ನಿಮಿಷ ಹೇಳುತ್ತಿರುವುದು ಇಡೀ ವಿಷಯಕ್ಕೆ ಅಲ್ಲ. ನಿಲುವಳಿ ಸೂಚನೆಯಲ್ಲಿ ತೆಗೆದುಕೊಳ್ಳಬೇಕೋ ಬೇಡವೋ ಎನ್ನುವುದರ ಬಗ್ಗೆ ಚರ್ಚೆ ಅಷ್ಟೆ.

**ಶ್ರೀ ಬಿ.ಜೆ.ಪುಟ್ಟಸ್ವಾಮಿ:–** ಮಾನ್ಯ ಸಭಾಪತಿಯವರೇ, ನಾನು explain ಮಾಡುವುದಕ್ಕೆ ಎರಡು ನಿಮಿಷ ಹೆಚ್ಚಾಗಿ ಕೊಡಿ ಎಂದು ಹೇಳಿದೆ.

**ಸಭಾಪತಿಯವರು:–** ನಾನು ಹತ್ತು ನಿಮಿಷ ಕೊಟ್ಟಿದ್ದೇನೆ. ಇನ್ನು ಎರಡು–ಮೂರು ನಿಮಿಷ ಮಾತನಾಡಿ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ಇಲ್ಲಿ ಏನಾಗುತ್ತಿದೆ ಎಂದರೆ ಅವರು ಮಾನಸಿಕ ಅಸ್ವಸ್ಥರು. ಹೀಗಾಗಿ ಯಾವುದೋ ಕಾರಣಕ್ಕೆ ಆತ್ಮಹತ್ಯೆ ಮಾಡಿಕೊಂಡರು ಎಂದು ಸೃಷ್ಟಿ ಮಾಡುತ್ತಿದ್ದಾರೆ. ಡೆತ್ ನೋಟ್ ಅಲ್ಲಿ ಇತ್ತು. ಪತ್ರಿಕೆಗಳಲ್ಲಿ ಬಂದಿದೆ, ನಾವು ಟಿ.ವಿ. ಮಾಧ್ಯಮಗಳಲ್ಲಿ ಕಣ್ಣಿಂದ ನೋಡಿದ್ದೇವೆ. ಡೆತ್ ನೋಟ್ ಎಲ್ಲಿ ಹೋಯಿತು? ಈ ಒಂದು ಆತ್ಮಹತ್ಯೆಯನ್ನು ನಾನು ಕೊಲೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ಸಾವನ್ನು ಮುಚ್ಚಿ ಹಾಕುವ ಪ್ರಯತ್ನ ನಡೆಸುತ್ತಿದ್ದಾರೆ. ಆ ಡೆತ್ ನೋಟ್ ಚೀಟಿಯನ್ನು ಕಿಟಕಿಯಿಂದ ಹರಿದು ಬಿಸಾಕಿದ್ದಾರೆ. ಮಾನಸಿಕ ಅಸ್ವಸ್ಥ ಅಲ್ಲ ಎನ್ನುವುದಕ್ಕೆ ಅವರು ಮಾನಸಿಕವಾಗಿ ಅಷ್ಟೊಂದು ಸಮಸ್ಯೆ ಇರಲಿಲ್ಲ ಎಂದು ಡಾ॥ಕಿರಣ್‌ಕುಮಾರ್‌ರವರು ಹೇಳುತ್ತಾರೆ. ನಿವೃತ್ತ ಎ.ಸಿ.ಪಿ. ಅಶೋಕ್ ಕುಮಾರ್‌ರವರು ಹೇಳುತ್ತಾರೆ, ಶ್ರೀ ಗಣಪತಿಯವರು ಇಂಟರ್‌ನೆಟ್, ಲ್ಯಾಪ್‌ಟಾಪ್ ಬಳಸುವುದರಲ್ಲಿ ನಿಪುಣರು, ಅವರ ಎಲ್ಲಾ ವಿವರ ಅವರ ಲ್ಯಾಪ್‌ಟಾಪ್‌ನಲ್ಲಿರುವ ಸಾಧ್ಯತೆ ಇದೆ. ಅಲ್ಲದೆ ಅವರ ಹತ್ತಿರ ಪುಟ್ಟ ಪರ್ಸನಲ್ ಡೈರಿ ಕೂಡ ಇರುತ್ತದೆ. ಇವುಗಳು ಎಲ್ಲಿ? ಇದನ್ನು ನಾನು ಹೇಳುತ್ತಿರುವುದಲ್ಲ, ನಿವೃತ್ತ ಎ.ಸಿ.ಪಿ. ಅಶೋಕ್‌ಕುಮಾರ್‌ರವರು ಕೇಳುತ್ತಿದ್ದಾರೆ. ನಾನು ಕೈಮುಗಿದು ಸರ್ಕಾರಕ್ಕೆ ಪ್ರಾರ್ಥನೆ ಮಾಡುತ್ತೇನೆ, ಇಡೀ ಕರ್ನಾಟಕ ರಾಜ್ಯ ಜನ ಇವತ್ತು ಗಣಪತಿಯ ಸಾವು, ಅದು ಆತ್ಮಹತ್ಯೆ, ಜಾರ್ಜ್ ಅವರ ಪ್ರೇರಣೆಯಿಂದ, ಅವರ ಒತ್ತಡದಿಂದ, ಮಾನಸಿಕ ಹಿಂಸೆಯಿಂದ, ಅವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎನ್ನುವುದಕ್ಕೆ ಅವರು ಡೆತ್ ನೋಟ್ ಕೊಟ್ಟಿದ್ದಾರೆ, ಟಿ.ವಿ.ಸಂದರ್ಶನ ಕೊಟ್ಟಿದ್ದಾರೆ ಮತ್ತೆ ಅವರ ಹತ್ತಿರ ರಿವಾಲ್ವರ್ ಕೂಡ ಇತ್ತು. ಅವರು ಮಾನಸಿಕ ಅಸ್ವಸ್ಥರು ಎಂದರೆ ಅವರ ಕೈಯಲ್ಲಿ ರಿವಾಲ್ವರ್ ಇರಬೇಕೋ ಬೇಡವೋ ಎಂಬುದು ಇವರಿಗೆ ಗೊತ್ತಿರಲಿಲ್ಲವೆ? ಅದಕೋಸ್ಕರ ಇಡೀ ರಾಜ್ಯದ ಜನರ ಅಪೇಕ್ಷೆ ಇದೆ, ಯಾರೇ ಎಷ್ಟೇ ದೊಡ್ಡ ವ್ಯಕ್ತಿಯಾಗಲಿ, ಅವರು ಪ್ರಜಾಪ್ರಭುತ್ವದಲ್ಲಿ ಶ್ರೀಸಾಮಾನ್ಯನಿಗಿಂತ ದೊಡ್ಡ ವ್ಯಕ್ತಿ ಅಲ್ಲ. ಮಾನ್ಯ ಜಾರ್ಜ್ ಮೇಲೆ ತಕ್ಷಣ ಎಫ್.ಐ.ಆರ್. ಹಾಕಿ. ಇದು ಭಾರತೀಯ ಜನತಾ ಪಾರ್ಟಿಯ ಒತ್ತಾಯ, ರಾಜ್ಯ ಜನತೆಯ ಒತ್ತಾಯ. ಅವರ ಮೇಲೆ ಕ್ರಿಮಿನಲ್ ಕೇಸ್ ಹಾಕಿ, ಅವರನ್ನು ಅರೆಸ್ಟ್ ಮಾಡಿ, ಅವರನ್ನು ಮಂತ್ರಿಮಂಡಲದಿಂದ ಕೈಬಿಡಿ. 'ಅವರನ್ನು ಮಂತ್ರಿಮಂಡಲದಿಂದ ಏಕೆ ಕೈಬಿಡಬೇಕು, ಅವರ ಹಿಂದೆ ಎಲ್ಲರೂ ನಿಂತುಕೊಂಡುಬಿಡಿ' ಎಂದು ಮಾನ್ಯ ಮುಖ್ಯಮಂತ್ರಿಗಳೇ ಹೇಳಿದ್ದಾರೆ. ಹೀಗಿರಬೇಕೆಂದರೆ, ಸ್ವತಃ ಮುಖ್ಯಮಂತ್ರಿಯವರೇ ಜಾರ್ಜ್‌ರವರ ರಕ್ಷಣೆ ಮಾಡುವುದಕ್ಕೆ ಹೊರಟಿರುವ ಸಂದರ್ಭದಲ್ಲಿ, ಜಾರ್ಜ್‌ರವರು ಸ್ವತಃ ಅವರ ಮೇಲೆ ಆರೋಪ ಬಂದಂತಹ ಸಂದರ್ಭದಲ್ಲಿ ಈಗಾಗಲೇ ಡೆತ್ ನೋಟ್, ಅದಕ್ಕೆ ಸಿಗುವಂತಹ ಬೇರೆ ಬೇರೆ ಸಾಕ್ಷಿಗಳನ್ನು ಇವರು ಮುಚ್ಚಿ ಹಾಕುವ ಪ್ರಯತ್ನ ಮಾಡಿತ್ತಿರುವಂತಹ ಸಂದರ್ಭದಲ್ಲಿ ಅವರು ಮಂತ್ರಿಯಾಗಿ ಈ ಸಚಿವ ಸಂಪುಟದಲ್ಲಿ ಉಳಿದರೆ ಸತ್ಯ ಹೊರಗೆ ಬರುವುದಿಲ್ಲ. ಕೊಲೆಯನ್ನು ಮುಚ್ಚಿ ಹಾಕುವ ಪ್ರಯತ್ನ ನಡೆಸುತ್ತಿದ್ದಾರೆಂದು ಎಲ್ಲಾ ಪತ್ರಿಕೆಗಳಲ್ಲಿ ಇದೆ. ವಿಜಯ ಕರ್ನಾಟಕ, ವಿಜಯವಾಣಿ, ಹೊಸ ದಿಗಂತ, ಪ್ರಜಾವಾಣಿ, ಉದಯವಾಣಿ, ಈ ಎಲ್ಲಾ ಪತ್ರಿಕೆಗಳಲ್ಲಿ ಇದನ್ನು ನಾನು ನೋಡಿದ್ದೇನೆ. ನಾನು ವಿವರಕ್ಕೆ ಏಕೆ ಹೋಗುವುದಿಲ್ಲವೆಂದರೆ, ತಾವು ಈಗ ನನಗೆ ಅವಕಾಶ ಕೊಡಬೇಕು. ಏಕೆಂದರೆ ಪ್ರಶ್ನೋತ್ತರ ಅವೆಲ್ಲಾ ಪ್ರತಿ ದಿನ ಇರುತ್ತದೆ, ಇಡೀ ಕರ್ನಾಟಕ ರಾಜ್ಯದ ಜನ ನೋಡುತ್ತಿದ್ದಾರೆ. ಪ್ರಶ್ನೋತ್ತರವನ್ನು ದಯವಿಟ್ಟು ಪಕ್ಕಕ್ಕೆ ಸರಿಸಿ, ಇದು ಇಡೀ ರಾಜ್ಯದ ಪ್ರಜಾಪ್ರಭುತ್ವ ಅಸ್ತಿತ್ವದ ಪ್ರಶ್ನೆ. ಕಾನೂನು ಸುವ್ಯವಸ್ಥೆ ಎಷ್ಟರ ಮಟ್ಟಿಗೆ ರಾಜ್ಯದಲ್ಲಿ ಹಾಳಾಗಿ ಹೋಗಿದೆ ಎಂದರೆ ಜಿಲ್ಲಾಧಿಕಾರಿಗಳಿಗೆ ರಕ್ಷಣೆ ಇಲ್ಲ, ಎಸ್.ಪಿ.ಯವರಿಗೆ ರಕ್ಷಣೆ ಇಲ್ಲ, ಡಿವೈಎಸ್‌ಪಿಗೆ ರಕ್ಷಣೆ ಇಲ್ಲ, ಕಂದಾಯ ಇಲಾಖೆಯ ಅಧಿಕಾರಿಗಳಿಗೆ ರಕ್ಷಣೆ ಇಲ್ಲ, ಪೊಲೀಸ್ ಇಲಾಖೆಯ ಅಧಿಕಾರಿಗಳಿಗೆ ರಕ್ಷಣೆ ಇಲ್ಲ. ಜನ ಸಾಮಾನ್ಯರಿಗೆ ಹೇಗೆ ರಕ್ಷಣೆ ಸಿಕ್ಕುತ್ತದೆ? ಮುಖ್ಯಮಂತ್ರಿಗಳು ಬಂದು ಘೋಷಣೆ ಮಾಡಬೇಕಾಗಿತ್ತು. ನೀವು ನಿಲುವಳಿ ಸೂಚನೆಯನ್ನು ಪ್ರಸ್ತಾಪ ಮಾಡಬೇಡಿ.. . . ಎಲ್ಲಾ ಪತ್ರಿಕೆಗಳನ್ನು ನಾನು ನೋಡಿದ್ದೇನೆ, ನನಗೆ ಬಂದಿರುವಂತಹ ವರದಿಗಳು ನನ್ನ ಹತ್ತಿರ ಇವೆ, ಪ್ರಾಮಾಣಿಕವಾಗಿ ಪೊಲೀಸ್ ಇಲಾಖೆಯಲ್ಲಿ ಇರುವಂತಹ ವ್ಯಕ್ತಿಗಳು, ಈಗಾಗಲೇ, ಮುಖ್ಯಮಂತ್ರಿಗಳಿಗೆ ಈ ಬಗ್ಗೆ ಸುದ್ದಿಯನ್ನು ಕೊಟ್ಟಿರುತ್ತಾರೆ. ಇದರಲ್ಲಿ ಸಚಿವರಾದ ಶ್ರೀಯುತ ಜಾರ್ಜ್ ರವರ ಕೈವಾಡ ಇದೆ ಎಂದು ಶ್ರೀಸಾಮಾನ್ಯ ಜನರು ಹೇಳುತ್ತಿದ್ದಾರೆ. ಈ ವಿಚಾರ ಮುಖ್ಯಮಂತ್ರಿಗಳಿಗೆ ಗೊತ್ತಾಗುವುದಿಲ್ಲವೇ? ಜಾರ್ಜ್ ಅವರು ನನಗೆ ಆಪ್ತ ಹೌದು. ಆದರೆ, ಈ ಒಂದು ಆತ್ಮಹತ್ಯೆಯಲ್ಲಿ ಅವರ ಕೈವಾಡ ಇದೆ ಎಂದು ಗೊತ್ತಾಗಿರುವುದರಿಂದ ನಾನು ಅವರನ್ನು ಸಸ್ಪೆಂಡ್‌ನಲ್ಲಿ ಇಡುತ್ತೇನೆ,

ರಾಜೀನಾಮೆಯನ್ನು ತೆಗೆದುಕೊಳ್ಳುತ್ತೇನೆಂದು ಅವರು ಹೇಳಬೇಕಾಗಿತ್ತು. ಮತ್ತೆ, ಎಫ್ಐಆರ್, ಹಾಕಿಸಿ, ಅವರ ಮೇಲೆ ಕ್ರಿಮಿನಲ್ ಕೇಸ್ ಹಾಕಿಸಿ, ಅವರನ್ನು ಅರೆಸ್ಟ್ ಮಾಡಿಸಿ, ರಾಜೀನಾಮೆಯನ್ನು ತೆಗೆದುಕೊಂಡು, ಇದನ್ನು ಸಿಬಿಐ.ಗೆ ವಹಿಸುತ್ತೇನೆಂದು ಒಂದೇ ಒಂದು ಮಾತನ್ನು ಮುಖ್ಯಮಂತ್ರಿಗಳು ಹೇಳಿದ್ದರೆ ನಿಜಕ್ಕೂ ಕೂಡ ಕರ್ನಾಟಕದ ಜನರಿಗೆ ಈ ಮುಖ್ಯಮಂತ್ರಿಗಳ ಬಗ್ಗೆ, ಸರ್ಕಾರದ ಬಗ್ಗೆ ಒಂದು ರೀತಿಯ ವಿಶ್ವಾಸ ಬರುತ್ತಿತ್ತು. ಇವರು ನಮ್ಮ ಜೊತೆಗೆ ಇದ್ದರೆ ಸಾಕು, ಅಂತಹವರನ್ನು ರಕ್ಷಣೆ ಮಾಡುತ್ತೇನೆ, ನಾನು ರಕ್ಷಣೆ ಮಾಡುವುದಷ್ಟೇ ಅಲ್ಲ, ಸಚಿವ ಸಂಪುಟದ ಎಲ್ಲಾ ಸದಸ್ಯರು ರಕ್ಷಣೆ ಮಾಡಬೇಕೆಂದು ಫರ್ಮಾನು ಹೊರಡಿಸಿದ್ದಾರೆ. ಕರ್ನಾಟಕ ರಾಜ್ಯದಲ್ಲಿ ಏನು ನಡೆಯುತ್ತಿದೆ? ಸಚಿವ ಸಂಪುಟದಲ್ಲಿ ಕೆಲವರನ್ನು ಕೈಬಿಟ್ಟು ಒಳ್ಳೆಯವರನ್ನು ಸಚಿವ ಸಂಪುಟಕ್ಕೆ ತೆಗೆದುಕೊಂಡಿದ್ದಾರೆ. ಈ ಸಚಿವರುಗಳಾದರೂ ಈ ಬಗ್ಗೆ ಹೇಳಬೇಕಲ್ಲವೇ? ಇಡೀ, ಕರ್ನಾಟಕ ರಾಜ್ಯದಲ್ಲಿ ಜನರಿಗೆ ಈ ವಿಚಾರದಲ್ಲಿ ತುಂಬಾ ಸ್ಪಷ್ಟವಾಗಿದೆ. ಇದು ಆತ್ಮಹತ್ಯೆ ಅಲ್ಲ, ಇದು ಕೊಲೆ, ಇದರ ಹಿಂದೆ ಜಾರ್ಜ್ ರವರು ಇದ್ದಾರೆ, ಇವರನ್ನು ನೀವು ಖಂಡಿತವಾಗಿ ರಕ್ಷಣೆ ಮಾಡಬೇಡಿ ಎಂದು ಮುಖ್ಯಮಂತ್ರಿಗಳಿಗೆ ತುಂಬಾ ಆಪ್ತರು ಇದ್ದವರು ಹೇಳಬೇಕಾಗಿತ್ತು ಅಲ್ಲವೇ? ಪತ್ರಿಕೆಗಳಲ್ಲಿ ಬರುವುದಕ್ಕಿಂತ ಮುಂಚಿತವಾಗಿ, ಇದು ಅತ್ಮ ವಂಚನೆ ಅಲ್ಲವಾ ಎಂದು ಕೇಳುವುದಕ್ಕೆ ಅವಕಾಶ ಕೊಡಬೇಕಿತ್ತೇ?

ಅದಕ್ಕೋಸ್ಕರ ನಿಮ್ಮ ಮೂಲಕ ಸರ್ಕಾರಕ್ಕೆ ನಾನು ಹೇಳುವುದೇನೆಂದರೆ ದಯವಿಟ್ಟು, ಈ ವಿಚಾರವನ್ನು ನಿಲುವಳಿ ರೂಪದಲ್ಲಿ ತೆಗೆದುಕೊಳ್ಳಿ. ಇದರ ಬಗ್ಗೆ ನನಗೆ ತಕ್ಷಣ ಮಾಡಲಿಕ್ಕೆ ಅವಕಾಶ ಕೊಡಿ. ಇದರ ಬಗ್ಗೆ ನನ್ನ ಹತ್ತಿರ ಸಾಕಷ್ಟು ದಾಖಲೆಗಳಿವೆ. ಅದನ್ನು ನಾನು ಸದನದ ಮುಂದೆ ಇಡುತ್ತೇನೆ. ಈ ಸದನ ತೀರ್ಮಾನ ಮಾಡಲಿ. ಯಾವುದೋ ಒಬ್ಬ ವ್ಯಕ್ತಿ, ಒಂದು ಪಕ್ಷದಲ್ಲಿದ್ದಾರೆ, ಅದರಲ್ಲೂ ನನಗೆ ತುಂಬಾ ಆತ್ಮೀಯರಿದ್ದಾರೆ, ಅದಕ್ಕೋಸ್ಕರ ನಾನು ಅವರನ್ನು ರಕ್ಷಣೆ ಮಾಡಲೇಬೇಕೆಂದು ಹೇಳುವ ರೀತಿಯಲ್ಲಿ ಮುಖ್ಯಮಂತ್ರಿಗಳಾದರೆ ಅಂತಹ ಮುಖ್ಯಮಂತ್ರಿ ಜಾರ್ಜ್ ಅವರಿಗೆ ಮಾತ್ರ ಮುಖ್ಯಮಂತ್ರಿಗಳಾಗುತ್ತಾರೆಯೇ ವಿನ: ಆರೂವರೆ ಕೋಟಿ ಜನರಿಗೆ ಮುಖ್ಯಮಂತ್ರಿ ಆಗುವುದಿಲ್ಲ. ಆರೂವರೆ ಕೋಟಿ ಜನರು ಇವತ್ತು ಇವರನ್ನು ಮುಖ್ಯಮಂತ್ರಿಗಳನ್ನಾಗಿ ಮಾಡಿದ್ದಾರೆ. ಜಾರ್ಜ್ ಒಬ್ಬರೇ ಅಲ್ಲ. ಇವತ್ತು ಈ ವಿಚಾರದಲ್ಲಿ ಮುಖ್ಯಮಂತ್ರಿಗಳು ತೀರ್ಮಾನ ಮಾಡಬೇಕು. ನಾನು ಜಾರ್ಜ್ ಅವರನ್ನು ರಕ್ಷಣೆ ಮಾಡುತ್ತೇನೆ, ಆರೂವರೆ ಕೋಟಿ ಜನರು ಏನು ಬೇಕಾದರೂ ಅಗಲಿ, ನೀವು ಪೊಲೀಸ್ ಸ್ಟೇಷನ್‌ಗೆ ಹೋಗಬೇಡಿ ಎಂದು ಹೇಳಿಬಿಡಿ. ಏಕೆಂದರೆ, ಕರ್ನಾಟಕ ರಾಜ್ಯದಲ್ಲಿ ಮಂತ್ರಿಗಳಿಗೆ ಒಂದು ಕಾನೂನು ಶ್ರೀಸಾಮಾನ್ಯನಿಗೆ ಮತ್ತೊಂದು ಕಾನೂನು. ಪೊಲೀಸ್ ಸ್ಟೇಷನ್‌ಗೆ ಹೋದರೆ ಮಂತ್ರಿ ಅವರ ಎಫ್ಐಆರ್ ತೆಗೆದುಕೊಳ್ಳುವಂತಿಲ್ಲ. ಅವರ ಮೇಲೆ ಕೇಸ್ ಹಾಕುವಂತಿಲ್ಲ. ಅವರನ್ನು ಅರೆಸ್ಟ್ ಮಾಡುವಂತಿಲ್ಲ. ಈ ರೀತಿಯಲ್ಲಿ ನೀವು ಕಾನೂನನ್ನು ಮಾಡಿಬಿಡಿ. ಈ ಬಗ್ಗೆ ಸಚಿವ ಸಂಪುಟದಲ್ಲಿ ಅವಿರೋಧವಾಗಿ ತೀರ್ಮಾನ ಮಾಡಿಬಿಡಿ. ಶ್ರೀಸಾಮಾನ್ಯ ಅವನು ತಪ್ಪು ಮಾಡಲಿ, ಬಿಡಲಿ, ಅವನ ಮೇಲೆ ಕೇಸ್ ಹಾಕುತ್ತೇವೆ. ಏತಕ್ಕೆ ಪೊಲೀಸ್ ಸ್ಟೇಷನ್‌ಗೆ ಹೋಗುತ್ತಾರೆ? ನಾನು ಮೊನ್ನೆಯೇ ಹೇಳಿದೆ. ಹಾಗಾದರೆ, ಕರ್ನಾಟಕ ರಾಜ್ಯದಲ್ಲಿನ ಪೊಲೀಸ್ ಸ್ಟೇಷನ್‌ಗಳಿಗೆ ಬೀಗ ಹಾಕಿಬಿಡಿ. ಈ ವಿಚಾರವಾಗಿಯೇ ಎಫ್ಐಆರ್ ತೆಗೆದುಕೊಳ್ಳಲಿಲ್ಲವೆನ್ನುವ ಕಾರಣಕ್ಕೋಸ್ಕರವೇ ಗಣಪತಿಯವರ ಪತ್ನಿ ಮತ್ತು ಅವರ ಮಕ್ಕಳು ಪೊಲೀಸ್ ಸ್ಟೇಷನ್‌ಗೆ ಬೀಗ ಹಾಕಿಸುವಂತಹ ಸಂದರ್ಭ ಬಂತು. ರಾಜ್ಯದ ಜನರು ಮಾನ್ಯ ಮುಖ್ಯಮಂತ್ರಿಗಳಾದ ಶ್ರೀಯುತ ಸಿದ್ದರಾಮಯ್ಯನವರನ್ನು ನೋಡುತ್ತಿದ್ದಾರೆ. ತಕ್ಷಣವೇ ಇವರು ಹೇಳಿಕೆಯನ್ನು ಕೊಟ್ಟುಬಿಡುತ್ತಾರೆ. ಮಡಿಕೇರಿಯಲ್ಲಿಯೂ ಸಹ ಪುಟ್ಟಪ್ಪನ ಕೊಲೆಯಾದಂತಹ ಸಂದರ್ಭದಲ್ಲಿಯೂ ಸಹ ಅವರು ನಡೆದುಕೊಂಡು ಹೋಗುವಾಗ ಸತ್ತಿರಬಹುದು ಎಂದು ಏತಕ್ಕೆ ಹೇಳಿಕೆಯನ್ನು ಕೊಡುತ್ತಾರೆ? ರಾಜ್ಯದ ಜನರು ಇವರಿಗೆ ಗೃಹಮಂತ್ರಿಗಳಾಗಲಿಕ್ಕೆ ಅವಕಾಶ ಕೊಟ್ಟಂತಹ ಸಂದರ್ಭದಲ್ಲಿ ತನಿಖೆಯಾಗುವುದಕ್ಕಿಂತ ಮುಂಚೆ ಇವರೇ ಹೇಳಿಕೆ ಕೊಟ್ಟುಬಿಡುವುದೇ? ಪುಟ್ಟಪ್ಪನ ಕೊಲೆ ಬಗ್ಗೆ ಏನು ವರದಿ ಬಂದಿದಿದೆಯೇ? ಜಿಲ್ಲಾಧಿಕಾರಿಗಳಿಂದ ಏತಕ್ಕೆ ವರದಿಯನ್ನು ಕೊಟ್ಟಿಲ್ಲ, ಇಲ್ಲಿಯವರೆಗೆ ಆ ಬಗ್ಗೆ ವರದಿಯನ್ನು ಏತಕ್ಕೆ ಇಟ್ಟಿಲ್ಲ?

ಆದ್ದರಿಂದ, ನಾನು ಮಾನ್ಯ ಮುಖ್ಯಮಂತ್ರಿಗಳಿಗೆ, ಗೃಹ ಮಂತ್ರಿಗಳಿಗೆ ಒತ್ತಾಯ ಮಾಡುವುದೇನೆಂದರೆ "ಗಣಪತಿ ಆತ್ಮಹತ್ಯೆ" ಯನ್ನು ಮುಚ್ಚಿಹಾಕಲು ಪ್ರಯತ್ನ, ವ್ಯವಸ್ಥಿತ ಮುಕ್ತಿ, ಎಂದು ವಿಶ್ವವಾಣಿಯಲ್ಲಿ ಬಂದಿದೆ. "ನನ್ನ ಮಗನ ಮೇಲೆ ಸುಳ್ಳು ಕೇಸ್ ಹಾಕಿದರೆ ನಾನು ಸುಮ್ಮನೆ ಬಿಡಲಿಕ್ಕೆ ಆಗುತ್ತದೆಯೇ" ಎಂದು ಉದಯವಾಣಿಯಲ್ಲಿ ಬಂದಿದೆ. ಆದರೆ, ಬೇರೆ ಯಾರ ಮೇಲೆ ಸುಳ್ಳು ಕೇಸ್ ಹಾಕಿದರೆ ನೀವು ಹೇಗೆ ತೀರ್ಮಾನ ಮಾಡುತ್ತೀರಿ? ಹಾಕಿದ ತಕ್ಷಣ ಅದು ಸುಳ್ಳು ಕೇಸ್ ಎಂದು ನೀವೇ ತೀರ್ಮಾನ ಮಾಡಿಬಿಟ್ಟರೆ ಪೋಲೀಸ್ ಇಲಾಖೆ ಇರುವುದು ಏತಕ್ಕೆ? ಆ ವ್ಯಕ್ತಿ ಮೋಹನ್ ನಾಳೆ ಬೆಳಿಗ್ಗೆ ಸೂಸೈಡ್ ಮಾಡಿಕೊಂಡರೆ ಯಾರು ಜವಾಬ್ದಾರಿ? ಮುಖ್ಯಮಂತ್ರಿಗಳೇ ಹೇಳಿಬಿಡುವುದು. ಆ ಮೋಹನ್‌ರವರು ನನ್ನ ಮಗನ ಮೇಲೆ ಸುಳ್ಳು ಕೇಸ್ ಹಾಕಿದ್ದಾರೆ. . . ನಾನು ಅದಕ್ಕೋಸ್ಕರ ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುವುದೇನೆಂದರೆ . . .

**ಶ್ರೀ ಮಾನೆ ಶ್ರೀನಿವಾಸ್:–** ಮಾನ್ಯ ಸಭಾಪತಿಯವರೆ, ಈ ರೀತಿ ಹೇಳಿದರೆ ಇದು ಆತ್ಮಹತ್ಯೆಗೆ ಪ್ರಚೋಚನೆ ಕೊಟ್ಟಂತೆ ಆಗುತ್ತದೆ. ಈಗಾಗಲೇ ಅವರು ಪ್ರಿಲಿಮನರಿಯಾಗಿ ಮಾತನಾಡಿದ್ದಾರೆ. ಇಲ್ಲಿ ಯಾರ್‍ಯಾರಿಗೋ ಆತ್ಮಹತ್ಯೆ ಮಾಡಿಕೊಳ್ಳಲಿಕ್ಕೆ ಪ್ರಚೋದನೆ ಕೊಡಬಾರದು.

(ಗೊಂದಲ)

**ಡಾ||ಶರಣಪ್ರಕಾಶ್ ಪಾಟೀಲ್(ವೈದ್ಯಕೀಯ ಶಿಕ್ಷಣ ಸಚಿವರು):–** ಇವರು ಆತ್ಮಹತ್ಯೆಗೆ ಪ್ರಚೋದನೆ ಕೊಡುತ್ತಿದ್ದಾರೆ ಮತ್ತು ಇದು ಕಾನೂನುಬಾಹೀರ. ಯಾವುದೇ ಕಾರಣಕ್ಕೂ ಅದಕ್ಕೆ ಅವಕಾಶ ಕೊಡಬೇಡಿ.

**ಸಭಾಪತಿಯವರು:–** ಏತಕ್ಕೆ ಈ ವಿಚಾರವನ್ನು ನಿಯಮ 59 ರಡಿಯಲ್ಲಿ ತೆಗೆದುಕೊಳ್ಳಬೇಕೆಂದು ಹೇಳುವುದನ್ನು ಮುಗಿಸಿ. ಮತ್ತೆ ಅವರಿಗೆ ಒಂದೆರಡು ನಿಮಿಷ ಜೆ.ಡಿ(ಎಸ್)ನವರಿಗೆ ಅವಕಾಶ ಕೊಡುತ್ತೇನೆ. ಮತ್ತೆ ಸರ್ಕಾರ ಏನು ಹೇಳುತ್ತದೆ ಎಂದು ಕೇಳೋಣ. ಅದನ್ನು ನಿಯಮ 59 ರಡಿಯಲ್ಲಿ ತೆಗೆದುಕೊಳ್ಳಬಹುದೇ, ಬೇಡವೆನ್ನುವ ವಿಚಾರದಲ್ಲಿ ಸರ್ಕಾರದ ಅಭಿಪ್ರಾಯ ಏನಿದೆ, ಅದನ್ನು ಕೇಳುತ್ತೇನೆ. ಅವರಿಗೆ ಒಂದು ಅವಕಾಶವನ್ನು ಕೊಡುತ್ತೇನೆ. ಆದ್ದರಿಂದ, ಬೇಗನೆ ಮುಗಿಸಿ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ನಾನು ಕಾಂಗ್ರೆಸ್ ಮಿತ್ರರಲ್ಲಿ ಪ್ರಾರ್ಥನೆ ಮಾಡುತ್ತೇನೆ. ಈ ಗಣಪತಿಯವರ ಆತ್ಮಹತ್ಯೆಯಲ್ಲಿ ಇದನ್ನು ಮುಚ್ಚಿಹಾಕುವಂತಹ ಪ್ರಯತ್ನ ನಡೆಯುತ್ತಿದೆ ಎನ್ನುವಲ್ಲಿ ನಿಮ್ಮ ಆತ್ಮಕ್ಕೆ ಸಮಾಧಾನ ಇದ್ದರೆ ನೀವು ವಿರೋಧ ಮಾಡಿ. ಈ ವಿಚಾರದಲ್ಲಿ ಆಡಳಿತ ಪಕ್ಷ, ವಿರೋಧ ಪಕ್ಷ ಎಂದು ತರಬೇಡಿ. ತಮ್ಮಲ್ಲಿ ಕೈಮುಗಿದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

**ಶ್ರೀ ಐವನ್ ಡಿ' ಸೋಜಾ:–** ಮಾನ್ಯ ಸಭಾಪತಿಯವರೆ. .

**ಶ್ರೀ ಕೆ.ಎಸ್.ಈಶ್ವರಪ್ಪ:–** ನಾನು ಹೇಳುವುದಿಷ್ಟೆ. ಇಲ್ಲಿ ಸಿಬಿಐ ತನಿಖೆ ಆದಾಗ ಜಾರ್ಜ್ ಅವರು ಈ ವಿಚಾರದಲ್ಲಿ ತಪ್ಪಿತಸ್ತರು ಅಲ್ಲವೆಂದು ತೀರ್ಮಾನ ಮಾಡಿದರೆ ಇಡೀ ಕರ್ನಾಟಕ ಜನರು ಸಂತೋಷ ಪಡುತ್ತಾರೆ. ಆದರೆ, ತನಿಖೆ ಆಗುವುದಕ್ಕಿಂತ ಮುಂಚೆಯೇ ಸಿಓಡಿ.ಗೆ ಕೊಟ್ಟಿದ್ದೇವೆ, ಅವರ ವರದಿ ಬರಲಿ ಎಂದು ಒಂದು ಕಡೆ ಹೇಳುತ್ತಾರೆ. ಮತ್ತೊಂದು ಕಡೆ ಅವರು ತಪ್ಪು ಮಾಡಿಯೇ ಇಲ್ಲವೆಂದು ಹೇಳುತ್ತಾರೆ. ಮತ್ತೆ ಸಿಓಡಿ ಅಧಿಕಾರಿಗಳು ಮುಖ್ಯಮಂತ್ರಿಗಳ ಕೆಳಗಡೆ ಇದ್ದಾರೋ, ಮುಖ್ಯಮಂತ್ರಿಗಳ ಮೇಲೆ ಇದ್ದಾರೋ ಹೇಳಿ. ಮುಖ್ಯಮಂತ್ರಿಯೇ ಈ ರೀತಿ ಹೇಳಿಕೆ ಕೊಟ್ಟ ನಂತರ ಸಿಓಡಿ ಅಧಿಕಾರಿಗಳು ಏನು ವರದಿಯನ್ನು ಕೊಡುತ್ತಾರೆ? ಮಾನ್ಯ ಸಭಾಪತಿಯವರು ಇದನ್ನು ಗಮನಿಸಬೇಕು. ಅವರವರು ತಮ್ಮ ಹುದ್ದೆ, ತಮ್ಮ ಜೀವವನ್ನು ರಕ್ಷಣೆ ಮಾಡಿಕೊಳ್ಳಲಿಕ್ಕೆ ಪ್ರಯತ್ನ ಮಾಡುತ್ತಾರೆ ಅಲ್ಲವೇ? ಅದಕ್ಕೋಸ್ಕರ ಇಲ್ಲಿ ಆಡಳಿತ ಪಕ್ಷ ವಿರೋಧ ಪಕ್ಷ ಬೇಡ. ನಾವೆಲ್ಲರೂ ಸೇರಿ ಪ್ರಜಾಪ್ರಭುತ್ವವನ್ನು ಉಳಿಸೋಣ. ಗಣಪತಿಯವರಂತಹ ಪ್ರಮಾಣಿಕ ವ್ಯಕ್ತಿಯನ್ನು, ಶಿಖಾ ಎನ್ನುವಂತಹ ಪ್ರಮಾಣಿಕ ವ್ಯಕ್ತಿಯ ಪರವಾಗಿ ನಾವು ಈ ಸದನದಲ್ಲಿ ನಿಂತರೆ ಆಗ ಪ್ರಮಾಣಿಕ ವ್ಯಕ್ತಿಗಳಿಗೆ ವಿಶ್ವಾಸ ಬರುತ್ತದೆ. ಕರ್ನಾಟಕ ರಾಜ್ಯದ ಆರೂವರೆ ಕೋಟಿ ಜನರಿಗೂ ಸಹ ವಿಶ್ವಾಸ ಬರುತ್ತದೆ. ಆ ದಿಕ್ಕಿನಲ್ಲಿ ನಾನು ತಕ್ಷಣ ಈ ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. ಎಫ್‌ಐಆರ್ ದಾಖಲು ಮಾಡಿ, ಕ್ರಿಮಿನಲ್ ಕೇಸ್ ಹಾಕಿ, ಜಾರ್ಜ್ ಅವರನ್ನು ಬಂಧಿಸಿ, ಸಿಬಿಐ ತನಿಖೆಗೆ ಹಾಕಿ, ಅವರ ರಾಜೀನಾಮೆಯನ್ನು ತೆಗೆದುಕೊಳ್ಳಿ.

ನಾನು ಈ ವಿಚಾರದಲ್ಲಿ ತುಂಬಾ ಸ್ಪಷ್ಟಪಡಿಸುತ್ತೇನೆ. ಈ ವಿಚಾರ ಮುಗಿಯುವವರೆಗೂ ಕೂಡ ನಮ್ಮ ಹೋರಾಟ ವಿಧಾನ ಮಂಡಲದ ಒಳಗಡೆ ಇರಬಹುದು, ಹೊರಗಡೆ ಇರಬಹುದು, ಯಾವುದೇ ಕಾರಣಕ್ಕೂ ನಮ್ಮ ಹೋರಾಟವನ್ನು ನಿಲ್ಲಿಸುವುದಿಲ್ಲವೆನ್ನುವ ಆಗ್ರಹವನ್ನು ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯ ಮಾಡಿ, ಈ ಸರ್ಕಾರ ಆತ್ಮವಂಚನೆಯನ್ನು ಮಾಡಿಕೊಳ್ಳದೇ ಜಾರ್ಜ್ ಅವರ ರಾಜೀನಾಮೆಯನ್ನು ತೆಗೆದುಕೊಂಡು ಈ ವಿಚಾರವನ್ನು ಸಿಬಿಐ ತನಿಖೆಗೆ ವಹಿಸಬೇಕೆಂದು, ಈ ವಿಚಾರದಲ್ಲಿ ನಿಲುವಳಿ ಸೂಚನೆಗೆ ಅವಕಾಶ ಕೊಡಬೇಕೆಂದು ಒತ್ತಾಯ ಮಾಡುತ್ತೇನೆ.

**ಸಭಾಪತಿಯವರು:–** ಜೆ.ಡಿ.(ಎಸ್)ನವರು ಸಹ ಇದೇ ವಿಷಯವಾಗಿ ನೋಟೀಸ್ ಕೊಟ್ಟಿದ್ದೀರಿ. ಅದಕ್ಕೆ ಹಲವಾರು ಸದಸ್ಯರುಗಳು ಸಹಿ ಮಾಡಿಕೊಟ್ಟಿದ್ದೀರಿ. ಯಾರಾದರೋ ಒಬ್ಬರು ಒಂದೆರಡು–ಮೂರು ನಿಮಿಷ ಅದಕ್ಕೆ ಧ್ವನಿಗೂಡಿಸುವುದು ಇದ್ದರೆ ಅಥವಾ ಅದರ ಬಗ್ಗೆ ನಿಮ್ಮ ಬೇರೆ ಅಭಿಪ್ರಾಯ ಇದ್ದರೆ ಹೇಳಬಹುದು.

**ಶ್ರೀ ಬಿ.ಜೆ.ಪುಟ್ಟಸ್ವಾಮಿ:–** ಮಾನ್ಯ ಸಭಾಪತಿಯವರೆ,

**ಸಭಾಪತಿಯವರು:–** ಶ್ರೀಯುತ ಪುಟ್ಟಸ್ವಾಮಿ ಅವರಿಗೆ ನಾನೀಗ ಜೆ.ಡಿ(ಎಸ್)ನವರಿಗೆ ಅವಕಾಶವನ್ನು ಕೊಟ್ಟಿದ್ದೇನೆ. ತದನಂತರ ನಿಮಗೆ ಅವಕಾಶವನ್ನು ಕೊಡುತ್ತೇನೆ, ಕುಳಿತುಕೊಳ್ಳಿ.

**ಶ್ರೀ ಟಿ.ಎ.ಶರವಣ(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಇವತ್ತು ನಾವು ಈ ನಿಲುವಳಿ ಸೂಚನೆಯನ್ನು ಮಂಡಿಸಿದ್ದೇವೆ, ಎಲ್ಲೋ ಒಂದು ಕಡೆ ನಾವು ಕರ್ನಾಟಕ ರಾಜ್ಯದಲ್ಲಿ ಇದ್ದೇವೋ ಅಥವಾ Taliban ಇದ್ದೇವೋ ಎಂದು ನಮಗೆ ಪ್ರಶ್ನೆ ಉದ್ಭವವಾಗುತ್ತಿದೆ. ಕಾಂಗ್ರೆಸ್ ಸದಸ್ಯರಾದ ತಮಗೂ ಸಹ ಒಳ ಮನಸ್ಸು ಒಂದು ರೀತಿಯಲ್ಲಿ ಇದ್ದರೆ ಹೊರ ಮನಸ್ಸು ಒಂದು ರೀತಿಯಲ್ಲಿ ಇದೆ ಎಂದು ನನಗೆ ಗೊತ್ತಿದೆ. ದಯಮಾಡಿ, ತಾವು ಅವಕಾಶ ಮಾಡಿಕೊಡಿ. ದಯಮಾಡಿ, ಯಾರೂ ಸಹ ಅಡ್ಡ ಬಾಯಿ ಹಾಕಬೇಡಿ. ಇವತ್ತು ನಮ್ಮ ರಾಜ್ಯದಲ್ಲಿ ನಿಷ್ಠಾವಂತಹ, ಪ್ರಾಮಾಣಿಕ ಅಧಿಕಾರಿಗಳ್ಯಾರಿಗೂ ಕೂಡ ಕೆಲಸ ಮಾಡುವಂತಹ ವ್ಯವಸ್ಥೆ ಇಲ್ಲಿ ನಡೆಯುತ್ತಿಲ್ಲ. ಕಳೆದ ಮೂರು ವರ್ಷಗಳಿಂದ ನಮ್ಮ ರಾಜ್ಯದಲ್ಲಿ ದಕ್ಷತೆಗೆ ಹೆಸರಾಗಿದ್ದಂತಹ ಡಿ.ಕೆ.ರವಿ ರವರ ಪ್ರಕರಣದಿಂದ ಹಿಡಿದು ಇವತ್ತಿನ ಗಣಪತಿಯವರ ಆತ್ಮಹತ್ಯೆಯವರೆಗೆ ಏನೇನು ಪ್ರಸಂಗಗಳು ನಡೆದಿವೆ ಎಂದು ಹೇಳಿ, ಈ ರಾಜ್ಯದ ಜನತೆಗೆ ಬಹಳ ಚೆನ್ನಾಗಿ ಗೊತ್ತಿದೆ. ಆದರೆ, ಇವತ್ತು ಆ ಗಣಪತಿಯ ಆತ್ಮಹತ್ಯೆ ವಿಚಾರದಲ್ಲಿ, ಅವರು ಆತ್ಮಹತ್ಯೆ ಮಾಡಿಕೊಳ್ಳುವ ಮುಂಚಿತವಾಗಿ cable channel ಅವರೊಂದಿಗೆ ಒಂದು ಹೇಳಿಕೆಯನ್ನು ಕೊಡುತ್ತಾರೆ, ಆ ಹೇಳಿಕೆ ಬರುತ್ತಿದ್ದಂತೆಯೇ ಇಲ್ಲಿ ಒಂದು ಕಡೆ ನಾವು ಸಿಓಡಿ ತನಿಖೆಗೆ ಕೊಡುತ್ತೇವೆ, ಅಲ್ಲಿ ಯಾವುದೇ ರೀತಿಯಲ್ಲಿ ಅಲ್ಲಿ ಪ್ರಸ್ತಾಪ ಮಾಡಬೇಡಿ ಎಂದು ಹೇಳಿ, ಮಾಧ್ಯಮದಲ್ಲಿ ಎಲ್ಲಾ ರೀತಿಯ ಚರ್ಚೆಗಳಾಗಿದೆ. ಬೀದಿಯಲ್ಲಿ ಈ ವಿಚಾರವಾಗಿ ಜನರು ಮಾತನಾಡುತ್ತಿದ್ದಾರೆ. ಒಬ್ಬ ಸಾಮಾನ್ಯ ಜನ ಈ ರೀತಿಯಲ್ಲಿ ಮಾಡಿದ್ದರೆ ತತ್‌ಕ್ಷಣ ನೀವು ಏನು ಮಾಡುತ್ತಿದ್ದೀರಿ? ಒಂದು ಎಫ್‌ಐಆರ್ file ಮಾಡಿ, ಅವರನ್ನು ಬಂಧಿಸುತ್ತಿದ್ದೀರಿ. ಇವರಿಗೆ ಏತಕ್ಕೆ ಬೇರೆ ಕಾನೂನು? ಸುಪ್ರೀಂ ಕೋರ್ಟ್ ಆದೇಶಕ್ಕಿಂತಲೂ ನಾವೆಲ್ಲರೂ ದೊಡ್ಡವರೇ? ಈ ವಿಚಾರ ಪ್ರಮುಖ ಇರುವುದರಿಂದ ಇವತ್ತಿನ ದಿವಸ ಈ ಗಣಪತಿಯವರ ಧರ್ಮಪತ್ನಿ ಇರಬಹುದು, ಅವರ ಮಕ್ಕಳು ಇರಬಹುದು, ಅಲ್ಲಿ ಪೊಲೀಸ್ ಸ್ಟೇಷನ್ ಮುಂಭಾಗ ಎಫ್‌ಐಆರ್ ಹಾಕಲಿಕ್ಕೆ ಧರಣಿ ಮಾಡುತ್ತಿದ್ದಾರೆ.

ಇದು ಎಂತಹ ದುರಂತ ಪರಿಸ್ಥಿತಿ ನೋಡಿ. ತಾವು ಇದಕ್ಕೆ ನಿಜವಾಗಿಯೂ ನ್ಯಾಯ ದೊರಕಿಸಿಕೊಡಬೇಕು. ಸನ್ಮಾನ್ಯ ಸಚಿವರು ಮತ್ತು ಮುಖ್ಯಮಂತ್ರಿಗಳು ಕೂಡಲೇ ಇದಕ್ಕೆ ಸ್ಪಂದಿಸಬೇಕು. ಏಕೆಂದರೆ ಆತ್ಮಹತ್ಯೆ ಮಾಡಿಕೊಂಡಿರುವ ಪೊಲೀಸ್ ಅಧಿಕಾರಿ ಶ್ರೀ ಎಂ.ಕೆ.ಗಣಪತಿಯವರ ವಿಚಾರದಲ್ಲಿ ಸಾಕಷ್ಟು ಅಂದರೆ, ಸುಮಾರು 2011ರಿಂದ ಹಿಡಿದು, ಅವರು ಯಶವಂತಪುರ ಪೊಲೀಸ್ ಠಾಣೆಗೆ ಬಂದಾಗಿನಿಂದ ಹಿಡಿದು ಅಲ್ಲಿ ಏನೇನಾಗಿದೆ ಎಂಬುದರ ಬಗ್ಗೆ ನಾನು ಹೇಳುವುದಿಷ್ಟೆ, ದಯಮಾಡಿ ಈ ವಿಷಯದ ಬಗ್ಗೆ ಚರ್ಚೆ ಮಾಡಲು ಅವಕಾಶ ಕೊಡಬೇಕೆಂದು ನಾನು ತಮ್ಮಲ್ಲಿ ಕಳಕಳಿಯ ಮನವಿ ಮಾಡುತ್ತಿದ್ದೇನೆ.

**ಸಭಾಪತಿಯವರು:–** ಧನ್ಯವಾದಗಳು. ಈಗ ಮಾನ್ಯ ಸಭಾನಾಯಕರು ಸದನದಲ್ಲಿ ಉಪಸ್ಥಿತರಿಲ್ಲದ ಕಾರಣ ಸರ್ಕಾರದ ಪರವಾಗಿ ಯಾರಾದರೊಬ್ಬ ಸಚಿವರು ಈ ನಿಲುವಳಿ ಸೂಚನೆಯ ಬಗ್ಗೆ ಮಾತನಾಡಬೇಕಾಗುತ್ತದೆ.

**ಶ್ರೀ ಬಿ.ಜೆ.ಪುಟ್ಟಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಶರವಣ ಅವರು ಮಾತನಾಡಿದ ನಂತರ ನನಗೆ ಮಾತನಾಡಲು ಅವಕಾಶ ಮಾಡಿಕೊಡುವುದಾಗಿ ತಿಳಿಸಿದ್ದಿರಿ. ಆದ್ದರಿಂದ ದಯಮಾಡಿ ಅವಕಾಶ ಮಾಡಿಕೊಡಬೇಕೆಂದು ವಿನಂತಿಸುತ್ತೇನೆ.

**ಸಭಾಪತಿಯವರು:–** ಚರ್ಚೆ ಬಂದಾಗ ಅವಕಾಶ ಕೊಡುತ್ತೇನೆ. ನಿಲುವಳಿ ಸೂಚನೆಯ ಅಡಿಯಲ್ಲಿ ಈ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳಬೇಕೋ, ಬೇಡವೋ ಎನ್ನುವುದರ ಬಗ್ಗೆ ಈಗ ಪೂರ್ವಭಾವಿ ಚರ್ಚೆ ನಡೆಯುತ್ತಿದೆ. ಅದನ್ನು ನಿಲುವಳಿ ಸೂಚನೆ ರೂಪದಲ್ಲಿಯೋ ಅಥವಾ ಬೇರೆ ಯಾವ ನಿಯಮದ ಅಡಿಯಲ್ಲಿಯೋ ಚರ್ಚೆಗೆ ತೆಗೆದುಕೊಳ್ಳಬೇಕೆಂಬುದನ್ನು ನಿರ್ಧರಿಸಿದ ನಂತರ ಆ ವಿಷಯ ಚರ್ಚೆಗೆ ಬಂದಂತಹ ಸಂದರ್ಭದಲ್ಲಿ ನಾನು ತಮಗೆ ಮಾತನಾಡಲು ಅವಕಾಶ ಮಾಡಿಕೊಡುತ್ತೇನೆ.

**ಶ್ರೀ ಬಿ.ಜೆ.ಪುಟ್ಟಸ್ವಾಮಿ:–** ಮಾನ್ಯ ಸಭಾಪತಿಯವರೇ, ನಾನು ಬೇರೆ ಏನನ್ನೂ ಮಾತನಾಡುವುದಿಲ್ಲ. ನಮ್ಮ ನಾಯಕರು ಏನು ಮಾತನಾಡಿದ್ದಾರೆ, ಅದನ್ನು ಮುಂದುವರೆಸಿ ಎರಡು ಮಾತುಗಳನ್ನಷ್ಟೇ ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತಿದ್ದೇನೆ.

**ಸಭಾಪತಿಯವರು:–** ಇಲ್ಲ, ನಿಮ್ಮ ಪಕ್ಷದಿಂದ ಯಾರಾದರೊಬ್ಬರಿಗಷ್ಟೇ ಅವಕಾಶ ಕೊಡಬೇಕಾಗುತ್ತದೆ. ಈ ವಿಷಯವನ್ನು ಯಾವುದಾದರೂ ನಿಯಮದ ಅಡಿಯಲ್ಲಿ ಚರ್ಚೆಗೆ ತೆಗೆದುಕೊಂಡಂತಹ ಸಂದರ್ಭದಲ್ಲಿ ನಾನು ಎಲ್ಲರಿಗೂ ಮಾತನಾಡಲು ಅವಕಾಶ ಮಾಡಿಕೊಡುತ್ತೇನೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:–** ಮಾನ್ಯ ಸಭಾಪತಿಯವರೇ, ಇದು ಬಹಳ ಗಂಭೀರವಾದಂತಹ ವಿಚಾರವಾಗಿರುವುದರಿಂದ ತಾವು ದಯಮಾಡಿ ಅವಕಾಶ ಮಾಡಿಕೊಡಬೇಕಾಗುತ್ತದೆ.

**ಸಭಾಪತಿಯವರು:–** ವಿಷಯವನ್ನು ಚರ್ಚೆಗೆ ತೆಗೆದುಕೊಂಡಂತಹ ಸಂದರ್ಭದಲ್ಲಿ ನಾನು ಎಲ್ಲರಿಗೂ ಅವಕಾಶ ಮಾಡಿಕೊಡುತ್ತೇನೆ. ಆದರೆ, ಈ ವಿಷಯವನ್ನು ನಿಲುವಳಿ ಸೂಚನೆಯ ಅಡಿಯಲ್ಲಿಯೇ ಏಕೆ ಚರ್ಚೆಗೆ ತೆಗೆದುಕೊಳ್ಳಬೇಕು ಎನ್ನುವುದನ್ನು ಒಂದು ಪಕ್ಷದಿಂದ ಒಬ್ಬರಷ್ಟೇ ಹೇಳಬೇಕಾಗುತ್ತದೆ. ಆದ್ದರಿಂದ ಈಗ ಸಚಿವರು ಉತ್ತರ ಕೊಡುತ್ತಾರೆ, ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

**ಶ್ರೀ ರಮೇಶ್ ಕುಮಾರ್(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):–** ಸನ್ಮಾನ್ಯ ಸಭಾಪತಿಯವರೇ, ...

**ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):–** ಮಾನ್ಯ ರಮೇಶ್ ಕುಮಾರ್ ಅವರೇ ತಮ್ಮಲ್ಲಿ ನನ್ನದೊಂದು ಪ್ರಾರ್ಥನೆ ಏನೆಂದರೆ, ತಾವು ಶಾಸಕರಾಗಿದ್ದಂತಹ ಸಂದರ್ಭದಲ್ಲಿ ವಿಧಾನ ಸಭೆಯಲ್ಲಿ ಕರ್ನಾಟಕ ರಾಜ್ಯದ ಮೌಲ್ಯಗಳನ್ನು ಎತ್ತಿ ಹಿಡಿಯುತ್ತಿದ್ದಿರಿ, ಸರ್ಕಾರವನ್ನು ಇಕ್ಕಟ್ಟಿನಲ್ಲಿ ಸಿಕ್ಕಿಸುತ್ತಿದ್ದಿರಿ. ಈಗ ಮಂತ್ರಿಸ್ಥಾನ ಸಿಕ್ಕಿದ ನಂತರ ಆ ಮೌಲ್ಯಗಳಿಗೇನಾದರೂ ಬೆಂಕಿ ಹಾಕಿಬಿಡುತ್ತೀರಾ ಎನ್ನುವಂತಹ ಒಂದು ಅನುಮಾನ ರಾಜ್ಯದ ಜನತೆಗೆ ಬರುತ್ತದೆ. ತಾವು ಉತ್ತರ ಕೊಡುವಂತಹ ಸಂದರ್ಭದಲ್ಲಿ ಇಡೀ ರಾಜ್ಯ ನೋಡುತ್ತದೆ.

**(ಗೊಂದಲ)**

**ಶ್ರೀ ಹೆಚ್.ಎಂ.ರೇವಣ್ಣ:–** ಕಲ್ಲಪ್ಪ ಹಂಡಿಬಾಗ್ ಬಗ್ಗೆ ಪ್ರಕರಣ ಏನಾಯಿತು? ಆ ಬಗ್ಗೆ ತಾವೇಕೆ ಪ್ರಸ್ತಾಪ ಮಾಡುತ್ತಿಲ್ಲ?

**(ಗೊಂದಲ)**

**ಸಭಾಪತಿಯವರು:–** ಸಚಿವರು ಹೇಳುತ್ತಾರೆ, ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. He is competent to give the answer.

**ಶ್ರೀ ರಮೇಶ್ ಕುಮಾರ್(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):–** ಸನ್ಮಾನ್ಯ ಸಭಾಪತಿಯವರೇ, ಮುಖ್ಯ ಮಂತ್ರಿಗಳು ಹೇಳಿಕಳುಹಿಸಿದ್ದರಿಂದ ನಾನು ಈ ಸದನಕ್ಕೆ ಬರುವುದು ಸ್ವಲ್ಪ ತಡವಾಯಿತು. ಗೌರವಾನ್ವಿತ ವಿರೋಧ ಪಕ್ಷದ ನಾಯಕರು, ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಈಗ ಅವರು ಹೇಳಿದ ಮಾತು ಬಹಳ ಮುಖ್ಯ. ಪ್ರತಿ ಮನುಷ್ಯನಿಗೂ ಕೂಡ ತನ್ನದೇ ಆದಂತಹ ಆದರ್ಶಗಳಿರುತ್ತವೆ. ಮಂತ್ರಿ ಸ್ಥಾನ ನಾನು ಅಪೇಕ್ಷಿಸಿ ಬಂದುದಲ್ಲ, ತೆಗೆದುಕೊಂಡಿದ್ದೂ ಅಲ್ಲ. ನಾನು ನನ್ನದೇ ಆದಂತಹ ಆದರ್ಶಗಳನ್ನು ಜೀವನದಲ್ಲಿ ಇಟ್ಟುಕೊಂಡು ಬಂದಿದ್ದೇನೆ. ಈ ಸಂದರ್ಭ ಎಂದಲ್ಲ, ಯಾವುದೇ ಸಂದರ್ಭದಲ್ಲಿಯೂ ಕೂಡ ಮಂತ್ರಿಯಾಗಿ ಉಳಿದುಕೊಳ್ಳುವುದಕ್ಕೆ ಆದರ್ಶಗಳನ್ನು ತ್ಯಾಗ ಮಾಡುವಂತಹ ಸ್ವಭಾವ ನನ್ನದಲ್ಲ. ನಿಮಗೆ ಆ ಗ್ಯಾರಂಟಿ ಕೊಡುತ್ತೇನೆ. ಆದರೆ ನಿಮಗೆ ನನ್ನ ಬಗ್ಗೆ ಇಷ್ಟು ಕಾಳಜಿ ಇದೆಯಲ್ಲಾ, ನಾನು ನಿಜವಾಗಿಯೂ ಕೂಡ ಧನ್ಯ. ಏಕೆಂದರೆ ವಿರೋಧ ಪಕ್ಷದ ನಾಯಕರಿಂದ ಆ ಸೌಜನ್ಯದ ಮಾತು ಬಂದಾಗ ಅದನ್ನು ಒಂದು ಗೌರವ ಎಂದು ಸ್ವೀಕಾರ ಮಾಡಿದ್ದೇನೆಯೇ ಹೊರತು ಅದನ್ನು ನಾನು ಲಘುವಾಗಿ ಸ್ವೀಕಾರ ಮಾಡುವುದಿಲ್ಲ. ನಾವು ಈ ಸದನದಲ್ಲಿ ಕೆಲಸ ಮಾಡಬೇಕಾದರೆ ನಿಯಮಗಳನ್ನು ರೂಪಿಸಿಕೊಂಡಿದ್ದೇವೆ, ನಿಯಮಾವಳಿಗಳ ತಾಂತ್ರಿಕ ನೆಪವೊಡ್ಡಿ ಸತ್ಯ ಮರೆಮಾಚುವಂಥದ್ದು, ಪಾರಾಗತಕ್ಕಂಥದ್ದು ಜಾಣತನವಾಗುತ್ತದೆ. ನಾನು ಅದನ್ನೂ ಮಾಡುವುದಿಲ್ಲ. ಮಾನವೀಯತೆಯನ್ನು ಒಂದು ಕಡೆಗಿಟ್ಟುಕೊಳ್ಳೋಣ, ನಮ್ಮನ್ನು ನಾವು ಪರಿಪಾಲನೆ ಮಾಡಿಕೊಳ್ಳುವುದಕ್ಕೆ ನಾವು ರೂಪಿಸಿಕೊಂಡಿರುವಂತಹ ಕಾನೂನುಗಳ ಬಗ್ಗೆಯೂ ಯೋಚನೆ ಮಾಡೋಣ.

ಮೊದಲನೆಯದಾಗಿ ಗೌರವಾನ್ವಿತ ವಿರೋಧ ಪಕ್ಷದ ನಾಯಕರು ನಿಲುವಳಿ ಸೂಚನೆಯನ್ನು ಮಂಡಿಸಿದ್ದಾರೆ. ಅವರ ಸೂಚನಾ ಪತ್ರದಲ್ಲಿ ಕೂಡ ಅದನ್ನು ತಿಳಿಸಿದ್ದಾರೆ. ಮೊದಲಿಗೆ ಪೊಲೀಸ್ ಅಧಿಕಾರಿ ಶ್ರೀ ಎಂ.ಕೆ.ಗಣಪತಿಯವರ ವಿಚಾರವನ್ನು, ಅನಂತರದಲ್ಲಿ ಕಲ್ಲಪ್ಪ ಹಂಡಿಬಾಗ್ ಅವರ ವಿಚಾರವನ್ನು, ಅನಂತರ ಅನುಪಮಾ ಶೆಣೈ ಅವರ ವಿಚಾರವನ್ನು ತಿಳಿಸಿ, ಕೊನೆಯಲ್ಲಿ ಜಿಲ್ಲಾಧಿಕಾರಿ ಶಿಖಾ ಅವರ ವಿಚಾರವನ್ನು ತಿಳಿಸಿದ್ದಾರೆ. ಮಾನ್ಯ ವಿರೋಧ ಪಕ್ಷದ ನಾಯಕರೇ ತಮಗೂ ಸಹ ಗೊತ್ತಿದೆ, ತಾವು ಮಂತ್ರಿಯಾಗಿ, ಉಪ ಮುಖ್ಯಮಂತ್ರಿಯಾಗಿ, ವಿರೋಧ ಪಕ್ಷದ ನಾಯಕರಾಗಿ ಕೆಲಸ ನಿರ್ವಹಿಸಿದ್ದೀರಿ. ಹಲವು ಹತ್ತು ವಿಷಯಗಳನ್ನು ಈ ನಿಯಮದ ಕೆಳಗೆ ನಾವು ಪ್ರಸ್ತಾಪ ಮಾಡುವುದಕ್ಕೆ ನಿಯಮಗಳಲ್ಲಿ ಅವಕಾಶ ಇದೆ. ಪ್ರಧಾನವಾಗಿ ಶ್ರೀ ಎಂ.ಕೆ.ಗಣಪತಿಯವರ ವಿಚಾರವನ್ನು ತಾವು ತಿಳಿಸಿದ್ದೀರಿ. ಆತ್ಮೀಯ ಗೆಳೆಯರು, ಗೌರವಾನ್ವಿತ ಸದಸ್ಯರೂ ಆದಂತಹ ಮಾನ್ಯ ಶರವಣ ಅವರ ಮಾತುಗಳನ್ನು ಸಹ ನಾನು ಕೇಳಿದ್ದೇನೆ.

**(ಈ ಹಂತದಲ್ಲಿ ಮಾನ್ಯ ಸಭಾನಾಯಕರು ಸದನವನ್ನು ಪ್ರವೇಶಿಸಿದರು)**

**ಶ್ರೀ ರಮೇಶ್ ಕುಮಾರ್(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):–** ಸನ್ಮಾನ್ಯ ಸಭಾಪತಿಯವರೇ, ನಾನು ಮಾನ್ಯ ಸಭಾನಾಯಕರಿಗೆ handover ಮಾಡಲೇನು?

**ಡಾ: ಜಿ.ಪರಮೇಶ್ವರ್(ಸಭಾನಾಯಕರು):–** ತಾವು ಏನು ಮಾತನಾಡುತ್ತಿದ್ದೀರಿ ಎಂಬುದು ನನಗೆ ಗೊತ್ತಿಲ್ಲ.

**ಸಭಾಪತಿಯವರು:–** ನಿಲುವಳಿ ಸೂಚನೆಯ ಅಡಿಯಲ್ಲಿಯೇ ಈ ವಿಚಾರವನ್ನು ಏಕೆ ಚರ್ಚೆಗೆ ತೆಗೆದುಕೊಳ್ಳಬೇಕೆಂದು ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಜೆ.ಡಿ.ಎಸ್. ಪಕ್ಷದ ಪರವಾಗಿ ಶರವಣ ಅವರು ಮಾತನಾಡಿ, ಬೇರೆ ಕಲಾಪಗಳನ್ನೆಲ್ಲಾ ಪಕ್ಕಕ್ಕಿಟ್ಟು ಈ ವಿಷಯವನ್ನು ನಿಲುವಳಿ ಸೂಚನೆಯ ಅಡಿಯಲ್ಲಿ ಕೂಡಲೇ ತೆಗೆದುಕೊಳ್ಳಿ ಎಂಬುದನ್ನು ತಿಳಿಸಿದರು. ಅದನ್ನು ತೆಗೆದುಕೊಳ್ಳಬೇಕೋ, ಬೇಡವೋ ಎಂಬುದರ ಬಗ್ಗೆ ಸರ್ಕಾರದ ಪರವಾಗಿ ಉತ್ತರ ಏನು ಎಂದಾಗ, ಗೌರವಾನ್ವಿತ ಸಚಿವರು ಅದರ ಬಗ್ಗೆ ಉತ್ತರವನ್ನು ಕೊಡುತ್ತಿದ್ದರು.

**ಡಾ:ಜಿ.ಪರಮೇಶ್ವರ್(ಸಭಾನಾಯಕರು):–** ಆಗಬಹುದು, ಅವರು ಮುಂದುವರೆಸಲಿ. ನಾನು ತಮ್ಮಲ್ಲಿ ಒಂದು ಮನವಿಯನ್ನು ಮಾಡಿಕೊಳ್ಳುತ್ತಿದ್ದೇನೆ.

**ಸಭಾಪತಿಯವರು:–** ಅದಾದ ಮೇಲೆ ನೋಡೋಣ ಏಕೆಂದರೆ ಈ ವಿಷಯವನ್ನು ನಿಲುವಳಿ ಸೂಚನೆಯ ಅಡಿಯಲ್ಲಿ ತೆಗೆದುಕೊಳ್ಳಬೇಕೋ, ಬೇಡವೋ ಎಂಬುದರ ಬಗ್ಗೆ ಚರ್ಚೆ ನಡೆಯುತ್ತಿದೆ.

**ಡಾ: ಜಿ.ಪರಮೇಶ್ವರ್(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಅದಕ್ಕೆ ಮುಂಚೆ ನನ್ನದೊಂದು ಮನವಿ ಇದೆ. ಶ್ರೀ ಎಂ.ಕೆ.ಗಣಪತಿ ಅವರ ಆತ್ಮಹತ್ಯೆ ವಿಚಾರವಾಗಿ ಸಾರ್ವಜನಿಕವಾಗಿ ಮತ್ತು ವಿರೋಧ ಪಕ್ಷದವರು ಕೂಡ ಬಹಳ ಗಂಭೀರವಾದಂತಹ ಒಂದು ವಿಚಾರ ಸಾರ್ವಜನಿಕವಾಗಿ ಇವತ್ತು ಮಾಧ್ಯಮಗಳಲ್ಲೆಲ್ಲಾ ಚರ್ಚೆ ನಡೆಯುತ್ತಿದೆ. ಅದಕ್ಕೆ ಸರ್ಕಾರ ಒಂದು ಹೇಳಿಕೆ ಮಾಡಬೇಕೆಂದು ಈಗಾಗಲೇ ಕೆಳಮನೆಯಲ್ಲಿ ಹೇಳಿಕೆ ಮಾಡಿ ಬಂದಿದ್ದೇನೆ. ತಾವು ಅನುಮತಿ ಕೊಟ್ಟರೆ ಈ ಸದನದಲ್ಲಿಯೂ ಹೇಳಿಕೆಯನ್ನು ಮಾಡುತ್ತೇನೆ. ಅನಂತರ ತಾವು ನಿಲುವಳಿ ಸೂಚನೆಯ ಅಡಿಯಲ್ಲಿ ಚರ್ಚಿಸಲು ಅವಕಾಶ ಕೋರಿ ಪ್ರಸ್ತಾಪ ಮಾಡುತ್ತಿರುವ ವಿಚಾರದ ಬಗ್ಗೆ ಚರ್ಚೆಯನ್ನು ಮುಂದುವರೆಸಬಹುದು.

**ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ತಾವು ನಿಲುವಳಿ ಸೂಚನೆಗೆ ಅವಕಾಶವನ್ನು ಕೊಟ್ಟರೆ ಅದರಲ್ಲಿ ನಾವು ಸಂಪೂರ್ಣ ಅಂಕಿ ಅಂಶಗಳನ್ನು ದಾಖಲೆಗಳ ಸಮೇತ ಸರ್ಕಾರದ ಮುಂದಿಡುತ್ತೇವೆ. ಆಮೇಲೆ ಅದಕ್ಕೆ ಸರ್ಕಾರದವರು ಉತ್ತರವನ್ನು ಕೊಡಲಿ.

**ಡಾ:ಜಿ.ಪರಮೇಶ್ವರ್(ಸಭಾನಾಯಕರು):–** ಉತ್ತರ ಕೊಡುವುದು ಆಮೇಲೆ, ನೀವು ಚರ್ಚೆ ಮಾಡಿದ ನಂತರ ಉತ್ತರವನ್ನು ಕೊಡುತ್ತೇನೆ. ಆದರೆ, ಈಗ ಒಂದು ಹೇಳಿಕೆಯನ್ನು ಕೊಡಬಯಸುತ್ತಿದ್ದೇನೆ. ಕೆಳಮನೆಯಲ್ಲಿ ಈಗಾಗಲೇ ಹೇಳಿಕೆಯನ್ನು ಕೊಟ್ಟು ಬಂದಿದ್ದೇನೆ.

**ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):–** ನೀವು ಕೆಳಮನೆಯಲ್ಲಿ ಏನು ಬೇಕಾದರೂ ಮಾಡಿಕೊಳ್ಳಬಹುದು. ನಾನು ಕೆಳಮನೆಯ ಬಗ್ಗೆ ಪ್ರಸ್ತಾಪ ಮಾಡುವುದಿಲ್ಲ.

**ಡಾ:ಜಿ.ಪರಮೇಶ್ವರ್(ಸಭಾನಾಯಕರು):–** ಆದರೆ ನಾನು ಮಾನ್ಯ ಸಭಾಪತಿಯವರ ಗಮನಕ್ಕೆ ತರಬೇಕಲ್ಲವೆ?

**ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರ ಗಮನಕ್ಕೆ ನಾನೂ ತರುತ್ತಿದ್ದೇನೆ. ಏಕೆಂದರೆ ಇಡೀ ಸದನ ಅಂದರೆ, ಆಡಳಿತ ಪಕ್ಷದವರಿರಬಹುದು ಅಥವಾ ವಿರೋಧಪಕ್ಷದವರಿರಬಹುದು, ಇಡೀ ಕರ್ನಾಟಕ ರಾಜ್ಯದಲ್ಲಿ ಇದೊಂದು ಜ್ವಲಂತ ಸಮಸ್ಯೆಯಾಗಿ ಬೆಂಕಿ ಹೊತ್ತಿಕೊಂಡು ಉರಿಯುತ್ತಿದೆ. ಇಂತಹ ಸಂದರ್ಭದಲ್ಲಿ ಆಡಳಿತ ಪಕ್ಷದವರು ಮತ್ತು ವಿರೋಧಪಕ್ಷದವರು ಸರ್ಕಾರದ ಗಮನಕ್ಕೆ ಏನನ್ನು ತರುತ್ತೇವೆಯೋ ಅದನ್ನು ನಿಲುವಳಿ ಸೂಚನೆ ಮುಖಾಂತರ ಚರ್ಚೆಗೆ ಅವಕಾಶವನ್ನು ಕೊಟ್ಟು ಅನಂತರ ಸರ್ಕಾರ ಉತ್ತರವನ್ನು ಕೊಡಲಿ. ಅವರು ಹೇಳಿಕೆ ಕೊಟ್ಟ ನಂತರ ನಮಗೆ ಇನ್ನೆಂತಹ ಉತ್ತರವನ್ನು ಕೊಡುತ್ತಾರೆ? ಪತ್ರಿಕೆಗಳಲ್ಲಿ, ಟಿ.ವಿ.ಗಳಲ್ಲಿ ಈಗಾಗಲೇ ಅವರ ಹೇಳಿಕೆಗಳೆಲ್ಲಾ ಬಂದಾಗಿದೆ. ಅವರು ಶ್ರೀ ಕೆ.ಜೆ.ಜಾರ್ಜ್ ಅವರ ರಕ್ಷಣೆಯನ್ನು ಮಾಡಲಿಕ್ಕೆ ಹೊರಟಾಗಿದೆ, ಸಚಿವ ಸಂಪುಟದವರು ಅವರ ಜೊತೆಯಲ್ಲಿ ನಿಂತುಕೊಳ್ಳಬೇಕು ಎಂದು ಹೇಳಿ ಆಗಿದೆ, ಅವರು ತಪ್ಪಿತಸ್ಥರು ಎಂದು ಹೇಳಿ ಆಗಿದೆ. ಅದೇ ಉತ್ತರವನ್ನು ನಾವು ಅವರಿಂದ ಕೇಳುವುದಕ್ಕಿಲ್ಲ. ಮೊದಲು ಎಲ್ಲರ ಅಭಿಪ್ರಾಯವನ್ನು ಕೇಳಿದ ನಂತರ ಸರ್ಕಾರ ಅದಕ್ಕೆ ಉತ್ತರವನ್ನು ಕೊಡಲಿ, ಅದನ್ನು ನಾವು ಒಪ್ಪುತ್ತೇವೆ.

**ಡಾ: ಜಿ.ಪರಮೇಶ್ವರ್(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ನಾನು ಒಂದು ಸ್ಟೇಟ್‌ಮೆಂಟ್ ಮಾಡಿಬಿಡುತ್ತೇನೆ.

**ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೆ, statement ಮಾಡಿದ ಮೇಲೆ ಅವರು ಇನ್ನೇನು ಉತ್ತರ ಹೇಳುತ್ತಾರೆ?

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್(ವಿರೋಧ ಪಕ್ಷದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ನಿಯಮ 59ರ ಅಡಿಯಲ್ಲಿ ಚರ್ಚೆಗೆ ಅವಕಾಶ ಕೋರಿ ಪ್ರಸ್ತಾಪ ಮಾಡುತ್ತಿರುವ ವಿಷಯದ ಪೂರ್ವಭಾವಿ ಚರ್ಚೆ ಅರ್ಥ ಆಗಿದೆ.

**ಡಾ:ಜಿ.ಪರಮೇಶ್ವರ್(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಚರ್ಚೆಯನ್ನು ಮಾಡಲಿ. ಚರ್ಚೆಯನ್ನು ಮಾಡುವುದಕ್ಕೆ ನಮ್ಮ ಅಭ್ಯಂತರವಿಲ್ಲ. ಚರ್ಚೆ ಮಾಡಿದ ನಂತರ ಅವರು ಏನೆಲ್ಲಾ ಪ್ರಶ್ನೆಗಳನ್ನು ಕೇಳಿರುತ್ತಾರೆಯೋ ಅದಕ್ಕೆ ಸರ್ಕಾರ ಉತ್ತರವನ್ನು ಕೊಡುತ್ತದೆ. ಆದರೆ ಅದಕ್ಕೂ ಮೊದಲು ವಸ್ತುಸ್ಥಿತಿ ಏನಿದೆ, ಇಷ್ಟೆಲ್ಲಾ ನಡೆಯುತ್ತಿದ್ದರೂ ಸರ್ಕಾರ ಅದನ್ನು ಗಂಭೀರವಾಗಿ ಪರಿಗಣಿಸಿಲ್ಲ ಎಂದು ಹೇಳುವ ಮಾತಿನ ಬಗ್ಗೆ ವಸ್ತುಸ್ಥಿತಿಯನ್ನು ಸದನದ ಗಮನಕ್ಕೆ ತರುವಂತಹ ಕರ್ತವ್ಯ ನನ್ನದು; ಸಾರ್ವಜನಿಕವಾಗಿ ಇಡೀ ರಾಜ್ಯದ ಜನತೆಗೆ ತಿಳಿಸತಕ್ಕಂತಹ ಕರ್ತವ್ಯವೂ ನನ್ನದು.

**(ಗೊಂದಲ)**

**ಶ್ರೀ ಸೋಮಣ್ಣ ಮ. ಬೇವಿನಮರದ:–** ಮಾನ್ಯ ಸಭಾಪತಿಯವರೇ, ಕೆಳಮನೆಯಲ್ಲಿ ಮಾನ್ಯ ಗೃಹ ಸಚಿವರು ಹೇಳಿಕೆಯನ್ನು ಮಾಡಿರಬಹುದು, ಅದೇ ಹೇಳಿಕೆಯನ್ನು ಇಲ್ಲಿಯೂ ಮಾಡಬೇಕೆಂದೇನಿಲ್ಲ. ಅವರು ಈ ಸದನದ ಚರ್ಚೆಯನ್ನು ಕೇಳಿದ ನಂತರ ಉತ್ತರವನ್ನು ಕೊಡಲಿ.

**(ಗೊಂದಲ)**

**ಡಾ: ಜಿ.ಪರಮೇಶ್ವರ್(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಕೆಳಮನೆಯಲ್ಲಿ ಮಾನ್ಯ ಸಭಾಧ್ಯಕ್ಷರು ಹೇಳಿಕೆಯನ್ನು ನೀಡುವುದಕ್ಕೆ ಅವಕಾಶವನ್ನು ಮಾಡಿಕೊಟ್ಟಿದ್ದಾರೆ. ಅಲ್ಲಿ ಹೇಳಿಕೆಯನ್ನು ಮಾಡಿ ಬಂದಿದ್ದೇನೆ.

**ಸಭಾಪತಿಯವರು:–** ಈಗ ಹೀಗೆ ಮಾಡೋಣ.

**ಶ್ರೀ ವಿ.ಸೋಮಣ್ಣ(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ ತಮ್ಮ ಗಮನಕ್ಕೆ ತರುತ್ತೇನೆ. ಮಾನ್ಯ ಗೃಹ ಸಚಿವರು ತಡವಾಗಿ ಬಂದರು. ಬರುವುದಕ್ಕೆ ಮುಂಚಿತವಾಗಿ ನಿಯಮ 59ರ ಅಡಿಯಲ್ಲಿ ನಿಲುವಳಿ ಸೂಚನೆಯನ್ನು ಈಗಾಗಲೇ ಮಾನ್ಯ ವಿರೋಧ ಪಕ್ಷದ ನಾಯಕರು ಮಂಡನೆ ಮಾಡಿದ್ದಾರೆ. ತಾವು ಅನುಮತಿಯನ್ನು ಕೂಡ ಕೊಟ್ಟಿದ್ದೀರಿ. ಕೊಟ್ಟಾದ ಮೇಲೆ ಈ ನಿಲುವಳಿ ಸೂಚನೆಯ ಸಾಧಕ–ಬಾಧಕಗಳೇನು, ಅದರ ಸೂಕ್ಷ್ಮತೆಗಳೇನು ಎನ್ನುವುದನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ್ದಾರೆ. ಆ ಹಂತದಲ್ಲಿ ಸದನದಲ್ಲಿ ಮಾನ್ಯ ಶ್ರೀ ರಮೇಶ್ ಕುಮಾರ್‌ರವರು ಗೃಹ ಸಚಿವರ ಬದಲಾಗಿ ಉತ್ತರವನ್ನು ಹೇಳುವುದಕ್ಕೆ ನಿಂತಿದ್ದಾರೆ. ನಾನು ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುವುದೇನೆಂದರೆ, ಯಾವುದೇ ಒಂದು ನಿಲುವಳಿ ಸೂಚನೆಯನ್ನು ಮಂಡನೆ ಮಾಡಿ ಚರ್ಚೆಗೆ ಅವಕಾಶ ಕೊಟ್ಟು, ಅದನ್ನು ತೆಗೆದುಕೊಳ್ಳಬೇಕೇ, ಬೇಡವೆ ಎಂಬುದಕ್ಕಷ್ಟೇ ಸೀಮಿತವಾಗಬೇಕೆ ವಿನಃ ಸರ್ಕಾರ ಕೆಳಮನೆಯಲ್ಲಿ ಒಂದು statement ಮಾಡಿದ್ದೇವೆ, ಅದನ್ನೇ ಇಲ್ಲಿಯೂ ಕೂಡ ಪುನರುಚ್ಚಾರ ಮಾಡುತ್ತೇವೆ ಎಂದು ಹೇಳುವಂತಹದ್ದು ಸರಿಯಲ್ಲ. ಈ ಒಂದು ಸಂದರ್ಭದಲ್ಲಿ ಅಂದರೆ, ಮಾನ್ಯ ವಿರೋಧ ಪಕ್ಷದ ನಾಯಕರು ತಮ್ಮ ಅನುಮತಿಯ ಮೇರೆಗೆ ನಿಲುವಳಿ ಸೂಚನೆಯನ್ನು ಮಂಡನೆ ಮಾಡಿದ ಮೇಲೆ ಅದರ ಬಗ್ಗೆ ಇರತಕ್ಕಂತಹ ಚರ್ಚೆಯನ್ನು ಮುಂದೆ ಯಾವ ರೀತಿ ತೆಗೆದುಕೊಳ್ಳಬೇಕು ಎನ್ನುವುದನ್ನು ವಿಮರ್ಶೆ ಮಾಡಿ ತಮ್ಮ ಭಾವನೆಗಳನ್ನು ವ್ಯಕ್ತಪಡಿಸಿದಂತಹ ಸಂದರ್ಭದಲ್ಲಿ ಅದಕ್ಕೆ ಸನ್ಮಾನ್ಯ ಆರೋಗ್ಯ ಸಚಿವರು ಉತ್ತರಿಸುವುದಕ್ಕೆ ನಿಂತಾಗ ಮಧ್ಯದಲ್ಲಿ ಸನ್ಮಾನ್ಯ ಗೃಹಸಚಿವರು ಪ್ರವೇಶಿಸಿ, ನಾನು ಸರ್ಕಾರದ ಹೇಳಿಕೆಯನ್ನು ಕೊಡುತ್ತೇನೆ, ಅದಾದ ನಂತರ ನೀವು ಏನು ಬೇಕಾದರೂ ಚರ್ಚೆಯನ್ನು ಮಾಡಿ ಎಂದು ಹೇಳುವುದರಲ್ಲಿ ಅರ್ಥವಿಲ್ಲ. ಇದು ಯಾವುದೇ ಕಾರಣಕ್ಕೆ ಈ ನಿಯಮದಡಿಯಲ್ಲಿ ವ್ಯವಸ್ಥಿತವಾಗಿ ಬರುವುದಿಲ್ಲ. ಆದರೆ ತಾವು ಈಗಾಗಲೇ ನಿಲುವಳಿ ಸೂಚನೆಯ

ಅಡಿಯಲ್ಲಿ ಯಾವ ವಿಷಯದ ಬಗ್ಗೆ ಪೂರ್ವಭಾವಿ ಚರ್ಚೆಗೆ ಅವಕಾಶ ಮಾಡಿಕೊಟ್ಟಿದ್ದೀರಿ, ಇದಕ್ಕೆ ಅವಕಾಶವನ್ನು ಕೊಡಿ. ನಂತರ ಸಚಿವರು ಉತ್ತರ ಕೊಟ್ಟು, ಮತ್ತೆ ತಮ್ಮದೇ ಆದ ದೃಷ್ಟಿಕೋನ ಏನಿದೆ ಎಂಬುದನ್ನು ಅವರು ತಿಳಿಸಲಿ. ಅಲ್ಲಿ ಏನೇನು ಅನ್ಯಾಯಗಳಾಗಿವೆ, ತೊಂದರೆಗಳಾಗಿವೆ, ಇಂತಹ ಒಂದು ಸೂಕ್ಷ್ಮತೆಯ ವಿಚಾರವನ್ನು ಪ್ರಾಯಶ: ಯಾವುದೇ ಒಂದು ಪಕ್ಷ ಎನ್ನುವುದಕ್ಕಿಂತ ಹೆಚ್ಚಾಗಿ ರಾಜ್ಯದ ಜನತೆಯ ಭಾವನೆಗಳಿಗೆ ನಾವು ಸ್ಪಂದಿಸಬೇಕಾಗುತ್ತದೆ. ಜನರಲ್ಲಿ ಉಂಟಾಗಿರುವ ಒಂದು ರೀತಿಯ ಕಹಿ ಭಾವನೆಯ ಕುರಿತು ಸರ್ಕಾರ ಹಾರಿಕೆ ಉತ್ತರವನ್ನು ನೀಡಿ ಜಾರಿಕೊಳ್ಳುವಂಥದ್ದು ಎಷ್ಟರ ಮಟ್ಟಿಗೆ ಸರಿ? ದಯಮಾಡಿ ತಾವು ನಿಲುವಳಿ ಸೂಚನೆಯನ್ನು ಮುಂದುವರೆಸಿ. ಅದಾದ ನಂತರ ಸರ್ಕಾರ ತನ್ನ ನಿಲುವನ್ನು ವ್ಯಕ್ತಪಡಿಸಲಿ.

**ಸಭಾಪತಿಯವರು:–** ಈಗ ನಿಲುವಳಿ ಸೂಚನೆಗೆ ನಾನಿನ್ನೂ ಅನುಮತಿಯನ್ನು ಕೊಟ್ಟಿಲ್ಲ.

**ಡಾ: ಜಿ.ಪರಮೇಶ್ವರ್:–** ಮಾನ್ಯ ಸಭಾಪತಿಗಳೆ, ನಾನು ನಿಲುವಳಿ ಸೂಚನೆಗೆ ಅಡ್ಡಿ ಬರಲಿಲ್ಲ. Let me make it very clear. ಈಗಾಗಲೇ ನಾವು ಕೆಳಮನೆಯಲ್ಲಿ ಹೇಳಿಕೆಯನ್ನು ಕೊಟ್ಟಾಗಿದೆ. ಅದಕ್ಕೆ ಈ ಮನೆಯನ್ನು ಕತ್ತಲಿನಲ್ಲಿಡುವುದಕ್ಕೆ ನನಗೆ ಇಷ್ಟವಿಲ್ಲ. ಅದಕ್ಕೆ ನಾನು ಒಂದು ಹೇಳಿಕೆಯನ್ನು ಕೊಡುತ್ತಿದ್ದೇನೆ. ತಾವು ಎಲ್ಲಾ ವಿಷಯಗಳ ಬಗ್ಗೆ ತಮಗೆ ಏನೇನು ಮಾಹಿತಿಗಳು ದೊರೆತಿದೆಯೋ ಅವುಗಳ ಬಗ್ಗೆ ಚರ್ಚೆ ಮಾಡಿ. ನಾವು ಅಡ್ಡ ಬರುವುದಿಲ್ಲ.

**(ಗೊಂದಲ)**

**ಸಭಾಪತಿಯವರು:–** ನಾನು ನಿಯಮ 59ರ ಅಡಿಯಲ್ಲಿ ಚರ್ಚೆಗೆ ಅವಕಾಶವನ್ನು ನೀಡಿಲ್ಲ. ಈಗ ಪ್ರಾಸ್ತಾವಿಕವಾಗಿ ಚರ್ಚೆಗೆ ಅವಕಾಶ ನೀಡಿದ್ದೇನೆ. ಅದನ್ನು ನಿಯಮ 59ರಡಿಯಲ್ಲಿ ಚರ್ಚೆಗೆ ತೆಗೆದುಕೊಳ್ಳಬೇಕೋ ಬೇಡವೋ ಎನ್ನುವ ಬಗ್ಗೆ ಮಾತ್ರ ಚರ್ಚೆ ನಡೆಯುತ್ತಿದೆ.

**(ಗೊಂದಲ)**

**ಸಭಾಪತಿಯವರು:** ಎಲ್ಲರೂ ಒಟ್ಟಿಗೆ ಮಾತನಾಡಬೇಡಿ. ಒಬ್ಬೊಬ್ಬರಾಗಿ ಮಾತನಾಡಿ. ಶ್ರೀಕಂಠೇಗೌಡರು ಅವಕಾಶವನ್ನು ಕೇಳುತ್ತಿದ್ದಾರೆ. ಮೊದಲು ಅವರು ಮಾತನಾಡಲಿ.

**ಶ್ರೀ ಭಾನುಪ್ರಕಾಶ್(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೆ,

**ಶ್ರೀ ಕೆ.ಟಿ.ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ):–** ನನಗೆ ಮಾತನಾಡಲು ಅವಕಾಶವನ್ನು ಕೊಟ್ಟಿದ್ದಾರೆ.

**ಸಭಾಪತಿಯವರು:–** ನಂತರ ನಿಮಗೂ ಅವಕಾಶವನ್ನು ಕೊಡುತ್ತೇನೆ. ಅವರು ನಿಂತಿದ್ದಾರೆ. ಮಾತನಾಡಲಿ ಬಿಡಿ.

**ಶ್ರೀ ಭಾನುಪ್ರಕಾಶ್ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ರಾಜ್ಯದಲ್ಲಿ ಏನೇನು ನಡೆಯುತ್ತಿದೆ ಎಂಬುದರ ಬಗ್ಗೆ ಚರ್ಚಿಸಲು ನಾವು ನಿಯಮ 59ರಡಿಯಲ್ಲಿ ತಮಗೆ ಒಂದು ನೋಟೀಸ್ ಅನ್ನು ಕೊಟ್ಟಿದ್ದೇವೆ. ಆದ್ದರಿಂದ ಸದನದ ಉಳಿದೆಲ್ಲಾ ಕಲಾಪಗಳನ್ನು ಬದಿಗಿಟ್ಟು ಈ ವಿಷಯವನ್ನು ಕೈಗೆತ್ತಿಕೊಳ್ಳಬೇಕೆಂಬ ಪ್ರಸ್ತಾಪವನ್ನಿಟ್ಟಿದ್ದೇವೆ. ತಮಗೆ ಮನದಟ್ಟು ಮಾಡುವುದಕ್ಕೆ ಒಂದಷ್ಟು ಸಾಧಾರಣವಾದಂತಹ ಉದಾಹರಣೆಗಳನ್ನು ಕೊಟ್ಟಿದ್ದೇವೆ. ನಮ್ಮ ಹತ್ತಿರ ಇನ್ನೂ ಬಹಳಷ್ಟು ದಾಖಲೆಗಳಿವೆ. ನಮಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟರೆ ನಾವು ಅದನ್ನು ಕೊಡುತ್ತೇವೆ. ಆ ಚರ್ಚೆ ನಡೆಯುತ್ತಿರುವ ಮಧ್ಯದಲ್ಲಿಯೇ ಸರ್ಕಾರ ಬಂದು ಹೇಳಿಕೆ ಮಾಡುತ್ತೇವೆನ್ನುವುದು ಎಷ್ಟು ಸರಿಯಾಗುತ್ತದೆ? ಪ್ರಾರಂಭದಲ್ಲಿಯೇ ಸಭಾ ನಾಯಕರೆದ್ದು ಈ ನಿಲುವಳಿ ಸೂಚನೆಯನ್ನು ತೆಗೆದುಕೊಳ್ಳಬೇಡಿ. ಪತ್ರಿಕೆಗಳಲ್ಲಿ ಬರುವುದನ್ನು ನಂಬಬೇಡಿ. ಪತ್ರಿಕೆಗಳಲ್ಲಿ ಏನೇನೋ ಬರುತ್ತದೆ. ಅದರ ಬಗ್ಗೆ ನಮ್ಮ ಸರ್ಕಾರ ಈ ರೀತಿಯ ಕ್ರಮವನ್ನು ತೆಗೆದುಕೊಂಡಿದೆ, ಅದರ ಬಗ್ಗೆ ಸರ್ಕಾರದ ಪರವಾಗಿ ಒಂದು ಲಿಖಿತ ಹೇಳಿಕೆಯನ್ನು ಓದುತ್ತೇನೆ ಎಂದು ಹೇಳಿದ್ದರೆ ಅದರ ಬಗ್ಗೆ ನಾವು ಚರ್ಚೆಯನ್ನು ಮಾಡುತ್ತಿದ್ದೆವು. ಆದರೆ ನಾವು ಈಗ ನಿಯಮ 59ರಡಿಯಲ್ಲಿಯೇ ಏಕೆ ಚರ್ಚೆ ಮಾಡಬೇಕೆಂಬುದರ ಬಗ್ಗೆ

ಮನದಟ್ಟು ಮಾಡುವಂತಹ ಪ್ರಯತ್ನವನ್ನು ಮಾಡಿದ್ದೇವೆ. ಹಿರಿಯರಾದಂತಹ ಶ್ರೀ ರಮೇಶ್‌ಕುಮಾರ್‌ರವರು ಇಲ್ಲಿದ್ದಾರೆ. ಗೃಹ ಸಚಿವರು ಬಾರದ ಸಮಯದಲ್ಲಿ ಅವರಿಗೆ ಅನುಮತಿಯನ್ನು ಕೊಟ್ಟಿದ್ದರು. ಪ್ರಾರಂಭದಲ್ಲಿ ಸರ್ಕಾರಿ ಮುಖ್ಯ ಸಚೇತಕರು ಮಾನ್ಯ ಸಮಾಜ ಕಲ್ಯಾಣ ಸಚಿವರು ಉತ್ತರವನ್ನು ನೀಡುತ್ತಾರೆಂದು ಹೇಳಿದ್ದರು. ಆದರೆ ಈಗ ಶ್ರೀ ರಮೇಶ್‌ಕುಮಾರ್‌ರವರು ಪ್ರಸ್ತಾಪ ಮಾಡುವುದಕ್ಕೆ ಪ್ರಾರಂಭ ಮಾಡಿದರು. ಅದಕ್ಕೂ ನಾವು ಒಪ್ಪಿಕೊಂಡಿದ್ದೇವೆ. ಶ್ರೀ ರಮೇಶ್ ಕುಮಾರ್‌ರವರು ನಿಂತು ಮಾತನಾಡುವ ಸಂದರ್ಭದಲ್ಲಿ ಇದನ್ನು ತೆಗೆದುಕೊಳ್ಳಬೇಕೋ ಬೇಡವೋ ಎಂದು ಪ್ರಸ್ತಾಪ ಮಾಡುತ್ತಿದ್ದರು. ಅದರ ಮಧ್ಯೆ ಇನ್ನೊಂದು ಕಲಾಪವನ್ನು ತೆಗೆದುಕೊಳ್ಳುವುದಕ್ಕೆ ಹೇಗೆ ಬರುತ್ತದೆ. ನಿಮಗೆ ಇದು ಮನದಟ್ಟಾಗಿದ್ದರೆ ಇವೆಲ್ಲವನ್ನೂ ಬದಿಗೊತ್ತಿ, ನಿಯಮ 59ರ ಅಡಿಯಲ್ಲಿ ನಮ್ಮ ಕಲಾಪವನ್ನು ತೆಗೆದುಕೊಂಡು ವಿರೋಧಪಕ್ಷದ ನಾಯಕರಿಗೆ ಹಾಗೂ ನಮಗೆ ಅವಕಾಶವನ್ನು ಕೊಡಬೇಕೆಂದು ಕೋರುತ್ತೇನೆ. ಏಕೆಂದರೆ ರಾಜ್ಯದಲ್ಲಿ ಇದಕ್ಕಿಂತ ಗಂಭೀರವಾದಂಥದ್ದು ಇಲ್ಲ. ರಾಜ್ಯದ ಜನ ಕಂಗಾಲಾಗಿದ್ದಾರೆ. ಸರ್ಕಾರದ ನಿಲುವನ್ನು ರಾಜ್ಯದ ಜನ ಅನುಮಾನದಿಂದ ನೋಡುತ್ತಿದ್ದಾರೆ. ಹಾಗಾಗಿ ಆ ನಿಲುವನ್ನು ಸರ್ಕಾರವು ಸ್ಪಷ್ಟ ಪಡಿಸಿಬಿಟ್ಟರೆ, ನಮ್ಮ ಬಳಿ ಚರ್ಚೆ ಮಾಡುವುದಕ್ಕೆ ಏನಿದೆ? ದಯವಿಟ್ಟು ಯಾವುದೇ ಕಾರ್ಯಕಲಾಪಗಳನ್ನು ತೆಗೆದುಕೊಳ್ಳದೆ ನಮ್ಮ ಚರ್ಚೆಯಾಗುತ್ತಿರುವ ವಿಷಯವನ್ನೆ ತೆಗೆದುಕೊಳ್ಳಬೇಕು.

**ಸಭಾಪತಿಯವರು:–** ಶ್ರೀಕಂಠೇಗೌಡರು ಮಾತನಾಡಲಿ. ಆದರೆ ತಾವು ಈ ವಿಷಯದ ಬಗ್ಗೆ ಮಾತ್ರ ಮಾತನಾಡಬೇಕು.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಸನ್ಮಾನ್ಯ ಸಭಾಪತಿಯವರೆ, ಇವತ್ತು ನಾಡಿನ ಜನ ಅತ್ಯಂತ ಆತಂಕದಲ್ಲಿದ್ದಾರೆ. ರೈತರ ಸರಣಿ ಆತ್ಮಹತ್ಯೆ ಬೆನ್ನಲ್ಲಿಯೇ ಶ್ರೀ ಗಣಪತಿಯವರಂತಹ ಅಧಿಕಾರಿಗಳ ಆತ್ಮಹತ್ಯೆ, ಅಧಿಕಾರಿಗಳ ಮೇಲೆ ಹಲ್ಲೆ ನಿರಂತರವಾಗಿ ನಡೆಯುತ್ತಿರುವ ಸಂದರ್ಭದಲ್ಲಿ ಇಡೀ ನಾಡಿನ ಜನ ಆತಂಕಕ್ಕೆ ಒಳಗಾಗಿದ್ದಾರೆ. ಅದರಲ್ಲಿಯೂ ಪೊಲೀಸರೇ ದೂರನ್ನು ಬರೆದು ಗಣಪತಿಯವರ 80 ವರ್ಷ ವಯಸ್ಸಿನ ತಂದೆಯವರ ಕೈಯಲ್ಲಿ ಸಹಿ ಮಾಡಿಸಿಕೊಳ್ಳುವ ಸಂದರ್ಭ ನಿರ್ಮಾಣವಾಗಿರುವಾಗ ವಿರೋಧಪಕ್ಷದವರಾದ ನಾವು ಅತ್ಯಂತ ಮಹತ್ವವಾದ ಈ ವಿಷಯದ ಬಗ್ಗೆ ನಿಲುವಳಿ ಚರ್ಚೆಗೆ ಅವಕಾಶವನ್ನು ಕೊಡಬೇಕೆಂದು ಪ್ರಿಲಿಮಿನರಿ ಸಬ್ಮಿಷನ್ ಮಾಡಿದ್ದೇವೆ. ಈಗ ಪ್ರಿಲಿಮಿನರಿ ಸಬ್ಮಿಷನ್ ಮುಗಿದಿದೆ. ಈ ಹಂತದಲ್ಲಿ ಸರ್ಕಾರದ ಪರವಾಗಿ ಸಚಿವರು ಉತ್ತರವನ್ನು ಕೊಡಲಿಕ್ಕೆ ಹೊರಟಿದ್ದಾರೆ. ಈ ನಡುವೆ ಹೇಳಿಕೆಯ ಅವಶ್ಯಕತೆ ಏನಿದೆ? ಇಲ್ಲವಾದಲ್ಲಿ ಹೇಳಿಕೆಯನ್ನು ಮೊದಲೇ ಮಾಡಬೇಕಾಗಿತ್ತು. ಪ್ರಿಲಿಮಿನರಿ ಸಬ್ಮಿಷನ್ ಗೆ ಸರ್ಕಾರ ಉತ್ತರ ಕೊಟ್ಟ ಮೇಲೆ ತಮ್ಮ ತೀರ್ಪು ಬಂದ ಮೇಲೆ ಹೇಳಿಕೆ ಮಾಡಲು ನಮ್ಮದೇನು ಅಡ್ಡಿಯಿಲ್ಲ. ಆದರೆ ಈಗ ಪ್ರಿಲಿಮಿನರಿ ಸಬ್ಮಿಷನ್ ನಮ್ಮ ಕಡೆಯಿಂದ ಅಂದರೆ ವಿರೋಧ ಪಕ್ಷಗಳಿಂದ ಮುಗಿದಿದೆ. ಆಡಳಿತ ಪಕ್ಷದ ಸಚಿವರು ಉತ್ತರವನ್ನು ಮಾಡುತ್ತಿದ್ದಾರೆ. ತಮ್ಮ ತೀರ್ಪು ಬರಬೇಕಾಗಿದೆ. ಆಮೇಲೆ ಅವರು ಹೇಳಿಕೆಯನ್ನು ಮಾಡಲು ನಮ್ಮ ಯಾವುದೇ ಅಡ್ಡಿಯೂ ಇಲ್ಲ ಆತಂಕವೂ ಇಲ್ಲ ಎಂಬುದನ್ನು ತಮ್ಮ ಗಮನಕ್ಕೆ ತರುತ್ತೇನೆ.

**ಶ್ರೀ ಸುನಿಲ್ ಸುಬ್ರಮಣಿ ಎಂ.ಪಿ. (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ದಯವಿಟ್ಟು ನಮ್ಮ ಕೊಡಗು ಜಿಲ್ಲೆಯ ಬಗ್ಗೆ ಮಾತನಾಡಲಿಕ್ಕೆ ನನಗೆ ಅವಕಾಶ ಕೊಡಬೇಕು. ಕೊಡಗು ಪುಟ್ಟ ಜಿಲ್ಲೆ. ಈ ಜಿಲ್ಲೆಯಿಂದ ದೇಶಕ್ಕೆ ಬೇಕಾದಷ್ಟು ಕೊಡುಗೆಯನ್ನು ನೀಡಲಾಗಿದೆ. ಇಬ್ಬರು ಜನರಲ್‌ಗಳು ಅಂದರೆ ಜನರಲ್ ತಿಮ್ಮಯ್ಯ ಮತ್ತು ಜನರಲ್ ಕಾರ್ಯಪ್ಪ ಇವರು ಕೊಡಗು ಜಿಲ್ಲೆಯವರು. ಸುಮಾರು 28 ಲೆಫ್ಟಿನೆಂಟ್ ಜನರಲ್‌ಗಳು ಕೊಡಗು ಜಿಲ್ಲೆಯವರಾಗಿದ್ದಾರೆ. ಗಡಿಯನ್ನು ಕಾಯುತ್ತಿರುವ ಸಾವಿರಾರು ಯೋಧರು ಕೊಡಗು ಜಿಲ್ಲೆಯವರು. ಹಾಗೆಯೇ ಕರ್ನಾಟಕ ರಾಜ್ಯಕ್ಕೆ ಬಂದರೆ ಉತ್ತಮ ಸಂಸದೀಯ ಪಟುಗಳಾದಂತಹ ಶ್ರೀ ಯಂ.ಸಿ.ನಾಣಯ್ಯ ಮತ್ತು ಶ್ರೀ ಎ.ಕೆ.ಸುಬ್ಬಯ್ಯನವರಂತಹವರು ಕೊಡಗು ಜಿಲ್ಲೆಯವರಾಗಿದ್ದಾರೆ. ಅನೇಕ ಪೋಲೀಸ್ ಅಧಿಕಾರಿಗಳೂ ಕೂಡ ಕೊಡಗು ಜಿಲ್ಲೆಯವರಾಗಿದ್ದಾರೆ. ಅದರಲ್ಲಿ ಗಣಪತಿಯವರೂ ಕೂಡ ಒಬ್ಬರು. ಅವರು ಅಪಾಯಿಂಟ್ ಆದ ತಕ್ಷಣ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ...

**ಸಭಾಪತಿಯವರು:–** ಈಗ ಆ ವಿವರಗಳು ಬೇಡ. ನಿಲುವಳಿ ಸೂಚನೆ ತೆಗೆದು ಕೊಳ್ಳಬೇಕೆ ಬೇಡವೇ? ಎಂಬುದರ ಬಗ್ಗೆ ಮಾತ್ರ ಹೇಳಿ.

**(ಗೊಂದಲ)**

**ಶ್ರೀ ಸುನಿಲ್ ಸುಬ್ರಮಣಿ ಎಂ.ಪಿ.:–** ಗಣಪತಿಯವರು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೆಲಸವನ್ನು ಮಾಡಿದ್ದಾರೆ. ಅವರು ಕೆಲಸವನ್ನು ಹೇಗೆ ಮಾಡಿದ್ದಾರೆಂಬ ಬಗ್ಗೆ ಪತ್ರಿಕೆಯವರು ಬರೆದಿದ್ದಾರೆ. ನಾನು ಹೇಳುತ್ತಿಲ್ಲ.

**(ಗೊಂದಲ)**

**ಸಭಾಪತಿಯವರು:–** ನಿಲುವಳಿ ಸೂಚನೆಯಲ್ಲಿ ಅಥವಾ ಬೇರೆ ಯಾವುದೇ ರೂಪದಲ್ಲಿ ಬಂದಾಗ ನಿಮಗೆ ಅವಕಾಶವನ್ನು ಕೊಡುತ್ತೇನೆ. ಈಗ ಬೇಗ ಮುಗಿಸಿ.

**ಶ್ರೀ ಸುನಿಲ್ ಸುಬ್ರಮಣಿ ಎಂ.ಪಿ.:–** ಅವರು ಮೊದಲಿಗೆ ಉಲ್ಲಾಳದಲ್ಲಿ ಕೆಲಸ ಮಾಡುತ್ತಾರೆ. ಹಾಗೆಯೇ ಪುತ್ತೂರು, ಬಿ.ಸಿ.ರೋಡ್...

**ಸಭಾಪತಿಯವರು:–** ಇದು ಚರ್ಚೆಯಲ್ಲ. ನಾನು ಸರ್ಕಾರವನ್ನು ಕರೆಯುತ್ತೇನೆ. ನಿಲುವಳಿ ಸೂಚನೆಗೆ ಅವಕಾಶವನ್ನು ಕೊಟ್ಟಾಗ ಇದರ ಬಗ್ಗೆ ಚರ್ಚಿಸಬೇಕು ಎಂದು ಕೇಳಿ.

**ಶ್ರೀ ಸುನಿಲ್ ಸುಬ್ರಮಣಿ ಎಂ.ಪಿ.:–** ಮಾನ್ಯ ಸಭಾಪತಿಗಳೆ, ಗಣಪತಿಯವರ ಬಗ್ಗೆ ಕಾಂಗ್ರೆಸ್ಸಿನ ಮಂತ್ರಿಗಳೇ ಒಳ್ಳೆಯ ಅಭಿಪ್ರಾಯವನ್ನು ಕೊಡುತ್ತಾರೆ. ಅವರು ಡಿ.ಕೆ.ಶಿವಕುಮಾರ್ ಇರಬಹುದು...

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಸಚಿವರು ಹೇಳಿ.

**ಶ್ರೀ ಕೆ.ಆರ್.ರಮೇಶ್ ಕುಮಾರ್(ಮಾನ್ಯ ಆರೋಗ್ಯ ಸಚಿವರು):–** ಸನ್ಮಾನ್ಯ ಸಭಾಪತಿಗಳೆ, ನಾನು ನಿಯಮದ ವಿಚಾರ ಸೂಕ್ಷ್ಮವಾಗಿಯಷ್ಟೆ ಹೇಳಿದ್ದೇನೆ. ಅದರ ಜೊತೆಗೆ ನಿಯಮದ ನೆಪ ಇಟ್ಟುಕೊಂಡು ಸತ್ಯವನ್ನು ಸಾಯಿಸಬೇಕು ಅನ್ನುವ ಇರಾದೆ ನಮಗಿಲ್ಲ ಎಂದು ಹೇಳಿದೆ. ಆದರೆ ನಮ್ಮನ್ನು ನಾವು ಪರಿಪಾಲನೆ ಮಾಡಿಕೊಳ್ಳುವುದಕ್ಕೆ ಕೆಲವು ಶಾಸನಗಳಿವೆ. ಅವುಗಳನ್ನು ನಾವು ಗೌರವಿಸಲೇಬೇಕು. ಅದು ರಾಷ್ಟ್ರಪತಿಗಳಿಂದ ಹಿಡಿದು ಕೂಲಿ ಮಾಡಿ ಜೀವನ ಮಾಡುವವರವರೆಗೂ ಸರಿಸಮಾನ. ಯಾರಿಗೂ ವ್ಯತ್ಯಾಸವಾಗಬಾರದು. ಇದು ಸಂವಿಧಾನ ನಮಗೆ ಕೊಟ್ಟಿರುವಂತಹ ಹಕ್ಕು. ಗಣಪತಿಯವರ ವಿಚಾರವನ್ನು ಹೇಳಿದ್ದೀರಿ. ಇಲ್ಲಿರುವ ಯಾರಿಗಾದರೂ ಗಣಪತಿಯವರ ಸಾವು ಸಂತೋಷ ಉಂಟು ಮಾಡುತ್ತದೆಯೇ? ಆನಂದ ತರುತ್ತದೆಯೇ? ಸಂಬಂಧವಿಲ್ಲದಿರುವ ಯಾರಾದರೂ ದಾರಿಯಲ್ಲಿ ಸಾವಿಗೀಡಾದರೂ ನಾವು ದುಃಖಿಸಬೇಕು. ಇಲ್ಲದಿದ್ದರೆ ನಾವು ಮನುಷ್ಯರಾಗುತ್ತೇವೆಯೇ? ಅದರಲ್ಲಿ ಪೊಲೀಸ್ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿದ್ದಂತಹ ಒಬ್ಬ ಡಿವೈಎಸ್ಪಿಯವರು ತಮಗಿನ್ನೂ ಆಯಸ್ಸು ಇದ್ದರೂ ಕೂಡ ಯಾವ ಕಾಯಿಲೆ ಏನೂ ಇಲ್ಲದೆ ಆಕಸ್ಮಿಕವಾಗಿ ತಮ್ಮ ಜೀವನವನ್ನು ತಾವೇ ಅಂತ್ಯ ಮಾಡಿಕೊಳ್ಳುತ್ತಾರೆಂದರೆ ನಿಮ್ಮಷ್ಟೇ ಆತಂಕ ನಮಗೂ ಆಗುತ್ತದೆ. ಏಕೆ ನಮಗೆ ಆತಂಕವಿಲ್ಲವೆಂದು ತಿಳಿದುಕೊಳ್ಳುತ್ತೀರಿ. ಇದನ್ನು ಡಿಫೆಂಡ್ ಮಾಡಿಕೊಂಡು ನಮ್ಮ ಸರ್ಕಾರ ಉಳಿದುಕೊಳ್ಳಬೇಕೆ? ಅಷ್ಟು ನೀಚ ಸರ್ಕಾರವಾಗಿರುತ್ತದೆಯೇ? ಅಷ್ಟು ದುರ್ಬಲವಾದ ಸರ್ಕಾರವಾಗಿರುತ್ತದೆಯೇ? ಅವರ ಕುಟುಂಬ ಏನಾಗಿದೆ? ಅವರ ತಂದೆ ತಾಯಿ ಏನಾಗಿದ್ದಾರೆ? ಅವರು 80 ವರ್ಷದ ವೃದ್ಧರಿದ್ದಾರೆ. ನಮ್ಮದೇ ಮನೆಯೊಳಗೆ ಈ ರೀತಿಯ ಘಟನೆ ನಡೆದರೆ ನಾವು ಎಷ್ಟು ನೋವನ್ನು ಅನುಭವಿಸುತ್ತೇವೆ. ಆದರೆ ಕಾನೂನು ಏನು ಹೇಳುತ್ತದೆ? ಈ ತರಹದ ಒಂದು ಘಟನೆ ಅಂದರೆ ಆತ್ಮಹತ್ಯೆ ನಡೆದಾಗ ಇದನ್ನು ಕಾನೂನು ರೀತ್ಯಾ ಯುಡಿಆರ್ ಎಂದು ರಿಜಿಸ್ಟರ್ ಮಾಡುತ್ತಾರೆ. ಯಾರಾದರೂ ಈ ಕೃತ್ಯವನ್ನು ಗಮನಿಸಿ, ಅದು ರೂಂ ಬಾಯ್ ಇರಬಹುದು, ಮ್ಯಾನೇಜರ್ ಇರಬಹುದು ಅಥವಾ ಅವರ ಮನೆಯವರಿರಬಹುದು ಘಟನೆ ನಡೆದ ತಕ್ಷಣ ಏನು ತಿಳಿಸಿರುತ್ತಾರೆ ಅದನ್ನು 174 ಅಡಿಯಲ್ಲಿ ಒಂದು ಕೇಸನ್ನು ರಿಜಿಸ್ಟರ್ ಮಾಡುತ್ತಾರೆ. ಯುಡಿಆರ್ ಅಂದರೆ ಅಸ್ವಾಭಾವಿಕವಾದಂತಹ ಸಾವು

(unnatural death). ಹೃದಯಾಘಾತದಿಂದ ಸಾಯಬಹುದು, ಆಕ್ಸಿಡೆಂಟ್ ಆಗಿ ಸಾಯಬಹುದು. ವಯಸ್ಸಾಗಿ ಸಾಯಬಹುದು. ಕಾಯಿಲೆಯಿಂದ ಸಾಯಬಹುದು. ಇವುಗಳು ಯಾವೂ ಅಲ್ಲದೆ ಸ್ವಾಭಾವಿಕವಾಗಿ ಸಾಯದೆ ಅಸ್ವಾಭಾವಿಕವಾಗಿ ಆಗುವಂತಹ ಸಾವನ್ನೇ ನಾವು ಯುಡಿಆರ್ ಎಂದು ಹೇಳುತ್ತೇವೆ. ಅದೇ ಎಫ್.ಐ.ಆರ್. ಮಾನ್ಯ ವಿರೋಧ ಪಕ್ಷದ ನಾಯಕರೆ, ಯಾವುದೇ ಕೇಸ್ ಇರಲಿ, ಘಟನೆ ನಡೆದಾಗ ಮೊದಲ ವರ್ತಮಾನ nearest Police Station ಗೆ reach ಆಗುತ್ತದೆ. ಅದು ಪ್ರಥಮ ವರ್ತಮಾನ (First Information Report) ಆಗುತ್ತದೆ. ಅದರಲ್ಲಿ ಬಂದಿರುವಂಥದ್ದು ಅಸ್ವಾಭಾವಿಕ ಸಾವು. ಇಲಾಖೆಯವರು ಏನು ಮಾಡಬೇಕು? ತಕ್ಷಣಕ್ಕೆ ಅದನ್ನು ಸಿ.ಐ.ಡಿ.ಗೆ enquiry ಗೆ ಹಾಕಿದ್ದಾರೆ. ಶ್ರೀ ಎಂ.ಕೆ. ಗಣಪತಿ, Dy.S.P. ಇವರನ್ನು ಕೆಟ್ಟವರು ಎಂದು ಸರ್ಕಾರ ಏನಾದರು ಹೇಳಿದೆಯೇ? ಅಥವಾ ಅವರು ಸತ್ತು ಹೋಗಿದ್ದು ಸರಿ ಎಂದು ಹೇಳಿದೆಯಾ? ಅಥವಾ ಇಂಥವರು ಸಾಯಬೇಕಾಗಿತ್ತು ಎಂದು ಯಾರಾದರು ಹೇಳದಿದ್ದಾರೆಯೇ? ಇಲ್ಲ. ಅವರು ಒಳ್ಳೆಯವರೇ, ಕೆಟ್ಟವರೆ, ಏಕೆ ಸತ್ತರು, ಏನಾಗಿತ್ತು ಎಂದು ಇದೆಲ್ಲಾ ಗೊತ್ತಾಗುವುದು ಯಾವಾಗ?

**(ಗೊಂದಲ)**

**ಶ್ರೀ ಸುನೀಲ್ ಸುಬ್ರಮಣ್ಯ ಎಂ.ಪಿ.:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ತುಂಬಾ ಒಳ್ಳೆಯ ರೀತಿಯಲ್ಲಿ ಉತ್ತರ ಕೊಡುತ್ತಿದ್ದಾರೆ ಸಂತೋಷ. ಏಕೆಂದರೆ, ಶ್ರೀ ಬಿ.ಕೆ.ಸಿಂಗ್, ಡಿಐಜಿ ಎನ್ನುವಂಥವರಿಂದ ಅವನಿಗೆ ಮಾನಸಿಕ ಖಿನ್ನತೆ ಇದೆ ಎಂದು ಹೇಳಿಸುತ್ತಾರೆ. ದಯವಿಟ್ಟು ನಾನು ನಿಮ್ಮಲ್ಲಿ ಕೇಳುವುದೇನೆಂದರೆ, ಈ ಪೊಲೀಸ್ ಅಧಿಕಾರಿ ಯಾವಾಗ ಎಂ.ಬಿ.ಬಿ.ಎಸ್. ಓದಿದ್ದರು? ನನಗೆ ಬೇಕಾಗಿರುವುದಷ್ಟೆ.

**(ಗೊಂದಲ)**

**ಶ್ರೀ ಕೆ.ಆರ್.ರಮೇಶ್ ಕುಮಾರ್:-** ಮಾನ್ಯ ಸದಸ್ಯರು ಕೊಡಗಿನಿಂದ ಹೊಸದಾಗಿ ಆಯ್ಕೆಯಾಗಿ ಬಂದಿದ್ದಾರೆ. ಅವರಿಗೂ ಸ್ವಲ್ಪ ಆತಂಕ ಇರುತ್ತದೆ. ಆದರೆ ನಮ್ಮನ್ನು ನಾವು ನಿಯಂತ್ರಿಸಿಕೊಳ್ಳುವುದಕ್ಕೆ ಒಂದು ಸಾಧನವಿದೆ. ಯಾರೇ ಸರ್ಕಾರದಲ್ಲಿದ್ದರೂ ಅಂದರೆ ನೀವೇ ಇದ್ದರೂ, ನಾನೇ ಇದ್ದರೂ ಈ ವ್ಯವಸ್ಥೆಯೊಳಗೆ natural consequences of law ತನ್ನದೇ ಆದಂತಹ ಹಾದಿಯನ್ನು ಹಿಡಿಯಬೇಕು, ಅದು ಹಾದಿ ತಪ್ಪಿ ಹೋಗುವಂತಿಲ್ಲ. ಅಸ್ವಾಭಾವಿಕವಾದ ಸಾವನ್ನು ಗಮನಿಸಿದ್ದಾರೆ, ಅದಾದಮೇಲೆ 174ಗೆ ಕೇಸ್ ರಿಜಿಸ್ಟರ್ ಆಗಿದೆ. ಅದಾದ ಮೇಲೆ enquiry ಪ್ರಾರಂಭವಾಗಿದೆ. enquiry ಯ ಪೂರ್ಣ ಪಲಿತಾಂಶ ಹೊರಗಡೆ ಬಂದಮೇಲೆ ಈ ಸಾವಿಗೆ ಯಾರಾದರು ಕಾರಣ ಇದ್ದರೆ? ಆತನಿಗೆ ಖಿನ್ನತೆ ಇತ್ತೆ? ಇರಲಿಲ್ಲವೆ? ಇವೆಲ್ಲಾ ನಾವು ಯಾವುದನ್ನೂ ಹೇಳಬಾರದು. ಈಗ ನಾವು ಏನೇ ಹೇಳಿದರೂ ತಪ್ಪಾಗುತ್ತದೆ. ಆದುದರಿಂದ ನಾವು ಏನನ್ನೂ ಹೇಳಬಾರದು. ಯಾವುದೂ ನಾವು ಪೂರ್ವಬಾವಿಯಾಗಿ ಹೇಳಿಕೆಯನ್ನು ಕೊಡಬಾರದು. ಹೇಳಿದ್ದರೂ ಕೂಡ ನಾನು ಸರ್ಕಾರದ ಪರವಾಗಿ ಅಧಿಕೃತವಾಗಿ ಹೇಳುತ್ತಿದ್ದೇನೆ. The enquiry should reveal. I.O. ಇರುತ್ತಾರೆ, ಇದರ ಬಗ್ಗೆ Supreme Court decisions ಇವೆ. The Investigating Officer cannot be directed to do like this or that even by the Supreme Court. ನಮ್ಮ ನಿಮ್ಮ ಮಧ್ಯೆ ಯಾವುದೇ ಅಭಿಪ್ರಾಯ, ಭೇದ ಇರುವುದಿಲ್ಲ. The enquiry has to take place. ಈ ಮಧ್ಯೆ ಅವರ ಶ್ರೀಮತಿಯವರು ಪೊಲೀಸ್ ಸ್ಟೇಷನ್‌ಗೆ ಹೋಗಿ ಒಂದು ದೂರು ದಾಖಲು ಮಾಡಿದರು. ಆ ದೂರಿನ ಸ್ಟೇಟಸ್ ಕಾನೂನಿನ ಪ್ರಕಾರ ಏನಾಗುತ್ತದೆ? ಅದು ಎಫ್.ಐ.ಆರ್? ಅಥವಾ ದೂರಾ? ಕಾನೂನಿನಲ್ಲಿ ಅದು ಎಫ್.ಐ.ಆರ್. ಆಗುವುದಕ್ಕೆ ಸಾಧ್ಯವಿಲ್ಲ. ಈಗಾಗಲೇ ಎಫ್.ಐ.ಆರ್. ಆಗಿ ಹೋಗಿದೆ. ಇದನ್ನು Further statement ಎಂತಲೋ, ಅಥವಾ additional statement ಎಂತಲೋ ಕಾನೂನಿನ

ರೀತ್ಯಾ ಅಧಿಕಾರಿಗಳು ಇರುತ್ತಾರೆ ಅವರು ನೋಡಿಕೊಳ್ಳುತ್ತಾರೆ. ಮಾನ್ಯ ವಿರೋಧ ಪಕ್ಷದ ನಾಯಕರು ಒಂದು ಮಾತು ಹೇಳಿದರು ಅಧಿಕಾರಿಗಳು ಯಾರ ಕೈ ಕೆಳಗೆ ಇರುತ್ತಾರೆ? ನಮ್ಮ ನಿಮ್ಮ general understanding ಏನೆಂದರೆ ಅಧಿಕಾರಿಗಳು ನಮ್ಮ ಕೈ ಕೆಳಗೆ ಇರುತ್ತಾರೆ ಎನ್ನುವುದಾದರೂ ಕೂಡ ತಾತ್ವಿಕವಾಗಿ ನಾನು ಅದನ್ನು ವಿರೋಧ ಮಾಡುತ್ತೇನೆ. ಅಧಿಕಾರಿಗಳು ಯಾರ ಕೈ ಕೆಳಗಡೆಯೂ ಇರುವುದಿಲ್ಲ. ಇರಕೂಡದು. ಇಟ್ಟುಕೊಳ್ಳಬೇಕು ಎಂಬ ಪ್ರಯತ್ನವನ್ನು ಯಾರಾದರು ಮಾಡಿದರೆ ಅದು ಮೂರ್ಖತನ. ಅಧಿಕಾರಿಗಳ ಕಾರ್ಯ ಕ್ಷೇತ್ರ ಬೇರೆ ಇರುತ್ತದೆ. ಅವರ ಕೆಲಸ ಅವರು ಮಾಡಿಕೊಂಡು ಹೋಗಬೇಕು. ಭಟ್ಟಂಗಿಗಳು ಎಲ್ಲಾ ಕಡೆಗಳಲ್ಲಿಯೂ ಇರುತ್ತಾರೆ. ರಾಜಕಾರಣದಲ್ಲೂ ಭಟ್ಟಂಗಿಗಳು ಇರುತ್ತಾರೆ, ಅಧಿಕಾರಿಗಳಲ್ಲೂ ಭಟ್ಟಂಗಿಗಳು ಇರುತ್ತಾರೆ. ಇವರುಗಳು ಓಲೈಸುವುದಕ್ಕೆ, ತಮಗೆ ಬೇಕಾದಂತಹ ಕೆಲಸವನ್ನು ಮಾಡಿಸಿಕೊಳ್ಳುವುದಕ್ಕೆ, ದಾರಿ ತಪ್ಪಿಸುವುದಕ್ಕೆ ಇರುತ್ತಾರೆ. ಆದರೆ ನಮ್ಮಲ್ಲಿ ನಿಷ್ಠಾವಂತ ಅಧಿಕಾರಿಗಳ ಕೊರತೆ ಇಲ್ಲ. ಇದೇ ಆಡಳಿತವನ್ನು ತಾವೂ ಸಹ 5 ವರ್ಷಗಳ ಕಾಲ ನಡೆಸಿದ್ದೀರಿ. ಈಗ ಪ್ರಜೆಗಳ ಅಭಿಪ್ರಾಯದಂತೆ ತಾವು ಅಲ್ಲಿ, ನಾವು ಇಲ್ಲಿ ಕುಳಿತಿದ್ದೇವೆ. ಆಗೇನು ಹೊಸದಾಗಿ ಬೇರೆ set of officers ಇರಲಿಲ್ಲ. ನಾವು general sweeping remark ಮಾಡಿ ಇಲಾಖೆಯ ಒಂದು ನೈತಿಕ ಬಲ ಏನಿದೆ ಅದನ್ನು ಕುಗ್ಗಿಸಬಾರದು. ನಾನು ಏನನ್ನೂ defend ಮಾಡಿಕೊಳ್ಳುವುದಕ್ಕೆ ಹೋಗುವುದಿಲ್ಲ. ರಾಜಕಾರಣ ವಿಚಾರ, ಸಿ.ಬಿ.ಐ. ವಿಚಾರ ಹೇಳುತ್ತೇನೆ. ನಾವು ಸ್ವಲ್ಪ ಹಿಂದಕ್ಕೆ ಹೋಗೋಣ. ನಾನು ಬಹಳ ಹಿಂದೆ ಈ ಸಭೆಯ ಸದಸ್ಯನಾಗಲಿ, ಕೆಳ ಮನೆಯ ಸದಸ್ಯನಾಗಲಿ ಆಗಿರಲಿಲ್ಲ. ನನಗೆ ಆಗ ಮೆಂಬರ್ ಆಗಿ ಬರುವುದಕ್ಕೆ qualification ಸಹ ಇರಲಿಲ್ಲ ಅಂದರೆ ವಯಸ್ಸಾಗಿರಲಿಲ್ಲ. ಬೆಳಗಾವಿಯ ಶ್ರೀ ಆರ್.ಡಿ.ಕಿತ್ತೂರ್ ಎನ್ನುವಂಥವರು ಸಚಿವರಾಗಿದ್ದರು. ಅವರ ಮನೆಯ ಮುಂದೆ ಶ್ರೀಮತಿ ಸುಮಿತ್ರ ದೇಸಾಯಿ ಎನ್ನುವಂಥ ಒಬ್ಬ ಹೆಣ್ಣು ಮಗಳು ಸುತ್ತಾಡುತ್ತಿದ್ದಳು ಎಂದು ಒಂದು ಪತ್ರಿಕೆಯಲ್ಲಿ ವರದಿಯಾಗಿತ್ತು. ಆಮೇಲೆ ಆಕೆ ಪತ್ತೆಯೇ ಆಗಲಿಲ್ಲ. ಯಾವ ಪತ್ರಿಕೆಯವರೂ ಸಹ ಸುಮಿತ್ರ ದೇಸಾಯಿ ಯಾವ ಊರು, ಆಕೆ ಏಕೆ ಬಂದಿದ್ದಳು, ಆಕೆ ಎಲ್ಲಿಗೆ ಹೋದಳು ಎಂದು ಯಾರೂ ಸಹ ಹೇಳಿಲಿಲ್ಲ. ಶ್ರೀ ಆರ್.ಡಿ.ಕಿತ್ತೂರ್ ಅವರ ಮನೆಯ ಮುಂದೆ ಸುಮಿತ್ರ ದೇಸಾಯಿ ಅವರು ಸುತ್ತಾಡುತ್ತಿದ್ದರು, ಆದರೆ ಅವರು ನಾಪತ್ತೆಯಾಗಿದ್ದಾರೆ ಎಂದು ಪತ್ರಿಕೆಯಲ್ಲಿ ವರದಿಯಾಯಿತು. ಆರ್.ಡಿ.ಕಿತ್ತೂರು ಅವರು ಪರಿಶಿಷ್ಟ ಜನಾಂಗಕ್ಕೆ ಸೇರಿದಂಥವರು. ಅವರ ಮೇಲೆ ಎಷ್ಟು ಒತ್ತಡ build up ಮಾಡಿದರು ಎಂದರೆ, ಅವರು ತಮ್ಮ ಮಂತ್ರಿ ಸ್ಥಾನಕ್ಕೆ ರಾಜಿನಾಮೆಯನ್ನೇ ಕೊಟ್ಟರು. ಅವರು ರಾಜಿನಾಮೆ ಕೊಟ್ಟಮೇಲೆ ಸುಮಿತ್ರಾ ದೇಸಾಯಿ ಬದುಕಿದ್ದಾಳಾ, ಸತ್ತಿದ್ದಾಳಾ, ಯಾವ ಊರು, ಎಲ್ಲಿಂದ ಬಂದಿದ್ದರು, ಏಕೆ ಬಂದಿದ್ದರು ಎಂಬ ಸುದ್ದಿಗೆ ಯಾರೂ ಸಹ ಹೋಗಲೇ ಇಲ್ಲ. ಇದು politicization of an issue ಆಗುತ್ತದೆ. I am just trying to freshen your memory. It is not the right thing to happen. ರಾಜಕೀಯವಾಗಿ. 1977ರಲ್ಲಿ ಅಂದರೆ ತುರ್ತುಪರಿಸ್ಥಿತಿಯ ನಂತರ, ಮಹಾ ಚುನಾವಣೆಗಳಲ್ಲಿ ಶ್ರೀಮತಿ ಇಂದಿರಾ ಗಾಂಧಿ, ಸಂಜಯ್ ಗಾಂಧಿಯವರು ಲೋಕಸಭೆಗೆ ಆಯ್ಕೆಯಾಗಿ ಬರುವುದಕ್ಕೆ ಆಗಲಿಲ್ಲ. ಈ ದೇಶದ ಜನರ ಸಿಟ್ಟು ಹೇಗಿತ್ತು ಎಂದರೆ, ಮಹಾನ್ ನಾಯಕಿಯಾಗಿದ್ದಂಥವರು ಲೋಕಸಭೆಯ ಚುನಾವಣೆಯಲ್ಲಿ ಸೋತು ಹೋದರು. ಕರ್ನಾಟಕದಲ್ಲಿ ಶ್ರೀ ದೇವರಾಜ್ ಅರಸ್‌ರವರು ಮುಖ್ಯಮಂತ್ರಿಯಾಗಿದ್ದರು. ಸಹಜವಾಗಿಯೇ ರಾಜಕೀಯ ಪರಿಣಾಮಗಳೆಲ್ಲಾ ಆಗುತ್ತದೆ. 1977ರ ಡಿಸೆಂಬರ್ 31ನೇ ಮಧ್ಯ ರಾತ್ರಿ ಆಗಿನ ಕೇಂದ್ರದ ಗೃಹ ಸಚಿವರಾಗಿದ್ದಂತಹ ಶ್ರೀ ಚರಣ್ ಸಿಂಗ್‌ರವರು ನಮ್ಮ ರಾಜ್ಯ ಸರ್ಕಾರವನ್ನು ಡಿಸ್‌ಮಿಸ್ ಮಾಡಿದರು. ಜನವರಿ 1ನೇ ತಾರೀಖು ಬೆಳಿಗ್ಗೆ ಅಸೆಂಬ್ಲಿ ಅಧಿವೇಶನ ನಿರ್ಣಯವಾಗಿತ್ತು. ಆದರೆ Assembly meet ಆಗುವುದಕ್ಕೆ chance ಕೊಡಲಿಲ್ಲ. ಅದಾದ ನಂತರ ಚುನಾವಣೆ ಆಯಿತು. ಪುನಃ ಕಾಂಗ್ರೆಸ್ ಪಕ್ಷ ಗೆದ್ದು ಬಂತು, ಮಾನ್ಯ ದೇವರಾಜ್ ಅರಸ್‌ರವರು ಮುಖ್ಯಮಂತ್ರಿಯಾದರು. ಮಾನ್ಯ ದೇವರಾಜ್ ಅರಸ್‌ರವರು ಕೆಳಮನೆಯಲ್ಲಿ Sections 5 & 6 of the Delhi Special Police Establishment Act ಪ್ರಕಾರ ಒಂದು

ನಿರ್ಣಯವನ್ನು ಮಂಡಿಸಿದರು. ಮಾನ್ಯ ಉಗ್ರಪ್ಪನವರು ಇದ್ದಾರಾ? I think I am right. ಏಕೆಂದರೆ we will have to be careful. ನಮಗಿಂತ ಹೆಚ್ಚು ತಿಳುವಳಿಕೆ ಉಳ್ಳಂಥವರು ಇದ್ದಾಗ ನಾವು ಜಾಗ್ರತೆಯಿಂದ ಇರಬೇಕಾಗುತ್ತದೆ. ನಾನು ವ್ಯಂಗ್ಯ ಮಾಡುತ್ತಿಲ್ಲ. ಅವರಿಗೆ ತಿಳುವಳಿಕೆ ಇದೆ ಎಂದು ಹೇಳುವುದಕ್ಕೆ ನನಗೇನು ನಾಚಿಕೆ ಇಲ್ಲ. ಕಲಿತುಕೊಳ್ಳುವಂಥದ್ದು ಬಹಳ ಇರುತ್ತದೆ. ದಯಮಾಡಿ ಬೇರೆ ರೀತಿ ತಿಳಿದುಕೊಳ್ಳಬೇಡಿ. ಅವರು ಸಂವಿಧಾನವನ್ನು, ಕಾನೂನನ್ನು ಹೆಚ್ಚು ಶ್ರಮದಿಂದ ಅಧ್ಯಯನ ಮಾಡುತ್ತಾರೆ ಎಂಬ ಅರ್ಥದಲ್ಲಿ ಹೇಳಿದ್ದೇನೆ ವಿನಃ ಬೇರೆ ಅರ್ಥ ಕಲ್ಪಿಸುವುದು ಬೇಡ. ಅದರ ಜಿಸ್ಟ್ ಏನು? ಒಂದು ರಾಜ್ಯದ ವ್ಯಾಪ್ತಿಯಲ್ಲಿ ಏನಾದರು ಒಂದು ಘಟನೆ ನಡೆದರೆ ಸಿಬಿಐ ಒಂದು ವೇಳೆ ವಿಚಾರಣೆ ಮಾಡಬೇಕಾಗಿದ್ದರೆ ಸೆಕ್ಷನ್ 5 ಮತ್ತು 6ರ ಪ್ರಕಾರ ರಾಜ್ಯ ಸರ್ಕಾರ ಅದಕ್ಕೆ ಸರ್ಕಾರ ಅನುಮತಿ ಕೊಡಬೇಕು. ಇಲ್ಲದೆ ಹೋದರೆ ಅವರೇ ಸ್ವಯಂಪ್ರೇರಿತರಾಗಿ ಅಂದರೆ suo-moto ವಿಚಾರಣೆ ಮಾಡುವುದಕ್ಕೆ ಬರುವುದಿಲ್ಲ. ದಿವಂಗತ ಪುಟ್ಟಸ್ವಾಮಿಯವರು ಮೈಸೂರಿನಿಂದ ಬಂದಿದ್ದರು. ಅವರು ಮೊದಲು ಸಂಸದೀಯ ವ್ಯವಹಾರಗಳ ಸಚಿವರಾಗಿದ್ದರು. ಬಹಳ ದೊಡ್ಡ ತಜ್ಞರು. ನಾನು ಮತ್ತು ಮಾನ್ಯ ನಾಣಯ್ಯನವರು ಪಕ್ಕ ಪಕ್ಕದಲ್ಲಿಯೇ ಕುಳಿತುಕೊಂಡಿದ್ದೆವು. ನಮಗೆ ಅದೊಂದು ಪಾಠವಾಗಿತ್ತು. ಮಾನ್ಯ ಪುಟ್ಟಸ್ವಾಮಿಯವರು ಮಾನ್ಯ ದೇವರಾಜ್ ಅರಸ್‌ರವರು ಮಾಡಿದ್ದು ತಪ್ಪು ಎಂದು ಸುಮಾರು ಮೂರೂವರೆ ಗಂಟೆಗಳ ಕಾಲ ಮಾತನಾಡಿದರು. ಇರಲಿ, ಏನೆಲ್ಲಾ ಆದರೂ ಸಹ ಮಾನ್ಯ ದೇವರಾಜ್ ಅರಸ್‌ರವರು ಒಂದು ಮಾತನ್ನು ಹೇಳಿದರು. ಏನೆಂದರೆ, ನನ್ನ ವಿರುದ್ಧ ಸಿಬಿಐ ಯಾವ ತನಿಖೆ ಬೇಕಾದರು ಮಾಡಲಿ. ಆದರೆ ನನ್ನ ಸಚಿವ ಸಹದ್ಯೋಗಿಗಳನ್ನು ರಾಜಕೀಯ ಕಾರಣಕ್ಕಾಗಿ ನಾನು ಬಲಿ ಕೊಡುವುದಕ್ಕೆ ತಯಾರಿಲ್ಲ, ಆದ್ದರಿಂದ ಇದನ್ನು ನಾನು move ಮಾಡಿದ್ದೇನೆ, ನಾವು withdraw ಮಾಡುತ್ತಿದ್ದೇವೆ. ಕೇಂದ್ರದಲ್ಲಿ ಕಾಂಗ್ರೆಸ್ ಸರ್ಕಾರ ಇದ್ದಾಗ ಏನು ಅನುಮತಿ ಕೊಟ್ಟರು, ಅದನ್ನು ಹಿಂದಕ್ಕೆ ಪಡೆದುಕೊಳ್ಳುತ್ತಿದ್ದೇವೆ, ಆ ಅಧಿಕಾರ ಈ ಸಭೆಗೆ ಇದೆ ಎಂಬ ಮಾತನ್ನು ಹೇಳಿದರು. ಅದಕ್ಕೆ ಅವರು ಒಂದೇ ಒಂದು justification ಕೊಟ್ಟರು. ಬೆಳಿಗ್ಗೆ Assembly meet ಆಗಬೇಕಾಗಿತ್ತು, ಆದರೆ ಹಿಂದಿನ ಅರ್ಧರಾತ್ರಿಯಲ್ಲಿ ನಮ್ಮ ಸರ್ಕಾರವನ್ನು ಡಿಸ್‌ಮಿಸ್ ಮಾಡಿದಿರಿ. ನಿಮಗೆ ರಾಜಕೀಯವಾಗಿ ದ್ವೇಷ ಸಾಧಿಸುವುದಕ್ಕೆ ಹೊರಟಿದ್ದೀರಿ ಎಂದು ಹೇಳಿದರು. ಇದು ಆವತ್ತಿನ ವಿಚಾರ.

**ಶ್ರೀ ಕೆ.ಆರ್.ರಮೇಶ್‌ಕುಮಾರ್:–** (ಮುಂದು...) ನಾನು ನಿಮಗೆ ರಾಜಕೀಯವಾಗಿ ದ್ವೇಷ ಸಾಧಿಸುವುದಕ್ಕೆ ಹೊರಟಿದ್ದೀರಿ ಅಂತ ಹೇಳಿದೆ ಆದರೆ ಅದು ಆವೊತ್ತಿನ ವಿಚಾರ. ನಾವು ಹೇಗೆ ಸಿ.ಬಿ.ಐ., ಅನ್ನು ಸಮಯದಿಂದ ಸಮಯಕ್ಕೆ ಬಳಸಿಕೊಳ್ಳುತ್ತೇವೆನ್ನುವುದನ್ನು ತಾವು ಅರ್ಥ ಮಾಡಿಕೊಳ್ಳಬೇಕು. ಆಗ ಮಾನ್ಯ ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಯಾಗಿದ್ದರು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ನನ್ನದೊಂದು ಮನವಿ ಏನೆಂದರೆ ಮಾನ್ಯ ಕೆ.ಆರ್. ರಮೇಶ್‌ಕುಮಾರ್‌ರವರು ಮಾತನಾಡುವಾಗ ಸರ್ಕಾರ ಬಹಳ ಪಾರದರ್ಶಕವಾಗಿದೆ ಎಂಬ ಭಾವನೆಗಳನ್ನು ಬೆಂಬಲಿಸಲಿಕ್ಕೆ ಪ್ರಯತ್ನಪಟ್ಟಿದ್ದಾರೆಂದು ನನಗನಿಸುತ್ತದೆ. ಆ ಹಿನ್ನೆಲೆಯಲ್ಲಿ ನಾನು ಹೇಳುವುದೇನೆಂದರೆ ಸರ್ಕಾರ ಒಂದು ರಾಜಧರ್ಮವನ್ನು ಪಾಲಿಸಬೇಕಾಗುತ್ತದೆ. ಇವತ್ತು ಎಲ್ಲಾ ಮಾಧ್ಯಮಗಳಲ್ಲಿ ಬಂದಿರುವಂತಹ ವಿಚಾರವನ್ನು ತಾವೆಲ್ಲರೂ ನೋಡಿದ್ದೀರಿ. ಇವುಗಳಲ್ಲಿ ಉದಯವಾಣಿ ಪತ್ರಿಕೆಯಲ್ಲಿ ಒಂದು ಸಣ್ಣದಾದ ಹಾಗೂ ಬಹಳ ಸ್ಫುಟವಾದ ಒಂದು ಟಿಪ್ಪಣಿಯನ್ನು ಬಂದಿದೆ. ಅದು ಏನೆಂದರೆ ಅಸಹಜ ಸಾವು ಎಂದು ಪ್ರಕರಣವನ್ನು ದಾಖಲಿಸಿದ ಪೊಲೀಸರು, ಸಚಿವರ ಮತ್ತು ಅಧಿಕಾರಿಗಳ ರಕ್ಷಣೆಗೆ ಸರ್ಕಾರವು ಬೆಂಬಲವಾಗಿ ನಿಂತಿತ್ತಾ? ಎಂದು ಆ ಪತ್ರಿಕೆಯಲ್ಲಿ ಕೇಳಿದ್ದಾರೆ. ಆ ರೀತಿ ಕೇಳಿದ ನಂತರ ನಾನು ಒಂದೆರೆಡು ಮಾತುಗಳನ್ನು ಉಲ್ಲೇಖ ಮಾಡುತ್ತಾ ಅವುಗಳನ್ನು ತಮ್ಮ ಗಮನಕ್ಕೆ ತರುತ್ತೇನೆ. ಆತ್ಮಹತ್ಯೆಗೆ ಕಾರಣ ಹಾಗೂ ವ್ಯಕ್ತಿಗಳ ಹೆಸರು ಬಹಿರಂಗಗೊಂಡಿದ್ದರೂ, ಡಿವೈಎಸ್‌ಪಿ ಶ್ರೀ ಎಂ.ಕೆ.ಗಣಪತಿ ಆತ್ಮಹತ್ಯೆ ಪ್ರಕರಣದಲ್ಲಿ ಎಫ್‌ಐಆರ್‌ನಲ್ಲಿ ಇದ್ಯಾವುದು ಪ್ರಸ್ತಾಪಗೊಳ್ಳದಿರುವುದು ಹಲವು ಅನುಮಾನಗಳಿಗೆ ಎಡೆಮಾಡಿಕೊಟ್ಟಿರುತ್ತದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಸಿ.ಐ.ಡಿ., ಮತ್ತು ಕೊಡಗು ಜಿಲ್ಲಾ ಪೊಲೀಸ್ ಅಧಿಕಾರಿಗಳ ತನಿಖಾ ಕ್ರಮ ಹಲವು ವಿವಾದಕ್ಕೆ ಎಡೆಮಾಡಿಕೊಟ್ಟಿದೆ.

ಆತ್ಮಹತ್ಯೆ ಮಾಡಿಕೊಂಡ ಶ್ರೀಎಂ.ಕೆ.ಗಣಪತಿಯವರು ಬೆಂಗಳೂರು ಅಭಿವೃದ್ಧಿ ಯೋಜನಾ ಪ್ರಾಧಿಕಾರದ ಸಚಿವ ಶ್ರೀ ಕೆ.ಜೆ.ಜಾರ್ಜ್, ಗುಪ್ತದಳದ ಮುಖ್ಯಸ್ಥ ಶ್ರೀ ಅಶಿತ್‌ಮೋಹನ್‌ಪ್ರಸಾದ್ ಹಾಗೂ ಲೋಕಾಯುಕ್ತ ಐ.ಜಿ.ಪಿ., ಪ್ರಣಬ್ ಮೊಹಾಂತಿ ಇವರುಗಳೇ ತನ್ನ ಸಾವಿಗೆ ಕಾರಣರೆಂದು ಆರೋಪಿಸಿದ್ದಾರೆ. ಆದರೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸ್ಥಳೀಯ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಎಫ್.ಐ.ಆರ್., ನಲ್ಲಿ ಈ ಹೆಸರುಗಳನ್ನು ಪ್ರಸ್ತಾಪಿಸಿಲ್ಲ. ಈಗಾಗಿ ಸರ್ಕಾರವು ಸಚಿವರ ಹಾಗೂ ಅಧಿಕಾರಿಗಳ ರಕ್ಷಣೆಗೆ ನಿಂತಿದೆ ಎನ್ನುವ ಆರೋಪಗಳು ಇಂದು ಸಾರ್ವತ್ರಿಕವಾಗಿ ಕೇಳಿಬರುತ್ತಿವೆ. ಸಾಮಾನ್ಯವಾಗಿ ಆತ್ಮಹತ್ಯೆ ಪ್ರಕರಣಗಳಲ್ಲಿ ಘಟನಾ ಸ್ಥಳದಲ್ಲಿ ಲಭ್ಯವಿರುವಂತಹ ಮರಣಪತ್ರ, ಎಸ್.ಎಂ.ಎಸ್., ವಾಟ್ಸಾಪ್‌ನಲ್ಲಿನ ಸಂದೇಶಗಳು ಮತ್ತು ವಿಡಿಯೋಗಳ ಮುಖಾಂತರ ಮೃತ ವ್ಯಕ್ತಿಯು ತನ್ನ ಸಾವಿಗೆ ಕಾರಣರಾಗಿದ್ದಾರೆ ಎಂಬ ಬಗ್ಗೆ ತಿಳಿಸಿದ್ದರೆ ಅದು ಆತ್ಮಹತ್ಯೆ ಪ್ರಚೋದನಾ ಆರೋಪದಡಿಯಲ್ಲಿ ಅಂತಹ ವ್ಯಕ್ತಿಗಳ ಮೇಲೆ ಪ್ರಕರಣವನ್ನು ಸಾಮಾನ್ಯವಾಗಿ ದಾಖಲಿಸಲಾಗುತ್ತದೆ. ಆದರೆ ಈ ಪ್ರಕರಣದಲ್ಲಿ ಡಿವೈಎಸ್‌ಪಿ ಶ್ರೀ ಎಂ.ಕೆ. ಗಣಪತಿಯವರು ತಾವು ಆತ್ಮಹತ್ಯೆ ಮಾಡಿಕೊಳ್ಳುವ ಮುಂಚೆ ಮಾಧ್ಯಮಗಳಿಗೆ ನೀಡಿರುವ ಸಂದರ್ಶನದಲ್ಲಿ ಶ್ರೀ. ಕೆ.ಜೆ.ಜಾರ್ಜ್, ಆಶಿತ್‌ಮೋಹನ್ ಪ್ರಸಾದ್ ಹಾಗೂ ಪ್ರಣಬ್ ಮೊಹಾಂತಿ ಇವರುಗಳ ವಿರುದ್ದ ಗಂಭೀರವಾದ ಆರೋಪವನ್ನು ಮಾಡಿದ್ದಾರೆ. ಅಲ್ಲದೇ ನನ್ನ ಭವಿಷ್ಯದಲ್ಲಿ ತನ್ನ ಜೀವಕ್ಕೇನಾದರೂ ತೊಂದರೆಯಾದಲ್ಲಿ ಅದಕ್ಕೆ ಇವರುಗಳೇ ಕಾರಣರು ಎಂದು ದೂರಿದ್ದಾರೆ. ಹೀಗಿದ್ದರೂ ಪೊಲೀಸರು ಇವರುಗಳ ಮೇಲೆ ಎಫ್.ಐ.ಆರ್., ದಾಖಲಿಸಲು ಹಿಂದೇಟು ಹಾಕುತ್ತಿರುವುದು ಹಲವು ಅನುಮಾನಗಳಿಗೆ ಎಡೆಮಾಡಿಕೊಟ್ಟಿದೆ. ಇದು ಸರ್ಕಾರದ ರಾಜಧರ್ಮವೇ ಎಂಬುದನ್ನು ತಾವು ಹೇಳಬೇಕು. ಈ ವಿಚಾರವನ್ನು ಬಿಟ್ಟು ಬೇರೆ ಹೇಳಿದರೆ ಕೇಳುವುದಿಲ್ಲ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ನಾನು ಬಹಳ ವಿವರಕ್ಕೆ ಹೋಗುತ್ತಿದ್ದೇನೆ. ನೀವು ಹೇಳಿರುವ ವಿಷಯದಲ್ಲಿ ನಾನು ಎರಡು ವಿಷಯಗಳ ಬಗ್ಗೆ ಸ್ಪಷ್ಟೀಕರಣ ಕೇಳುತ್ತೇನೆ. ಈ ಸಾವಿಗ ಬಗ್ಗೆ ಯಾರು, ಏನು ಬೇಕಾದರೂ ಹೇಳಿದರೂ ಕೂಡ ಅದು ತಪ್ಪು ಎಂದು ತಾವು ಹೇಳಿದ್ದೀರಿ. ಈ ವಿಚಾರದಲ್ಲಿ ಬಹಳ ಸ್ಪಷ್ಟವಾಗಿ ನಮ್ಮ ಮಾನ್ಯ ಗೃಹಮಂತ್ರಿಗಳು ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಅದು ಏನೆಂದರೆ **'**ಡಿವೈಎಸ್‌ಪಿ ಶ್ರೀ ಎಂ.ಕೆ.ಗಣಪತಿಯವರ ಆತ್ಮಹತ್ಯೆಗೂ ಕೆ.ಜೆ.ಜಾರ್ಜ್‌ಗೂ ಸಂಬಂಧ ಇಲ್ಲ**'** ಪರಮೇಶ್ವರ್. ಮತ್ತೊಂದು ಕಡೆ ಮಾನ್ಯ ಮುಖ್ಯಮಂತ್ರಿಗಳು ಕೂಡ ಹೇಳಿದ್ದಾರೆ. ಈ ರೀತಿ ಮರಣ ಪತ್ರ ಬರೆದಿಟ್ಟ ತಕ್ಷಣ ಈ ಆತ್ಮಹತ್ಯೆಯನ್ನು ಶ್ರೀ ಕೆ.ಜೆ.ಜಾರ್ಜ್‌ರವರೇ ಮಾಡಿದ್ದಾರೆಂದು ಒಪ್ಪಿಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಇದಕೋಸ್ಕರ ನಾನು ಈ ವಿಷಯವನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ.

**(ಗೊಂದಲ)**

**ಡಾ॥ ಜಿ.ಪರಮೇಶ್ವರ್:-** ಮಾನ್ಯ ಸಭಾಪತಿಯವರೇ, ...

**(ಗೊಂದಲ)**

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ ಇನ್ನೊಂದು ಕೊನೆಯ ವಿಚಾರ...ಯಾಕೆಂದರೆ ಸ್ವತಃ ನೀವುಗಳೇ ನಿಮ್ಮ ಮಾತುಗಳಲ್ಲಿ...

**(ಗೊಂದಲ)**

**ಡಾ॥ ಜಿ.ಪರಮೇಶ್ವರ್:-** ಮಾನ್ಯ ಸಭಾಪತಿಯವರೇ, ಇದರಲ್ಲಿ ಒಂದು ವಿಚಾರವನ್ನು ಸ್ಪಷ್ಟಪಡಿಸಬಯಸುತ್ತೇನೆ. ತಾವು ನನ್ನ ಹೆಸರು ತೆಗೆದುಕೊಂಡಿದ್ದೀರಿ ಅದಕ್ಕಾಗಿ ಹೇಳುತ್ತಿದ್ದೇನೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಸರ್ ಇದರಲ್ಲಿ ಅವರು ಉತ್ತರ ಕೊಟ್ಟುಬಿಡಲಿ. ಇಲ್ಲವಾದರೆ ನನಗೆ ಈ ವಿಷಯ ಮರೆತು ಹೋಗುತ್ತದೆ.

**ಡಾ॥ ಜಿ.ಪರಮೇಶ್ವರ್:-** ಮಾನ್ಯ ಸಭಾಪತಿಯವರೇ, ತಾವು ಹೇಳಿದ್ದಕ್ಕೆ ಹೇಳುತ್ತೇನೆ. ಇದರಲ್ಲಿ ನಾನು ಹೇಳಿರುವುದು ನಿಜ. ಆದರೆ **'ಮೇಲ್ನೋಟಕ್ಕೆ'** ಎನ್ನುವಂತಹ ಒಂದು ಶಬ್ಧವನ್ನು ನೀವು ಅಲ್ಲಿ

ಬಿಟ್ಟುಬಿಟ್ಟಿದ್ದೀರಿ ಆ ಶಬ್ಧವನ್ನು ಪತ್ರಿಕೆಯವರು ಬಿಟ್ಟಿದ್ದಾರೋ ಅಥವಾ ನೀವು ಬಿಟ್ಟಿದ್ದಾರೋ ನನಗೆ ಗೊತ್ತಿಲ್ಲ. ಮೇಲ್ನೋಟಕ್ಕೆ ಶ್ರೀ ಕೆ.ಜೆ.ಜಾರ್ಜ್‌ರವರಿಗೂ ಈ ಸಾವಿಗೂ ಯಾವುದೇ ಸಂಬಂಧ ಇಲ್ಲ ಎನ್ನತಕ್ಕಂಥ ಮಾತನ್ನು ಹೇಳಿರುವಂತದ್ದು ನಿಜ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ಹೇಳಿದ್ದೀರಿ ತಾನೇ.

**ಡಾ॥ ಜಿ. ಪರಮೇಶ್ವರ್:–** ಮಾನ್ಯ ಸಭಾಪತಿಯವರೇ, ಹೌದು.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ಹಾಗಿದ್ದರೆ ಸರಿ.

**ಡಾ॥ ಜಿ.ಪರಮೇಶ್ವರ್:–** ಮಾನ್ಯ ಸಭಾಪತಿಯವರೇ, ಆ ಮಾತನ್ನು ಹಿಂದಕ್ಕೆ ಪಡೆಯುವ ಪ್ರಶ್ನೆಯೇ ಇಲ್ಲ. ಆದರೆ ಸಿ.ಐ.ಡಿ.ಯವರ ವಿಚಾರಣೆಯಲ್ಲಿ...

**(ಗೊಂದಲ)**

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ಮೊದಲು ನಾನು ನನ್ನ ವಿಚಾರ ಮುಗಿಸುತ್ತೇನೆ. ಸಚಿವರು ನಂತರ ಉತ್ತರ ನೀಡಲಿ.

**ಡಾ॥ ಜಿ.ಪರಮೇಶ್ವರ್:–** ಮಾನ್ಯ ಸಭಾಪತಿಯವರೇ, ಸಿ.ಐ.ಡಿ., ಯವರ ವಿಚಾರಣೆಯಲ್ಲಿ ಏನು ಬರುತ್ತದೆ ನೋಡೋಣ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ತಾವು ಈಗಾಗಲೇ ಎಫ್.ಐ.ಆರ್., ದಾಖಲು ಮಾಡಿಬಿಟ್ಟಿದ್ದಾರೆ ಎನ್ನುವ ಮಾತನ್ನು ಹೇಳಿದ್ದೀರಿ. ಮಾನ್ಯ ಶ್ರೀಕೆ.ಆರ್.ರಮೇಶ್‌ಕುಮಾರ್‌ರವರು ಹಿರಿಯ ಸಚಿವರಿದ್ದಾರೆ, ಸಂಸದೀಯ ಪಟುವಿದ್ದಾರೆ ಮತ್ತು ಕಾನೂನನ್ನು ತಿಳಿದುಕೊಂಡಿದ್ದಾರೆ. ನನಗೆ ಕಾನೂನು ಜ್ಞಾನ ಇಲ್ಲ. ಆದರೆ ಇವತ್ತು ವಿಜಯಕರ್ನಾಟಕ ದಿನಪತ್ರಿಕೆಯಲ್ಲಿ ಬಂದಿರತಕ್ಕಂಥ ಒಂದು ವಿಚಾರವೇನೆಂದರೆ **'**ಸಚಿವರು ಮತ್ತು ಪೊಲೀಸ್ ಅಧಿಕಾರಿಗಳ ಮೇಲೆ ಎಫ್.ಐ.ಆರ್. ದಾಖಲಿಸಲು ಧರಣಿ. ಶ್ರೀ ಕೆ.ಜೆ.ಜಾರ್ಜ್ ವಿರುದ್ದ ಚಾರ್ಜ್**'**. ಅಲ್ಲಿ ಶ್ರೀ ಎಂ.ಕೆ.ಗಣಪತಿಯವರ ಶ್ರೀಮತಿ ಮತ್ತು ಮಕ್ಕಳು ಪೊಲೀಸ್ ಠಾಣೆಯೆದುರು ಎಫ್.ಐ.ಆರ್. ದಾಖಲಿಸಬೇಕೆಂದು ಧರಣಿ ಕೂತಿದ್ದಾರೆ.

**ಶ್ರೀಮತಿ ಉಮಾಶ್ರೀ:–** ಮಾನ್ಯ ಸಭಾಪತಿಯವರೇ, ಈ ವಿಚಾರವನ್ನು ಆಗಲೇ ಪ್ರಸ್ತಾಪ ಮಾಡಿದ್ದಾರೆ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ಆ ಹೇಳಿಕೆಯನ್ನು ನಾನೇ ಮಾಡಿದ್ದೇನೆ. ಆದರೆ ಇವರು ಹೇಳಿದಂತಹ ಸಂದರ್ಭದಲ್ಲಿ ಎಫ್.ಐ.ಆರ್. ದಾಖಲಿಸಲಾಗಿದೆ ಎಂದು ಹೇಳಿದ್ದಾರೆ. ಒಂದು ವೇಳೆ ಎಫ್.ಐ.ಆರ್. ದಾಖಲಿಸಿದ್ದರೆ ಏತಕ್ಕೆ ಧರಣಿ ಕೂಡುತ್ತಾರೆ? ಮೂರನೆಯದು ಮಾನ್ಯ ಗೃಹಮಂತ್ರಿಗಳು ಹೇಳಿದರು ನಾನು ಕೆಳಮನೆಯಲ್ಲಿ ಹೇಳಿಕೆಯನ್ನು ಮಾಡಿಬಿಟ್ಟು ಬಂದಿದ್ದೇನೆ ಎಂದು. ಆದರೆ ಕೆಳಮನೆಯಲ್ಲಿ ಇವರಿಗೆ ಹೇಳಿಕೆಯನ್ನು ಮಾಡುವುದಕ್ಕೆ ಬಿಟ್ಟಿಲ್ಲ. ಆ ಗಲಾಟೆ ಮಧ್ಯೆ ಇವರು ಹೇಳಿಕೆಯನ್ನು ಓದಿ ಬಂದಿದ್ದಾರೆ. ಇದನ್ನು ನೀವು ಹೇಳಿಕೆ ಎಂದು ಕರೆಯುತ್ತೀರಾ?

**ಡಾ॥ ಜಿ.ಪರಮೇಶ್ವರ್:–** ಮಾನ್ಯ ಸಭಾಪತಿಯವರೇ, ಇದನ್ನು ಬೇರೆ ಏನು ಎಂದು ಕರೆಯಬೇಕು?

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ಅಲ್ಲಿ ಸಿಕ್ಕಾಪಟ್ಟೆ ಗಲಾಟೆ ಆಗುತ್ತಿದೆ, ಹೇಳಿಕೆಯನ್ನು ಓದುವುದು ಬೇಡ ಅಂತಾ ಕೂಗುತ್ತಿದ್ದಾರೆ. ಇಲ್ಲಿ ಇವರು ಮೌನವಾಗಿ ಕುಳಿತಿದ್ದಾರೆ. ಆದರೆ ಕೆಳಮನೆಯಲ್ಲಿ ಹಾಗೆ ಹೇಳಿಕೆಯನ್ನು ಓದಿಕೊಂಡು ಬಂದರೆ ಅದು ಇವರು ಹೇಳಿಕೆಯನ್ನು ಮಾಡಿದ್ದಾರೆ ಎಂದು ಅರ್ಥ ಅಂತೆ. ಇದು ಈ ಸರ್ಕಾರದ ವೈಫಲ್ಯ.

**ಡಾ॥ ಜಿ.ಪರಮೇಶ್ವರ್:–** ಮಾನ್ಯ ಸಭಾಪತಿಯವರೇ, ಕೆಳಮನೆಯಲ್ಲಿ ನಾನು ಹೇಳಿಕೆಯನ್ನು ಮಾಡಿದ್ದೇನೆ. ಇದನ್ನು ಯಾವ ರೀತಿ ವ್ಯಾಖ್ಯಾನ ಮಾಡಬೇಕು.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ಅಲ್ಲಿ ಬಹಳ ವಿರೋಧ ಇದೆ, ಇವರ ಪಾಡಿಗೆ ಇವರು ಹೇಳಿಕೆಯನ್ನು ಓದಿಕೊಂಡು ಬಂದರೆ ಅದು ಹೇಳಿಕೆಯಾಗುತ್ತಾ?

**(ಗೊಂದಲ)**

**ಡಾ॥ ಜಿ.ಪರಮೇಶ್ವರ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸಭಾಧ್ಯಕ್ಷರ ಅನುಮತಿ ಕೊಟ್ಟ ಮೇರೆಗೆ ಹೇಳಿಕೆಯನ್ನು ಓದಿದ್ದೇನೆ. ಅದು ಹೇಳಿಕೆಯಾಗುವುದಿಲ್ಲವೇ?

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ಕೆಳಮನೆಯಲ್ಲಿ ಎಲ್ಲರೂ ವಿರೋಧ ಮಾಡುತ್ತಿದ್ದಾರೆ.

**(ಗೊಂದಲ)**

ಆಯಿತು, ಆಯಿತು, ತಾವು ಈ ರೀತಿಯ ನೀತಿ ನಿಯಮಗಳನ್ನು ಹೇಳಿದ್ದು ಕಾನೂನುಗಳನ್ನು ಹೇಗೆ ತಿರುಚುತ್ತಿದ್ದಾರೆ ಎನ್ನುವುದಕ್ಕೆ ಇದೊಂದು ಉದಾಹರಣೆಯಾಗುತ್ತದೆ.

**ಶ್ರೀ ಆರ್.ಚೌಡರೆಡ್ಡಿ ತೂಪಲ್ಲಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಾದಂಥ ಶ್ರೀಕೆ.ಆರ್.ರಮೇಶ್‌ಕುಮಾರ್‌ರವರು ರಾಷ್ಟ್ರಪತಿಯವರಿಗೆ ಹಾಗೂ ಕೂಲಿ ಕಾರ್ಮಿಕರಿಗೆ ಒಂದೇ ಕಾನೂನು ಎಂದು ಹೇಳಿದ್ದಾರೆ. ಆ ನಿಟ್ಟಿನಲ್ಲಿ ನನ್ನ ಒಂದು ಮನವಿ ಏನೆಂದು ಹೇಳಿದರೆ ಸಾಮಾನ್ಯವಾಗಿ ಊರುಗಳಲ್ಲಿ ಯಾವುದಾದರೂ ಒಂದು ಕಂಪ್ಲೇಂಟ್ ಇದ್ದರೆ ಅದಕ್ಕೆ ಸಂಬಂಧಪಟ್ಟವರನ್ನೆಲ್ಲಾ ಠಾಣೆಗೆ ಎಳೆದುಕೊಂಡು ಹೋಗಿ ಅವರೆಲ್ಲರನ್ನೂ ಒಳಗಡೆ ಹಾಕಿ, ವಿಚಾರಣೆ ಮಾಡಿದ ನಂತರ ಯಾರು ತಪ್ಪಿತಸ್ಥರು ಯಾರು ತಪ್ಪಿತಸ್ಥರಲ್ಲ ಎಂದು ಆಗುತ್ತದೆ. ಈಗ ಶ್ರೀ ಎಂ.ಕೆ.ಗಣಪತಿ ಎಂಬುವವರು ಏನು ಆತ್ಮಹತ್ಯೆ ಮಾಡಿಕೊಳ್ಳುವ ಮುನ್ನಾ ಪತ್ರಿಕಾ ಸಂದರ್ಶನವನ್ನು ಕರೆದು ಕೆಲವರ ಹೆಸರುಗಳನ್ನು ಹೇಳಿದ್ದಾರೆ. ಆ ರೀತಿ ಹೆಸರುಗಳನ್ನು ಹೇಳಿರುವ ಸಂದರ್ಭದಲ್ಲಿ ಮಾನ್ಯ ಸುಪ್ರೀಂ ಕೋರ್ಟ್ ತನ್ನ ತೀರ್ಪಿನಲ್ಲಿ ಹೇಳಿರುವಂತೆ, ಅವರುಗಳನ್ನು ದಸ್ತಗಿರಿ ಮಾಡಿ ಕಾನೂನು ರೀತ್ಯಾ ಕ್ರಮ ತೆಗೆದುಕೊಂಡು ಸಿ.ಬಿ.ಐ. ಅಥವಾ ಸಿ.ಓ.ಡಿ. ಮುಖಾಂತರ ತನಿಖೆ ಮಾಡಿಸಿ ಅವರುಗಳು ತಪ್ಪಿತಸ್ಥರಾಗಲೀ ಅಥವಾ ಇಲ್ಲದಿರಲಿ ಆ ನಿಟ್ಟಿನಲ್ಲಿ ಕ್ರಮ ಜರುಗಿಸಬೇಕೆಂದು ತಮ್ಮ ಮುಖಾಂತರ ವಿನಂತಿ ಮಾಡಿಕೊಳ್ಳುತ್ತೇನೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:–** ಮಾನ್ಯ ಸಭಾಪತಿಯವರೇ, ಮೊನ್ನೆ ಮೊದಲನೇ ಬಾರಿಗೆ ನಮ್ಮ ಸದನಕ್ಕೆ ಮಾನ್ಯ ಕೆ.ಆರ್.ರಮೇಶ್‌ಕುಮಾರ್‌ರವರು ಮಂತ್ರಿಗಳಾಗಿ ಬಂದು ಮೌಲ್ಯಗಳ ಬಗ್ಗೆ ಮಾತನಾಡಿದಾಗ ಮತ್ತು ಈ ದಿನ ಅವರು ಎದ್ದು ನಿಂತು ಈ ವಿಚಾರವಾಗಿ ಉತ್ತರ ಕೊಡಲಿಕ್ಕೆ ಹೋದಾಗ ಬಹಳಷ್ಟು ವ್ಯತ್ಯಾಸವಿದೆ. ಅವರ ಮೇಲೆ ನಾನು ತುಂಬಾ ನಿರೀಕ್ಷೆ ಇಟ್ಟುಕೊಂಡಿದ್ದೆ. ಮೊನ್ನೆ ಅವರು ಆತ್ಮಸಾಕ್ಷಿಯಾಗಿ ಮೌಲ್ಯಗಳ ಬಗ್ಗೆ ಮಾತನಾಡಿದ್ದಾರೆ. ಅದರ ಬಗ್ಗೆ ಅವರು ಒಂದು ದಿಟ್ಟವಾದ ನಿಲುವನ್ನು ತೆಗೆದುಕೊಳ್ಳುತ್ತಾರೆನ್ನುವಂಥಹ ಒಂದು ಆಸೆ ನನ್ನ ಮನಸ್ಸಿನಲ್ಲಿ ಇತ್ತು. ಈಗ ಸೆಕ್ಷನ್ 306 ಪ್ರಕಾರ ಪೊಲೀಸ್‌ನವರು ಏನು ಕಾರ್ಯವನ್ನು ಮಾಡಬೇಕಿತ್ತು ಅದನ್ನು ಮಾಡಿದ್ದಾರೆಯೇ? ಒಂದು ಅಸ್ವಾಭಾವಿಕವಾದ ಮರಣದ ವರದಿ ಬಂದಾಗ, ಅದನ್ನು ಮಾಡಿದ್ದಾರಾ? ಏಕೆ ನಾವು ಈ ವಿಚಾರವನ್ನು ತೆಗೆದುಕೊಂಡಿದ್ದೇವೆ ಮತ್ತು ಇದರ ಬಗ್ಗೆ ಏಕೆ ಒಂದು ಗಂಭೀರವಾದಂಥಹ ಚರ್ಚೆಯನ್ನು ಮಾಡುತ್ತಿದ್ದೇವೆ ಎಂದರೆ ಕಾನೂನು ಪ್ರಕಾರ ಪೊಲೀಸ್ ಇಲಾಖೆ ಏನು ಕೆಲಸ ಮಾಡಬೇಕಿತ್ತು ಅದನ್ನು ಪೂರಾ ಬದಿಗಿಟ್ಟು ಈ ಪ್ರಕರಣದ ದಿಕ್ಕು ಬದಲಿಸುವಂಥಹ ಪ್ರಾಮಾಣಿಕ ಪ್ರಯತ್ನ ನಡೆಯುತ್ತಿದೆ. ಏಕೆ ಹೀಗಾಗುತ್ತಿದೆ? ಪತ್ರಿಕಾ ಮಾಧ್ಯಮಗಳಲ್ಲಿ ಮಾನ್ಯ ಗೃಹಮಂತ್ರಿಗಳು ಇರಬಹುದು, ಮಾನ್ಯ ಮುಖ್ಯಮಂತ್ರಿಗಳಿರಬಹುದು ಇನ್ನಿತರ ಪ್ರಮುಖರು ಏಕೆ ಈ ಪ್ರಕರಣದ ದಿಕ್ಕು ತಪ್ಪಿಸುವಂತಹ ಹೇಳಿಕೆಗಳನ್ನು ಕೊಡುತ್ತಿದ್ದಾರೆ? ತಮಗೆ ಯಾವುದೇ ಇಲಾಖೆಯಿಂದ ಪೂರ್ವಭಾವಿ ವರದಿ ಸಿಕ್ಕಿಲ್ಲ. ಒಟ್ಟು ಈ ಪ್ರಕರಣದಲ್ಲಿ ಒಬ್ಬ ಪ್ರಾಮಾಣಿಕ ಅಧಿಕಾರಿಗೆ ಕಳೆದ ಮೂರು ವರ್ಷಗಳಿಂದ ಕೊಟ್ಟಂಥಹ ಕಿರುಕುಳದಿಂದಾಗಿ ಆತ ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಈ ಹಂತ ಇಟ್ಟುಕೊಂಡಿರಬೇಕಾದರೆ ಅತ್ಯಂತ ಮಾಮೂಲಿಯಾಗಿ ಮಾಡಬೇಕಾದಂತಹ ಕೆಲಸ ಎಂದರೆ ಆತ ಯಾರ ಹೆಸರುಗಳನ್ನು ಹೇಳಿದ್ದಾನೆ ಅವರುಗಳನ್ನು ದಸ್ತಗಿರಿ ಮಾಡಿ ಅವರ ಮೇಲೆ ಪ್ರಕರಣ ದಾಖಲಿಸಬೇಕಿತ್ತು. ಆದರೆ ಇದ್ಯಾವುದನ್ನು

ಮಾಡದೇ ಈ ಇಡೀ ಪ್ರಕರಣವನ್ನು ಮುಚ್ಚಿ ಹಾಕುವಂತಹ ಪ್ರಯತ್ನ ಏನು ಮಾಡುತ್ತಿದ್ದೀರಿ, ಇದರ ಹಿಂದೆ ಒಂದು ಷಡ್ಯಂತ್ರ ಇದೆ. ಇದರ ಹಿಂದೆ ಅದೆಷ್ಟು ಆತ್ಮಹತ್ಯೆ ಪ್ರಕರಣಗಳು ಇದ್ದಾವೆ. ಇದರಲ್ಲಿ ದಾರಿತಪ್ಪಿಸುವಂತಹ ಕೆಲಸ ಆಗುತ್ತಿದೆ. ಮಾನ್ಯ ಕೆ.ಆರ್.ರಮೇಶ್‌ಕುಮಾರ್‌ರವರೇ, ನಾವು ನಿಮ್ಮ ಮೇಲೆ ಬಹಳ ದೊಡ್ಡ ನಿರೀಕ್ಷೆ ಇಟ್ಟುಕೊಂಡಿದ್ದೇವೆ.

**ಸಭಾಪತಿಯವರು:–** ಈ ವಿಷಯದ ಬಗ್ಗೆ ಚರ್ಚೆ ಇಷ್ಟೇ. ಈ ವಿಷಯವನ್ನು ಚರ್ಚೆಗೆ ನಿಯಮ 59 ರಡಿಯಲ್ಲಿ ತೆಗೆದುಕೊಳ್ಳಬೇಕೋ, ಬೇಡವೋ ಎನ್ನುವಂತದ್ದು ಅಷ್ಟೇ.

**ಶ್ರೀ ಕೆ.ಆರ್.ರಮೇಶ್‌ಕುಮಾರ್:–** ಮಾನ್ಯ ಸಭಾಪತಿಯವರೇ, ಈಗ ಮಾನ್ಯ ಕ್ಯಾಪ್ಟನ್ ಗಣೇಶ್ ಕಾರ್ಣಿಕ್‌ರವರು ಹೇಳಿರುವುದಕ್ಕೆ ನಮ್ಮನ್ನು ನಾವು ಸಮರ್ಥಿಸಿಕೊಳ್ಳಬೇಕೋ, ಬೇಡವೋ? ನಮಗೆ ನಮ್ಮ ಹಿರಿಯ ಸಂಸದೀಯ ಪಟುಗಳು ಪಕ್ಷಾತೀತವಾಗಿ ಹೇಳಿಕೊಟ್ಟಿದ್ದು ಏನೆಂದರೆ, listening is most important aspect of parliament life. ಕೇಳಬೇಕು ನಾವು. ಕೇಳಿದಾಗಲೇ ನಾವು ಉತ್ತರ ಹೇಳುವುದಕ್ಕೆ ಆಗುವುದು. ಕೇಳುವ ತಾಳ್ಮೆಯೇ ನಮಗೆ ಇಲ್ಲದೇ ಹೋದರೆ ನಾವು ಹೇಳುವಂತಹ ಮಾತು ಅರ್ಥಹೀನವಾಗಿರುತ್ತೆ. ನಾನು ಮಾನ್ಯ ರಾಮಕೃಷ್ಣ ಹೆಗಡೆಯವರ ಸರ್ಕಾರದ ವಿಚಾರ ಹೇಳುತ್ತೇನೆ. ಆಗ ಕೇಂದ್ರದಲ್ಲಿ ಕಾಂಗ್ರೆಸ್ ಸರ್ಕಾರ ಮತ್ತು ರಾಜ್ಯದಲ್ಲಿ ಜನತಾ ಪಕ್ಷ ಇತ್ತು. ನಾವೆಲ್ಲರೂ ಜನತಾ ಪಕ್ಷದಲ್ಲಿ ಇದ್ದೆವು. ಮಾನ್ಯ ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಯಾಗಿದ್ದರು. ಮಾನ್ಯ ಜಾಲಪ್ಪನವರು ಮಂತ್ರಿಗಳಾಗಿದ್ದರು. ಆ ಸಂದರ್ಭದಲ್ಲಿ ಶ್ರೀ ರಶೀದ್ ಎಂಬುವವರು ಕೊಲೆಯಾದರು. ಅದಕ್ಕೆ ಗೃಹಮಂತ್ರಿಗಳಾಗಿದ್ದ ಮಾನ್ಯ ಜಾಲಪ್ಪನವರೇ ಕಾರಣ ಎಂದು... ಆತ ತಾನೊಂದು ಕಾಲೇಜಿಗೆ ಅರ್ಜಿಯನ್ನು ಹಾಕಿದ್ದ. ಆತನನ್ನು ಮಾನ್ಯ ಜಾಲಪ್ಪನವರು ಕೊಂದರಾ, ಕೊಲ್ಲಿಲ್ಲವಾ ಅಥವಾ ಕೊಲ್ಲುವುದಕ್ಕೆ ಯಾರಾನ್ನಾದರೂ ಕಳುಹಿಸಿದ್ದರಾ? ಮತ್ತು ಆತ ಕಾಲೇಜಿಗೆ ಅರ್ಜಿಯನ್ನು ಹಾಕಿದ್ದನೇ ಅಥವಾ ಹಾಕಿರಲಿಲ್ಲವೇ? ಅಥವಾ ಇನ್ನೊಂದು ಕಾಲೇಜು ಬಂದಿದ್ದರೆ ಮಾನ್ಯ ಜಾಲಪ್ಪನವರು... ಯಾರು ಮೆರಿಟ್ಸ್‌ಗೆ ಹೋಗಲೇ ಇಲ್ಲ. ಮಾನ್ಯ ಜಾಲಪ್ಪನವರು ಹೋದರು. ಮಾನ್ಯ ಜಾಲಪ್ಪನವರು ಹೋಗಬೇಕು... ಅವರನ್ನು ಹರಿದು ಮುಕ್ಕುಬಿಟ್ಟರು. ಮಾನ್ಯ ರಾಮಕೃಷ್ಣ ಹೆಗಡೆಯವರು ಬಹಳ sensitive ಆಗಿದ್ದರು ಮತ್ತು ಅವರಿಗೆ ಸ್ವಲ್ಪ image conscious ಇತ್ತು. I am referring this matter to CBI ಎಂದು ಅವರು ಒಂದು adventure ಮಾಡಿದರು. Outcome ಏನು? ಅವರು ತಮ್ಮದೇ ಆದ ವಿಧಿಯನ್ನು ಅನುಸರಿಸಿದರು. 'Harassment' ಎನ್ನುವ ಪದವನ್ನು ಸಹ ನಾನು ಉಪಯೋಗಿಸುವುದಿಲ್ಲ. I will not be unfair even to CBI. ಅವರು ತಮ್ಮದೇ ಆದ ವಿಧಿ ವಿಧಾನಗಳನ್ನು ಅನುಸರಿಸಿ ಎಲ್ಲಾ ಮಾಡಿದ ಮೇಲೆ ಮಾನ್ಯ ಸುಪ್ರೀಂ ಕೋರ್ಟ್‌ಗೆ ಹೋದರೂ ಸಹ ಮಾನ್ಯ ಜಾಲಪ್ಪನವರ ಮೇಲೆ ಏನನ್ನು ಕೂಡ ಸಾಬೀತು ಮಾಡಲಿಕ್ಕೆ ಆಗಲಿಲ್ಲ. ಅವರು ನಿರ್ದೋಷಿಯಾದರು. ಆ ಹದಿನೈದು ವರ್ಷದ ಅವಧಿಯೊಳಗೆ ಈ ಮೊಕದ್ದಮೆ ಇತ್ಯರ್ಥ ಆಗುವುದರೊಳಗೆ ಅವರ ಕುಟುಂಬ ಏನಾಗಿರುತ್ತೆ? ಅವರ ಪರಿಸ್ಥಿತಿಯೇನಾಗಿರುತ್ತದೆ ಎನ್ನುವುದನ್ನು ನಾವು ಯೋಚನೆ ಮಾಡಿದ್ದೇವೆಯೇ?

ಡಿ.ಕೆ.ರವಿ ಅವರು ಸತ್ತ ತಕ್ಷಣ ನಾವೆಲ್ಲರೂ ಸಾಕಷ್ಟು ಗಲಾಟೆಯನ್ನು ಮಾಡಿದೆವು. ನಮ್ಮ ಕ್ಷೇತ್ರದಲ್ಲಿಯೇ ಅವರು ಜಿಲ್ಲಾಧಿಕಾರಿಯಾಗಿದ್ದರು. ಅವರು ಆತ್ಮಹತ್ಯೆಯನ್ನು ಮಾಡಿಕೊಂಡರು. ಯಾರ್‍ಯಾರಿಗೆ ಏನೇನು ಹೇಳಿಲಿಕ್ಕೆ ಸಾಧ್ಯವಿತ್ತೋ ಅದನ್ನೆಲ್ಲ ಮಾಡಿದರು. ಆದರೆ ನಾವು ಯಾರಾದರೂ ಡಿ.ಕೆ.ರವಿ ಅವರಿಗೆ ಜನ್ಮ ನೀಡಿದ ತಂದೆ ತಾಯಿಯ ಗತಿ ಏನಾಯಿತು ಎನ್ನುವುದರ ಬಗ್ಗೆ ಯೋಚನೆ ಮಾಡಿದ್ದೇವೆಯೇ? ಹಿಂದೆ ಡಿ.ಕೆ.ರವಿ ಗೆ ಒಂದು ಆದಾಯ ಪ್ರಮಾಣ ಪತ್ರವನ್ನು ಪಡೆಯಲು ಅವರ ಅಪ್ಪ ಗ್ರಾಮಲೆಕ್ಕಿಗನ ಬಳಿಗೆ ಹೋದಾಗ ಆ ಗ್ರಾಮಲೆಕ್ಕಿಗ ಅವರ ಅಪ್ಪನನ್ನು ಕರೆದುಕೊಂಡು ಬಾರ್ ಗೆ ಹೊಗುತ್ತಾರೆ, ಅಲ್ಲಿ ಆತ ಚೆನ್ನಾಗಿ ಕುಡಿದು ತಿಂದು ಬಿಲ್ಲನ್ನು ಇವರ ಅಪ್ಪನ ಕೈಯಲ್ಲಿ ಕೊಡುತ್ತಾರೆ, ಆದರೆ ಇವನ ಅಪ್ಪನ ಬಳಿ ಹಣ ಇರುವುದಿಲ್ಲ. ಆಗ ರವಿಯನ್ನು ಹೊಟೇಲ್‌ನಲ್ಲಿಯೇ ಒತ್ತೆಯಿಟ್ಟು ಹೊರಗೋಗಿ ಸಾಲವನ್ನು ಪಡೆದುಕೊಂಡು ಬಂದು ಹಣ ಕಟ್ಟಿ ರವಿಯನ್ನು

ಬಿಡಿಸಿಕೊಂಡು ಹೋಗುತ್ತಾರೆ. ಅಂತಹ ಹಿನ್ನಲೆಯಲ್ಲಿ ಬೆಳೆದ ರವಿ ಮುಂದೆ ಸ್ಫೂರ್ತಿ ಪಡೆದು ಐಎಎಸ್ ಬರೆದು ಅಧಿಕಾರಿಯಾಗುತ್ತಾರೆ. ಅದಕ್ಕೂ ಮೊದಲು ಅವರು State Service ನಲ್ಲಿ Excise Inspector recruit ಆಗಿದ್ದಾಗ, ರಜೆ ಕೇಳಿದರೂ ಕೊಡಲಿಲ್ಲ ಎನ್ನುವ ಕಾರಣಕ್ಕಾಗಿ ಆ ಕೆಲಸವೇ ಬೇಡವೆಂದು ರಾಜಿನಾಮೆ ಕೊಟ್ಟು ಹೋದರು. ಆದರೆ ಯಾವ ಒಂದು rage or emotion ಗೋ ಅಥವಾ ಯಾವ ಕಾರಣಕ್ಕೋ ಗೊತ್ತಿಲ್ಲ, ತನ್ನನ್ನು ತಾನು ಇದ್ದಕ್ಕಿದ್ದ ಹಾಗೆ ಅಂತ್ಯ ಮಾಡಿಕೊಂಡು ಬಿಟ್ಟನು. ಆದರೆ ಅವರ ತಂದೆತಾಯಿಗಳು ಮಗನ ಬಗ್ಗೆ ಎಷ್ಟು ಕನಸ್ಸನ್ನು ಕಂಡಿರುತ್ತಾರೆ? ಅವರ ಹೆಂಡತಿ ಕುಸುಮಾ, she is my daughter. ರವಿ ಆತ್ಮಹತ್ಯೆಯನ್ನು ಮಾಡಿಕೊಂಡಾಗ ಆಕೆಯ ವಯಸ್ಸು 26 ವರ್ಷಗಳು ಮಾತ್ರ, ಆದರೆ....

**(ಗೊಂದಲ)**

**ಶ್ರೀ ಕೆ.ಆರ್. ರಮೇಶ್‌ಕುಮಾರ್:=** ದಯಮಾಡಿ ಕುಳಿತುಕೊಳ್ಳಿ, We are through a very serious matter. ಮಾಧ್ಯಮಗಳಲ್ಲಿ ಪತ್ರಿಕೆಗಳಲ್ಲಿ ಏನೆಲ್ಲಾ ಬರೆದು ಬಿಟ್ಟರು? ಪೆನ್‌ಗೆ ಹದ್ದೇ ಇರಲಿಲ್ಲ. ಆ ಹೆಣ್ಣುಮಗಳ ಚಾರಿತ್ರ್ಯದ ಮೇಲೆ ಕೂಡ ಬರೆದಿದ್ದರು. ಆ ಹೆಣ್ಣುಮಗುವನ್ನು ಹೆತ್ತ ತಂದೆತಾಯಿಗಳ ಗತಿ ಏನಾಗಿರಬಹುದು? ಒಂದು ವರ್ಷ ಕಳೆದು ಹೋಯಿತು, ಅವರ ಕೇಸನ್ನು ಸಿಬಿಐಗೆ ಒಪ್ಪಿಸಿದ್ದು ಆಯಿತು. ಆದರೆ ನೀಡಿರುವ ವರದಿಯನ್ನು ರಾಜ್ಯಸರ್ಕಾರಕ್ಕೆ ಒಪ್ಪಿಸಿದ್ದಾರೆಯೇ; ಆರೋಪಗಳು ಸತ್ಯನಾ ಸುಳ್ಳಾ ಎನ್ನುವುದನ್ನು ಸಾಬೀತು ಮಾಡಿ, ಕ್ರಮವನ್ನು ಜರುಗಿಸಲಾಗಿದೆಯೇ ಇಲ್ಲವಾ? ಆತನಿಗೆ ಖಿನ್ನತೆ ಇತ್ತಾ, ಮೋಹ ಇತ್ತಾ ಬೇರೆ ಏನಾದರೂ ಭಯ ಇತ್ತಾ, ಹೆಂಡತಿ ಕಾಟನಾ? ತಂದೆತಾಯಿ ಕಾರಣರಾ? ಅಂತ ಏನಾದರೂ ಇವತ್ತಿನವರೆಗೆ ನಮಗೆ ಹೇಳಿದ್ದಾರೆಯೇ? ನಮ್ಮ ಕುಟುಂಬದವರು ಆವರಿಗೆ ಬಹಳ ಹತ್ತಿರದವರು, ಆ ಮಗುವಿಗಾಗಿ ನಾವು ಅತ್ತಿದ್ದೇವೆ. ಈಗ ಆ ಮಗು ಅಮೇರಿಕಾಗೆ ಹೋಗಿ Post Graduation ಮಾಡುತ್ತಿದ್ದಾರೆ. ಈ ವಿಚಾರವನ್ನು ರಾಜಕಾರಣಕ್ಕಾಗಿ ಕ್ಷಣಿಕವಾಗಿ ಅವತ್ತು ಅದನ್ನು ಉಪಯೋಗಿಸಿ ಬಿಟ್ಟುಬಿಟ್ಟೆವು. ಅವರ ಕುಟುಂಬದ ಬಗ್ಗೆ ನಮಗೆ ಯಾವುದೇ ಅಗತ್ಯವಿಲ್ಲ. ನಾನು ಇದನ್ನೆಲ್ಲ ಏಕೆ ಹೇಳುತ್ತೇನೆಂದರೆ ಮತ್ತೊಬ್ಬರು ಕಲ್ಲಪ್ಪ, ನಾನು ಹಿಂದೊಮ್ಮೆ ಚಿಕ್ಕಮಗಳೂರಿನ ಆಸ್ಪತ್ರೆಗೆ ಅನಿರೀಕ್ಷಿತ ಭೇಟಿಯನ್ನು ನೀಡುವ ಸಲುವಾಗಿ ಹೋಗಿದ್ದಾಗ ಈ ಸದನದ ಮಾಜಿ ಸದಸ್ಯರಾದ ಗಾಯತ್ರಿಯವರು ನಮ್ಮ ಮನೆಗೆ ಬಂದು ಟೀ ಸ್ವೀಕರಿಸಿ ಹೋಗಬೇಕೆಂದು ಹೇಳಿದ ಹಿನ್ನಲೆಯಲ್ಲಿ 'ಬರುತ್ತೇನೆ' ಎಂದು ಹೇಳಿ ಅವರ ಮನೆಗೆ ಹೋಗಿದಂತಹ ಸಂದರ್ಭದಲ್ಲಿ ಈತ ಅಲ್ಲಿಗೆ ಬಂದಿದ್ದನು. ನನ್ನ ಎದುರಿನಲ್ಲಿ ಈಗಲೂ ಆತ ಯೂನಿಫಾರ್ಮ್‌ನಲ್ಲಿ ನಿಂತ ಹಾಗಿದೆ. ಸರ್, ನಾನು ಬಂಗಾರುಪೇಟೆಯಲ್ಲಿ ಕೆಲಸ ಮಾಡುತ್ತಿದ್ದೆನು ಎಂದು ಹೇಳಿದಾಗ, ನೀವು ಬೆಳಗಾವಿಯವ ಅಲ್ಲಿಗೆ ಏಕೆ ಬಂದೆ, ಎಂದು ಕೇಳಿದ್ದೆನು, ಉದ್ಯೋಗಕ್ಕಾಗಿ ಅಲ್ಲಿಗೆ ಬಂದಿರುವುದಾಗಿ ಆತ ಹೇಳಿದ್ದನು. ನೋಡಲಿಕ್ಕೆ ಬಹಳ ಸ್ಮಾರ್ಟ್ ಆಗಿ ಕಾಣಿಸಿದನು. ಅದಾದ ಮೇಲೆ ಎರಡೇ ದಿವಸ ಕಳೆದದಿರುವುದು ಆತ ಆತ್ಮಹತ್ಯೆಯನ್ನು ಮಾಡಿಕೊಂಡಿದ್ದಾನೆ. ಅದರ ಬಗ್ಗೆ ಪತ್ರಿಕೆಗಳಲ್ಲಿ ವಿವಿಧ ರೀತಿಯಲ್ಲಿ ಬರೆದರು. ಜೂಜಿನ ದಂಧೆಯಲ್ಲಿದ್ದು, ಅದು ಈತನನ್ನು ಬಲಿ ತೆಗೆದುಕೊಂಡಿದೆ, ಇನ್ನು ಕೆಲವರು ಇನ್ನೊಂದನ್ನು ಹೇಳುತ್ತಾರೆ. ಅವನು ಸಮಾಜಕ್ಕೆ ಹೆದರಿದನೋ ಪ್ರತಿಷ್ಠೆಗೆ ಹೆದರಿದನೋ ಅಥವಾ ತಾನು ಮಾಡಿದ ತಪ್ಪಿಗೆ ಹೆದರಿದನೋ ಮಾವನ ಮನೆಗೆ ಹೋಗಿ ನೇಣನ್ನು ಹಾಕಿಕೊಳ್ಳುತ್ತಾನೆ. ಆದರೆ ಇದರ ಪರಿಣಾಮವನ್ನು ಹೆದರಿಸುವವರು ಯಾರು; ಸತ್ಯಾಂಶವನ್ನು ಎದುರಿಸುವವರು ಯಾರು? 'ಓಡಿ ಹೋಗಿ ಬೇಲ್ ತಗೋ ಇಲ್ಲದಿದ್ದರೆ ನಿನ್ನನ್ನು ಜೈಲಿಗೆ ಹಾಕುವುದಾಗಿ ಹೆದರಿಸಿದ್ದರು ಅಂತ', ಮೊದಲು ಈತನಿಗೆ ಎಸ್‌ಪಿ ಹಿಂಸೆಯನ್ನು ಕೊಟ್ಟ ಎಂದು ಹೇಳಿದರು. ಆಮೇಲೆ ಅದೇ ಎಸ್‌ಪಿ ಒಳ್ಳೆಯ ಮಾತುಗಳನ್ನು ಆಡಿದ್ದಾರೆ. ಇದೆಲ್ಲಾ ಪತ್ರಿಕೆಗಳಲ್ಲಿ ಬಂದಿದೆ. ಹಾಗೆಯೇ ಅನುಪಮ ಶಣೈ ಅವರ ವಿಚಾರವನ್ನು ಕೂಡ ಹೇಳಿದ್ದಾರೆ. ಆ ಹೆಣ್ಣುಮಗಳು ಕಷ್ಟಪಟ್ಟು ಓದಿ, ಮೆರಿಟ್ ಮೇಲೆ ಸೆಲೆಕ್ಟ್ ಆಗಿದ್ದರು, ಸರ್ವೀಸ್‌ನಲ್ಲಿ ತೊಡಕುಗಳು ಇರುತ್ತವೆ, ಏಳುಬೀಳುಗಳು ಇರುತ್ತವೆ. ರಾಜಿನಾಮೆ ನೀಡುವುದು, ಅಥವಾ ಸೇವೆಯಲ್ಲಿ ಮುಂದುವರೆಯುವುದು ಆಕೆಗೆ ಸೇರಿದ ವಿಚಾರ. ಎಷ್ಟು ಜನ ಅಧಿಕಾರಿಗಳಿಗೆ ತಮ್ಮ ಸೇವಾವಧಿಯಲ್ಲಿ humiliation ಆಗಿರುವುದಿಲ್ಲ, Now, the post of DGP is filled through a selection. ನಾಲ್ಕು ಜನ ನಾನೇ ಜಜಜಡಿತುಟಿರ ಅಂದುಕೊಂಡಿರುತ್ತಾರೆ, ಆದರೆ ಒಬ್ಬರಿಗೆ ಮಾತ್ರ ಡಿಜಿಪಿ ಆಗಲಿಕ್ಕೆ ಸಾಧ್ಯ. ಕೆಲವರಿಗೆ executive posting ಸಿಗುವುದೇ ಇಲ್ಲ. They will serve in the non-executive post throughout. Humiliation ಆಗುತ್ತದೆ. Is the resignation or suicide an

answer to the problems that we face while we are in service? ನಾವು ರಾಜಕಾರಣಿಗಳು, ಎಷ್ಟು ಜನರು ಹೊತ್ತು ಮೆರವಣಿಗೆ ಮಾಡುತ್ತಾರೆ, ನೀವೇ ಉಪ ಮುಖ್ಯಮಂತ್ರಿಯಾದಾಗ ಜನರ ಪ್ರತಿಕ್ರಿಯೆ ಹೇಗಿತ್ತು, ತಾವು ಅಧಿಕಾರದಿಂದ ನಿರ್ಗಮಿಸುವಾಗ ಜನರ ಭಾವನೆಗಳು ಹೇಗಿತ್ತು, ತಮಗೆ ಗೊತ್ತಿಲ್ಲವೇ? ಪುನಃ ನೀವು ಆರಿಸಿ ಬರುತ್ತೀರಿ ಎಂದು ಗೊತ್ತಾದ ಮೇಲೆ ನಿಮ್ಮ ಮನೆಗಳ ಬಳಿ ಹೇಗೆ ಬರುತ್ತಾರೆ., ಇದು ಬದುಕು. ನಾನು ವಿರೋಧ ಪಕ್ಷದ ನಾಯಕರಲ್ಲಿ ವಿನಂತಿಸಿಕೊಳ್ಳುವುದೇನೆಂದರೆ ಈ ಬಗ್ಗೆ ಮುಖ್ಯಮಂತ್ರಿಗಳು ಹಾಗೂ ಗೃಹಸಚಿವರು ಹೇಳಿಕೆಗಳನ್ನು ನೀಡಿದ್ದಾರೆ. ಈ ಅಸ್ವಾಭಾವಿಕ ಸಾವನ್ನು ನೋಟೀಸ್ ಮಾಡಿದ ಮೇಲೆ FIR ಹೋಗಿದೆ, ಅದನ್ನು ಆಧರಿಸಿ ಅದರಲ್ಲಿ ಇವರ ಯಾರ ಪಾತ್ರವೂ ಇಲ್ಲ ಎನ್ನುವುದನ್ನು ಮಾತ್ರ ಅವರು ಹೇಳಿದ್ದಾರೆ. ತನಿಖೆಯ ಬಗ್ಗೆ ಅವರೇನು ಹೇಳಿರುವುದಿಲ್ಲ. Supposing, if the Enquiring authority confirms the opinion of the Press, ನಮಗೂ alternative ಇಲ್ಲ, ನಿಮಗೂ alternative ಇಲ್ಲ.

ನನ್ನದೇ ಒಂದು ವಿಚಾರವನ್ನು ಇಲ್ಲಿ ಅಗತ್ಯ ಇಲ್ಲದಿದ್ದರೂ ಸಹ ಹೇಳುತ್ತೇನೆ. ಮೊನ್ನೆ 2013ರ ಚುನಾವಣೆ ಸಂದರ್ಭದಲ್ಲಿ ಮತ ಎಣಿಕೆಯ ಹಿಂದಿನ ದಿವಸ, Counting Agents ಗಳನ್ನು ಏರ್ಪಾಡು ಮಾಡಬೇಕೆಂದು ನನ್ನ ಕಾರ್ಯಕರ್ತರನ್ನು ಕೂರಿಸಿಕೊಂಡಿದ್ದರೆ ಸುಮಾರು 7 ಗಂಟೆ ಸಂಜೆಯಲ್ಲಿ ಆಕ್ಸಿಡೆಂಟ್ ಆಗಿ ಯಾರೋ ತೀರಿಕೊಂಡಿದ್ದಾರೆ ಎನ್ನುವ ಸುದ್ದಿ ಬಂತು. 'ಅಯ್ಯೋ ಪಾಪ ಏನಾಯ್ತೋ' ಎಂದಷ್ಟೆ ನಾನು ಹೇಳಿದೆ. ಇನ್ನರ್ಧ ಗಂಟೆಯಲ್ಲಿ ನನಗೆ ಪೋನ್ ಮಾಡಿ, ಅದನ್ನು ಮರ್ಡರ್ ಕೇಸ್ ಎಂದು ರಿಜಿಸ್ಟರ್ ಮಾಡಬೇಕೆಂದಿದ್ದಾರೆ, ಅದರಲ್ಲಿ ನಿಮ್ಮದು 13–14ನೇಯ ಹೆಸರು ಸೇರಿಸುತಿದ್ದಾರೆ ಎಂದು ಹೇಳಿದರು. ನಾನು ಕಣ್ಣೀರು ಹಾಕಿಕೊಂಡು ಹೋದೆ, ಮತ ಎಣಿಕೆಗೂ ಹೋಗಲಿಲ್ಲ. ಸಾಕು ಬಿಡಪ್ಪ ಸಾರ್ಥಕ ಆಯ್ತು ಬದುಕು ಎಂದು ತಲೆ ಬಗ್ಗಿಸಿಕೊಂಡು ಬಂದೆ. ತಾವು ಸಹ ಸಾಕಷ್ಟು ಚುನಾವಣೆಗಳನ್ನು ಎದುರಿಸಿದ್ದೀರಿ. ಯಾವುದೇ ಅಭ್ಯರ್ಥಿಗೆ ಬೆಳಿಗ್ಗೆ ಕೌಂಟಿಂಗ್ ಇದೆ ಎಂದರೆ ಸಾಯಂಕಾಲ ಮರ್ಡರ್ ಮಾಡಿಸುವ ಕೆಲಸ ಇರುತ್ತದೆಯೇ? Agitation ಮಾಡಿಬಿಟ್ಟರು, ಆ ಇನ್ಸ್‌ಪೆಕ್ಟರ್ ನನ್ನ ಹೆಸರನ್ನು ಕೂಡ 13–14ರಲ್ಲಿ ಸೇರಿಸಿಬಿಟ್ಟರು. ಸತ್ತು ಹೋದಂತಹವನು ಪಂಚಾಯಿತಿ ಮೆಂಬರ್ ಕೂಡ ಇಲ್ಲ. ಚೌಡರೆಡ್ಡಿಯವರು ಆ ಕ್ಷೇತ್ರದವರೆ ಆಗಿದ್ದಾರೆ. ಅದು ಯಾವುದಕ್ಕೆ ಸಹಾಯವಾಯಿತು ಎಂದರೆ ನನ್ನ ಹೆಸರು ಮರ್ಡರ್ ಕೇಸಿನಲ್ಲಿ ಬಂದಿದ್ದರಿಂದ, ದೆಹಲಿಗೆ ಹೋಗುವ ಮಂತ್ರಿಮಂಡಲ ರಚನೆಯ ಲಿಸ್ಟಿನಲ್ಲಿ ನನ್ನನ್ನು ತಪ್ಪಿಸುವುದಕ್ಕೆ ಅದು ಅನುಕೂಲವಾಯಿತು, ನನಗೆ ಅದರ ಬಗ್ಗೆ ಚಿಂತೆ ಏನೂ ಇಲ್ಲ. ನನ್ನ ಮೇಲೆ FIR register ಮಾಡಿದ ಎಸ್‌ಐ, ಆಮೇಲೆ 2 ವರ್ಷ ಅಲ್ಲಿಯೇ ಇದ್ದ, ನಾನು ಒಂದು ದಿವಸ ಅವನ ಜೊತೆ ಮಾತನಾಡಲಿಲ್ಲ. ರೆಕಾರ್ಡ್ಸ್ ತರಿಸಿ ನೋಡಿ. ಏನೋ ಆತನಿಗೆ ಒತ್ತಡ ಬಂದಿದೆ. ಆತನ ತಿಳುವಳಿಕೆ ಅಷ್ಟೆ. ನಾನು ರಾಜಕಾರಣಿ, ಈ ಕ್ಷೇತ್ರದ ಅಭ್ಯರ್ಥಿ. He did not apply his mind to these aspects. 8ನೇ ತಾರೀಖು ಫಲಿತಾಂಶ, 13ನೇ ತಾರೀಖು ಸಂಪುಟದ ರಚನೆ, 12ನೇ ತಾರೀಖಿನ ಮಧ್ಯರಾತ್ರಿಯಂದು ನನ್ನ ಹೆಂಡತಿ ಅಮೇರಿಕಾಗೆ ಹೋಗಬೇಕು. ಏಕೆಂದರೆ My daughter was expecting a baby. ನಮ್ಮ ಕುಟುಂಬದ ಸ್ಥಿತಿ ಏನಾಗುತ್ತದೆ? ಟಿವಿ ತುಂಬಾ ಕೊಲೆ ಕೇಸಿನಲ್ಲಿ ನಾನಿದ್ದೇನೆ ಎಂದು ತೋರಿಸುತ್ತಿದ್ದಾರೆ. ನಾನು ಒಪ್ಪಿಕೊಂಡರೂ ಒಪ್ಪಿಕೊಳ್ಳದಿದರೂ ಸಹ ಜಾತಿಯಿಂದ ಬ್ರಾಹ್ಮಣ. ಅಲ್ಲಿ 1000 ಮತದಾರರ ಒಳಗೆ ನಾವು ಇದ್ದೇವೆ. ನಾನು ಮರಳು ಗ್ರಾನೈಟ್ ದಂಧೆ ನಡೆಸುವವನು ಅಲ್ಲ, ಕೋಟ್ಯಾಧೀಶ್ವರನು ಅಲ್ಲ, ಯಾವುದೇ ಮಾಫಿಯಾ ನನಗೆ ಇಲ್ಲ. ನಾನು ಏಕೆ ಮರ್ಡರ್‌ಗಳನ್ನು ಮಾಡಿಸಲಿ, ಮಾಡಿಸಲಿಕ್ಕೆ ಆಯುಧಗಳಾದರೂ ನನಗೆ ಬೇಕಲ್ಲವೇ? ನನಗೆ ವೈಯುಕ್ತಿಕವಾಗಿ ಕಷ್ಟ ಬಂದು ಮಾನ ಮರ್ಯಾದೆಯ ಪ್ರಶ್ನೆ ಬಂದಾಗ ಸೋಮಣ್ಣನವರಂತಹ ಸ್ನೇಹಿತರ ಸಹಾಯವನ್ನು ಪಡೆದುಕೊಂಡಿರುತ್ತೇನೆ. ಆದರೆ ಮಾಧ್ಯಮದವರು ನಮ್ಮನ್ನು ಬಿಡಲಿಲ್ಲ. ಈ ವ್ಯವಸ್ಥೆಯಲ್ಲಿ ನಾನು ಇದು ತಪ್ಪು ಇದು ಸರಿ ಎಂದು ಹೇಳುವುದಕ್ಕೆ ಹೋಗುವುದಿಲ್ಲ. ದುಸ್ಸಾಹಸ ಮಾಡುವುದಿಲ್ಲ. ಕಾನೂನು ರೀತಿಯಲ್ಲಿ ತನಿಖೆ ನಡೆಯುತ್ತಿದೆ. ಮೃತ ಗಣಪತಿ ಅವರ ಹೆಂಡತಿ ಮತ್ತು ಮಗ ಏನು ಹೇಳಿಕೆಯನ್ನು ನೀಡಿದ್ದಾರೆ, ಅದು ಕೂಡ ಈಗ ತನಿಖೆಯ ಒಂದು ಭಾಗ ಆಗುತ್ತದೆ. ಅದರ ಸತ್ಯಾಸತ್ಯತೆಗಳನ್ನು ಕೂಡ ತನಿಖೆಯಲ್ಲಿ ಕಾಣಬಹುದು. ನಾವು ಸದನದಲ್ಲಿ we cannot take a decision about it. I.O., ಅನ್ನು ನೇಮಕ ಮಾಡಿರುತ್ತಾರೆ, ಒಂದು ವೇಳೆ ಇದಕ್ಕೂ ಮಿಗಿಲಾದ ವಸ್ತು ನಮ್ಮ ಬಳಿ ಇದೆ, ನೇರವಾಗಿ ಅವರು ಆರೋಪಿಗಳು ಎನ್ನುವುದಕ್ಕೆ ನಮ್ಮ ಬಳಿ ಸಾಕ್ಷ್ಯಾಧಾರಗಳು ಇವೆ

ಎನ್ನುವುದಾದರೆ ಸದನದ ಹೊರಗೆ ಒಂದು ಅಭಿಪ್ರಾಯ ಹೋಗಬಾರದು. ಇದರ ಚರ್ಚೆಯನ್ನು ಚಿತಿರುಜ ಮಾಡುವುದು ಬೇಡ, ಆದರೆ ನಿಯಮ 59ರ ಅಡಿಯಲ್ಲಿ ಚರ್ಚೆ ಮಾಡುವುದು ಬೇಡ. It's not a good precedent. You (Hon'ble Chairman) can take-up a discussion on that. We will hear them (Opposition Members). ಅವರು ನಿಮ್ಮ ಆತ್ಮವನ್ನು ಕೇಳಿಕೊಳ್ಳಿ ಎನ್ನುವ ಮಾತನ್ನು ಹೇಳಿದರು, ನಾನು ಕೂಡ ನಿಮಗೆ ಅದೇ ಮಾತುಗಳನ್ನು ಹೇಳುತ್ತೇನೆ, ನಾವೆಲ್ಲರೂ ಸಹ ಆತ್ಮವನ್ನು ಇಟ್ಟುಕೊಂಡು ಈ ಸದನದಲ್ಲಿ ಕೆಲಸವನ್ನು ಮಾಡಿದರೆ ರಾಜಕಾರಣವನ್ನು ದೂರ ಸರಿಸಿದರೆ, ಮಾನವೀಯತೆಯನ್ನು ಗೌರವಿಸಿದರೆ ಸಾವು ಒಂದು ಕೆಟ್ಟದ್ದು ಅದು ಆಗಬಾರದು ಎನ್ನುವುದಾದರೆ ಎಲ್ಲಾದರೂ ಸಾವು ಆದಾಗ ನಾವು ಕನಿಷ್ಠ ನೋವನ್ನು ವ್ಯಕ್ತಪಡಿಸಬೇಕೆನ್ನುವ ಕನಿಷ್ಠ ತೀರ್ಮಾನಕ್ಕೆ ಬಂದರೆ ..... I don't think, the Government will be interested in protecting anybody unnecessarily. ಹಾಗಾಗಿ ಬೇರೆ ಯಾವುದಾದರೂ ನಿಯಮದಡಿಯಲ್ಲಿ ಈ ವಿಚಾರವನ್ನು ಚರ್ಚೆಗೆ ತನ್ನಿ. ನಮ್ಮದೇನೂ ಆಕ್ಷೇಪಣೆ ಇಲ್ಲ. ನಿಯಮ 59ರ ಅಡಿಯಲ್ಲಿ ಈ ವಿಚಾರ ಚರ್ಚೆ ಮಾಡುವುದಕ್ಕೆ ಯಾವ ರೀತಿಯಿಂದಲೂ ಸಹ ಅರ್ಹತೆ ಇಲ್ಲ.

**ಶ್ರೀ ರಮೇಶ್ ಕುಮಾರ್:–** ಆದ್ದರಿಂದ ವಿರೋಧ ಪಕ್ಷದ ನಾಯಕರು ಯಾವ ಪ್ರಸ್ತಾವಿಕ ಪೀಠಿಕೆಯನ್ನು ಸಲ್ಲಿಸಿದ್ದಾರೆ, ಇದನ್ನು ತಿರಸ್ಕರಿಸಬೇಕೆಂದು ಅತ್ಯಂತ ಕಳಕಳಿಯಿಂದ ನಾನು ಮನವಿಯನ್ನು ಮಾಡಿಕೊಳ್ಳುತ್ತೇನೆ.

**ಶ್ರಿ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಗಳೇ, ಬಹಳ ವ್ಯವಸ್ಥಿತವಾಗಿ, ಬಹಳ ಬುದ್ಧಿವಂತಿಕೆಯಿಂದ ಮಾನ್ಯ ರಮೇಶ್ ಕುಮಾರ್‌ರವರು ಮಾತನಾಡಿದ್ದಾರೆ. ಅವರ ಬುದ್ಧಿವಂತಿಕೆಯನ್ನು ನಾನು ಮೆಚ್ಚಿಕೊಳ್ಳುತ್ತೇನೆ. ಅವರು ಡಿ.ಕೆ, ರವಿ, ಕಲ್ಲಪ್ಪ, ಬಗ್ಗೆ ಪ್ರಸ್ತಾಪ ಮಾಡಿದರು. ಆದರೆ ಶ್ರೀಮತಿ ಶಿಖಾ ಅವರ ಬಗ್ಗೆ ಏಕೆ ಪ್ರಸ್ತಾಪ ಮಾಡಲಿಲ್ಲ? ಏಕೆಂದರೆ ಅವರು ನೇರವಾಗಿ ದೂರನ್ನು ನೀಡಿದ್ದಾರೆ. ದೂರು ನೀಡಿದ ಕ್ಷಣದಿಂದ ಇಲ್ಲಿಯವರೆಗೆ ಏನೇನು ಆಕೆಗೆ ಏನೇನು ಏಕವಚನದಲ್ಲಿ ಬೈಯ್ದಿದ್ದಾರೆ ಎನ್ನುವುದು ಗೊತ್ತು. ನಮ್ಮ ಕಚೇರಿಯಿಂದ ನಾವು ಪೋನ್ ಮಾಡಿದಾಗ ಸ್ವಂತ ನನ್ನ ಅಕ್ಕ ಅಥವಾ ತಂಗಿಗೆ ಆಗಿದ್ದರೆ ನಾನು ಏನು ಮಾಡುತ್ತಿದ್ದೆ ಎನ್ನುವಷ್ಟು ನೋವು ನನಗಾಯಿತು, ಸಿಟ್ಟು ಬಂದಿತು. ಆಕೆ ದೂರನ್ನು ನೀಡಿ ವಾರಗಟ್ಟಲೆ ಆದರೂ ಸಹ ಇಲ್ಲಿಯವರೆಗೆ ಅವರನ್ನು arrest ಮಾಡಲೇ ಇಲ್ಲ ಎಂದರೆ ರಮೇಶ್‌ಕುಮಾರ್ ಅವರ ಮೌಲ್ಯ ಎಲ್ಲಿದೆ?

ಎರಡನೆಯದಾಗಿ ರವಿ ಆಗಲಿ, ಕಲ್ಲಪ್ಪ ಆಗಲಿ death note ಬರೆದಿಲ್ಲ. ನೇರವಾಗಿ ಮಡಕೇರಿಯಲ್ಲಿ ಬಿ–ಟಿವಿಯವರನ್ನು ಕರೆದು ಸಂದರ್ಶವನ್ನು ಕೊಟ್ಟಿಲ್ಲ, ಡಿ.ಕೆ. ರವಿ ಮತ್ತು ಕಲ್ಲಪ್ಪನವರ ಪ್ರಕರಣವೇ ಬೇರೆ ಶಿಖಾ ಮತ್ತು ಗಣಪತಿಯವರ ಪ್ರಕರಣವೇ ಬೇರೆ. ನೇರವಾಗಿ ಈಖುಖ ಕೊಟ್ಟಿದ್ದಾರೆ. ಶಿಖಾರವರು ನೇರವಾಗಿ ದೂರನ್ನು ನೀಡಿದ್ದಾರೆ. ನಾನು ಏಕೆ ಇದನ್ನು ಹೇಳುತ್ತಿದ್ದೇನೆಂದರೆ.....

**ಶ್ರೀ ರಮೇಶ್ ಕುಮಾರ್:–** ದಯಮಾಡಿ ಕ್ಷಮಿಸಬೇಕು, ನನ್ನಿಂದ ಲೋಪವಾಗಿದೆ, ಶಿಖಾರವರ ವಿಚಾರವನ್ನು ಉದ್ದೇಶಪೂರ್ವಕವಾಗಿ ಕೈ ಬಿಡಲಿಲ್ಲ. ಶಿಖಾ ಅವರ ಕೇಸಿನಲ್ಲಿ ಶಿಖಾರವರೆ ದೂರುದಾರರು. ಆರೋಪಿತ ವ್ಯಕ್ತಿ ಅಪರಾಧಿ. ಆತ ತಲೆ ಮರೆಯಿಸಿಕೊಂಡಿದ್ದಾನೆ. ಪೊಲೀಸಿನವರು ಆತನನ್ನು ಹುಡುಕುವ ಪ್ರಯತ್ನದಲ್ಲಿದ್ದಾರೆ.

**ಶ್ರೀ ಸಂದೇಶ್ ನಾಗರಾಜ್:–** ಮೈಸೂರಿನಲ್ಲಿಯೇ ಇದ್ದಾರೆ, ಎಲ್ಲಿಯೂ ತಲೆಮರೆಸಿಕೊಂಡಿಲ್ಲ. ರಮೇಶ್ ಕುಮಾರ್‌ರವರ ಬಾಯಿಯಿಂದ ಈ ಮಾತು ಬರಬಾರದು.

**(ಗೊಂದಲ)**

**ಶ್ರೀ ರಮೇಶ್ ಕುಮಾರ್:–** ಸ್ವಲ್ಪ ದಯಮಾಡಿ ಕೇಳಿ, ಮರಿಗೌಡ ಮುಖ್ಯಮಂತ್ರಿಗಳ ಮನೆ ಹತ್ತಿರವೋ ಸಂಬಂಧಿಕರ ಮನೆಯ ಹತ್ತಿರ ಅಥವಾ ಯಾವುದಾದರೂ ರಾಜಕಾರಣಿಗಳ ಮನೆಯ ಬಳಿ ಇದ್ದರೆ ದಯಮಾಡಿ ನಮಗೆ ತಿಳಿಸಿ, ಅಥವಾ ಇಂತಹ ಕಡೆ ಇದ್ದಾರೆ ಎನ್ನುವುದನ್ನು ತಿಳಿಸಿ.

**ಶ್ರೀ ಕೆ.ಎಸ್.ಈಶ್ವರಪ್ಪ:–** ವಿಶ್ವವಾಣಿ ಪತ್ರಿಕೆಯಲ್ಲಿ ಆತ ಎಲ್ಲಿದ್ದಾನೆ ಎನ್ನುವುದು ಬಹಿರಂಗವಾಗಿ ಬಂದಿದೆ. ನಾವು ಹೇಳುವಂಥದ್ದು ಏನು ಉಳಿದಿದೆ? ಇಲ್ಲದಿದ್ದರೆ ಅವರು ಆ ಪತ್ರಿಕೆ ಮೇಲೆ ಕೇಸ್ ಹಾಕಲಿ?

**ಶ್ರೀ ಶ್ರೀನಿವಾಸ ಪೂಜಾರಿ:–** ಪತ್ರಿಕೆಯಲ್ಲಿ ಬಂದಿರುವುದು ಏನೆಂದರೆ "ಶ್ರೀಮತಿ ಶಿಖಾ ಎನ್ನುವವರನ್ನು ಅವ್ಯಾಚ ಶಬ್ದಗಳಿಂದ ನಿಂದಿಸಿದ್ದು ತಲೆಮರೆಯಿಸಿಕೊಂಡಿರುವ ತಮ್ಮ ಪರಮಾಪ್ತ ಮರಿಗೌಡರ ಬೆಂಬಲಕ್ಕೆ ಸಿದ್ದರಾಮಯ್ಯನವರು ನಿಂತಿದ್ದಾರೆ. ಅವರ ತೋಟದ ಮನೆಯಲ್ಲಿಯೇ ಅವರು ವಾಸ್ತವ್ಯ ಹೂಡಿದ್ದಾರೆ ಎನ್ನುವ ಮಾಹಿತಿ ಖಚಿತವಾಗಿ ತಿಳಿದುಬಂದಿದೆ." ಎಂದು ಅವರು ಹೇಳುತ್ತಾರೆ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಈ ಸರ್ಕಾರವನ್ನು ನೀವು ದಯಮಾಡಿ defend ಮಾಡಿಕೊಳ್ಳುವುದಕ್ಕೆ ಹೋಗಬೇಡಿ. ಟಿವಿಗಳಲ್ಲಿ ಹೇಳಿದ್ದಾರೆ, death note ಬರೆದಿದ್ದಾರೆ. death note ಎಲ್ಲಿ ಹೋಯಿತು?

**ಶ್ರೀ ರಮೇಶ್ ಕುಮಾರ್:–** ಶಿಖಾ ಅವರ ವಿಚಾರದಲ್ಲಿ ಅವರು ಒಬ್ಬ ಜಿಲ್ಲಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿರುವ ಸಂದರ್ಭದಲ್ಲಿ ಒಬ್ಬ ಮನುಷ್ಯ ಬಂದು ಅನಾಗರೀಕವಾಗಿ ವರ್ತಿಸಿದಾಗ ಅವರು ಆ ಬಗ್ಗೆ ದೂರು ನೀಡಿದ್ದಾರೆ, ಅದು ರಿಜಿಸ್ಟರ್ ಕೂಡ ಆಗಿದೆ. ಆತ ಅಪರಾಧಿಯಾಗಿದ್ದು ಆತನನ್ನು ಹಿಡಿಯುವ ಪ್ರಯತ್ನ ನಡೆಯುತ್ತಿದೆ. ಯಾರೇ ಅಪರಾಧ ಮಾಡಿರುವವರು ಸಹ ತಾವಾಗಿಯೇ ಬಂದು surrender ಆಗುವುದಿಲ್ಲ.

**(ಗೊಂದಲ)**

**ಶ್ರೀ ರಮೇಶ್ ಕುಮಾರ್:–** ಪತ್ರಿಕೆಗಳಲ್ಲಿ ಎಲ್ಲರೂ ವರದಿಯನ್ನು ಮಾಡುತ್ತಾರೆ,

**ಶ್ರೀಮತಿ ವಿಮಲಾಗೌಡ:–** ಒಬ್ಬ ಸಾಮಾನ್ಯ ಮನುಷ್ಯ ಆದರೆ ತಕ್ಷಣ ಆತನನ್ನು ಚಿಡಿಡಿಛಣ ಮಾಡುತ್ತೀರಿ, ಒಬ್ಬ ಮಹಿಳಾ ಅಧಿಕಾರಿಯನ್ನು ಅದರಲ್ಲಿಯೂ ಆಕೆ ಒಬ್ಬ ಜಿಲ್ಲಾಧಿಕಾರಿ ಅವರನ್ನು ಈ ರೀತಿ ಅವಮಾನ ಮಾಡಬಹುದೇ?

**ಶ್ರೀ ರಮೇಶ್ ಕುಮಾರ್:–** ಮಹಿಳಾ ಅಧಿಕಾರಿ ಮಾತ್ರವಲ್ಲ, ಡಿ ದರ್ಜೆ ನೌಕರನಿಗೂ ಸಹ ಈ ರೀತಿ ಮಾಡಬಾರದು.

**ಶ್ರೀ ಕೆ.ಎಸ್.ಈಶ್ವರಪ್ಪ:–** ನೀವು ಎರಡನ್ನು ಹೇಳುತ್ತೀರಿ, ಒಂದು ಕಡೆ ಹೀಗೆ ಮಾಡಬಾರದು ಎಂದು ಹೇಳುತ್ತೀರಿ. ನಾವು ನಿಮಗೆ ಮಾತನಾಡಲು ಅವಕಾಶ ನೀಡಿದರೆ ನೀವು ಹರಿಕಥೆ ಹೇಳಿದ ಹಾಗೆ ಹೇಳಿಕೊಂಡು ಹೋದರೆ ಅದನ್ನು ಆರಾಮವಾಗಿ ನಾವು ಕೇಳಿದೆವು. ಆದರೆ ಒಂದಾದರೂ ನಿಮ್ಮ ಮಾತಿನಲ್ಲಿ ಜನರು ನಂಬುವಂಥದ್ದು ಇದೆಯೇ? ಇಲ್ಲಿ ನೀವು ಶಿಖಾ ಅವರ ವಿಚಾರವನ್ನು ಪ್ರಸ್ತಾಪ ಮಾಡಲಿಲ್ಲ. ಇಲ್ಲಿ death note ಬಗ್ಗೆ ಪ್ರಸ್ತಾಪ ಮಾಡಲಿಲ್ಲ. ಬಿ–ಟಿವಿ, ವಿವಿಧ ಟಿವಿಗಳಲ್ಲಿ ಬಂದಂತಹ ವಿಚಾರಗಳನ್ನು ಪ್ರಸ್ತಾಪ ಮಾಡಲಿಲ್ಲ. ಸುಪ್ರೀಮ್ ಕೋರ್ಟಿನ ತೀರ್ಪಿನ ಪ್ರಕಾರ ಆತ್ಮಹತ್ಯೆ ಮಾಡಿಕೊಳ್ಳುವವರು ಏನು ಹೇಳಿರುತ್ತಾರೆ, ಅದು ಸಾಕ್ಷಿ ಆಗುತ್ತದೆ ಅದನ್ನು ಒಪ್ಪಿಕೊಳ್ಳಬೇಕೆಂದು ಹೇಳಿದೆ. ನೀವು ಕಾನೂನು ತಜ್ಞರು ನನಗೆ ಕಾನೂನು ಗೊತ್ತಿಲ್ಲ. ಈ ರೀತಿ ಮೌಲ್ಯದ ಹೆಸರನ್ನು ಹೇಳಿಕೊಂಡು ಈ ರೀತಿ ಖಂಡಿತ ಸರ್ಕಾರದ ಮೌಲ್ಯಗಳನ್ನು ಕಾಪಾಡುವುದಕ್ಕೆ ಆಗುವುದಿಲ್ಲ. ದಯಮಾಡಿ ಈ ಸರ್ಕಾರವನ್ನು defend ಮಾಡಿಕೊಳ್ಳುವುದಕ್ಕೆ ಹೋಗಬೇಡಿ.

**ಶ್ರಿ ರಮೇಶ್ ಕುಮಾರ್:–** ಇರಲಿ ಬಿಡಿ, ಹಣೆಬರಹ ಇದ್ದ ಹಾಗೆ ಆಗುತ್ತದೆ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಹಣೆಬರಹ ಅಲ್ಲ, ಮೊದಲಿಗೆ ರಾಜಿನಾಮೆಯನ್ನು ಕೊಡಿಸುವುದಕ್ಕೆ ಹೇಳಿ. ಅದನ್ನು ಬಿಟ್ಟು ಸರ್ಕಾರವನ್ನು defend ಮಾಡಿಕೊಂಡು ರಾಮಕೃಷ್ಣ ಹೆಗಡೆಯವರಂತಹ ಹಿರಿಯರ ಕಥೆಗಳನ್ನು ಹೇಳುತ್ತೀರಿ, ಇಲ್ಲಿ ಕಥೆ ಹೇಳಿಕೊಂಡು ಕುಳಿತುಕೊಂಡರೆ ಆಗುವುದಿಲ್ಲ. ನೇರವಾಗಿ ಜಾರ್ಜ್ ಅವರ ರಾಜಿನಾಮೆ ಕೊಡಿಸುತ್ತೀರೋ ಇಲ್ಲವೋ ಎನ್ನುವುದನ್ನು ಹೇಳಿ. ಅವರ ಮೇಲೆ criminal case ಹಾಕಿ arrest ಮಾಡುತ್ತೀರೋ ಇಲ್ಲವೋ ಎನ್ನುವುದನ್ನು ಹೇಳಿ. ಇದನ್ನು ಸಿಬಿಐ ತನಿಖೆಗೆ ಕೊಡುತ್ತೀರೋ ಇಲ್ಲವೋ ಹೇಳಿ, ಹಾಗೆಯೇ ಸದನದಲ್ಲಿ ಎಲ್ಲರಿಗೂ ಈ ಬಗ್ಗೆ ಮಾತನಾಡಲು ಅವಕಾಶ ಕೊಡಿ. ನಿಮ್ಮ ಮೌಲ್ಯದ ಮಾತಿನ ಉತ್ತರದಲ್ಲಿ ಖಂಡಿತ ಎಲ್ಲಿಯೂ ಮೌಲ್ಯಗಳನ್ನು ಉಳಿಸುವ ಪ್ರಯತ್ನ ನಿಮ್ಮಿಂದ ಆಗಲಿಲ್ಲ. ಗಣಪತಿಯ ಆತ್ಮಹತ್ಯೆ ಅಲ್ಲ, ಇದು ಕೊಲೆ, ದಯಮಾಡಿ ಇವರನ್ನು defend ಮಾಡಿಕೊಳ್ಳುವುದಕ್ಕೆ ಹೋಗಬೇಡಿ.

**ಶ್ರೀ ರಮೇಶ್ ಕುಮಾರ್:–** ನನ್ನ ಮಾತುಗಳನ್ನು ಮುಂದುವರೆಸಬೇಕಾ ಅಥವಾ ನಿಲ್ಲಿಸಬೇಕಾ

**ಶ್ರೀ ಎಂ.ಕೆ. ಪ್ರಾಣೇಶ್:–** ತಾವು ಮಂತ್ರಿ ಆದ ತಕ್ಷಣ ಆಡಿದ ಮಾತುಗಳನ್ನು ನೆನೆಸಿಕೊಳ್ಳಿ. ನಾನು ಅಧಿಕಾರದಲ್ಲಿದ್ದಾಗಲೂ ನನ್ನ ನಿರ್ಧಾರಗಳು ಒಂದೇ, ಅಧಿಕಾರ ಇಲ್ಲದಿದ್ದರೂ ಸಹ ನನ್ನ ನಿರ್ಧಾರಗಳು ಒಂದೇ ಎಂದು ಹೇಳಿದ್ದೀರಿ. ಆದ್ದರಿಂದ ಇದನ್ನು ಬದಲಾವಣೆ ಮಾಡಬೇಡಿ. ನಿಮ್ಮ ಮೇಲೆ ನಾವು ಬಹಳ ನಿರೀಕ್ಷೆಯನ್ನು ಇಟ್ಟುಕೊಂಡಿದ್ದೇವೆ.

**ಶ್ರೀ ಎಂ.ಪಿ.ಸುನೀಲ್ ಸುಬ್ರಹ್ಮಣಿ:–** ಡಿ.ಕೆ.ರವಿ ಅವರ ವಿಚಾರದಲ್ಲಿ ಅವರ ಹೆಂಡತಿಯಾಗಲಿ, ಅವರ ಸಂಬಂಧಿಕರಾಗಲಿ ದೂರನ್ನು ನೀಡಿರುವುದಿಲ್ಲ. ಅದು ಆತ್ಮಹತ್ಯೆ. ಗಣಪತಿಯವರ ವಿಚಾರದಲ್ಲಿ ಸ್ವತಃ ಅವರ ಹೆಂಡತಿ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದಾರೆ. ಅವರ ಮಗ ಹೇಳಿಕೆ ನೀಡುತ್ತಾರೆ. ಅದು ಯಾವುದು ಲೆಕ್ಕಕ್ಕೆ ಇಲ್ಲ. ಪಾಪ ರಮೇಶ್ ಕುಮಾರ್ ಅವರು ಮಂತ್ರಿ ಆಗಬೇಕಾಗಿರುವ ಸಂದರ್ಭದಲ್ಲಿ ಕೊಲೆಯ ಕೇಸಿನಲ್ಲಿ ಅವರ ಹೆಸರನ್ನು ಸೇರಿಸಿದ್ದರು. ಯಾರು ಹೇಳದೇ ಸೇರಿಸಿದರು. ಇಲ್ಲಿ ಇಂತಹವರೆ ಎಂದು ಹೇಳುತ್ತಿದ್ದರೂ ಸಹ ಅವರ ಹೆಸರನ್ನು ಸೇರಿಸಿರುವುದಿಲ್ಲ. ನಾವು ಜಾರ್ಜ್ ಅವರ ಮೇಲೆ ಆರೋಪವನ್ನು ಮಾಡಿರುವುದಿಲ್ಲ. ಟಿವಿ ಮಾಧ್ಯಮಗಳಲ್ಲಿ ಬಂದಿರುವುದನ್ನು ನಾವು ಪ್ರಸ್ತಾಪ ಮಾಡುತ್ತಿದ್ದೇವೆ. ಟಿವಿ ಮಾಧ್ಯಮದಲ್ಲಿ ನೇರವಾಗಿ ಜಾರ್ಜ್ ಅವರ ಹೆಸರನ್ನು ಹೇಳಿದ್ದಾರೆ.

**ಶ್ರೀ ರಮೇಶ್ ಕುಮಾರ್:–** ಟಿವಿ ಮಾಧ್ಯಮದವರು, ಪತ್ರಿಕೆಗಳವರು ಸುಪ್ರೀಮ್ ಕೋರ್ಟ್ ಅಲ್ಲ, Sessions Court ಅಲ್ಲ. ನಾವು ಮಾಧ್ಯಮದವರನ್ನು ಗೌರವಿಸುತ್ತೇವೆ.

**(ಗೊಂದಲ)**

**ಶ್ರೀ ಕೆ.ಎಸ್.ಈಶ್ವರಪ್ಪ:–** ಟಿವಿ ಮಾಧ್ಯಮದವರು, ಪತ್ರಿಕೆಗಳವರ ವಿಚಾರ ಬಿಡಿ. ಸುಪ್ರೀಮ್ ಕೋರ್ಟ್ ಏನು ಹೇಳಿದೆ ಎಂದರೆ ಆತ್ಮಹತ್ಯೆ ಮಾಡಿಕೊಂಡ ಸಂದರ್ಭದಲ್ಲಿ death note ಇರಬಹುದು ಅಥವಾ ಅವರ ಹೇಳಿಕೆ ಇರಬಹುದು, ಅದು ಸಾಕ್ಷಿಯಾಗುತ್ತದೆ ಎಂದು ಸುಪ್ರೀಮ್ ಕೋರ್ಟ್ ಹೇಳಿದೆ. ಕಾನೂನು ತಜ್ಞರು ಹೀಗೆ ಹೇಳಿದರೆ ಹೇಗೆ?

**ಡಾ॥ಜಿ.ಪರಮೇಶ್ವರ್:–** ಚರ್ಚೆ ಮಾಡುವ ಸಂದರ್ಭದಲ್ಲಿ ಇದನ್ನೆಲ್ಲ ಹೇಳಲಿ. ಆದರೆ preliminary ಆಗಿ adjournment motion ಗೆ ಆಗಲಿಲ್ಲ. ಅದನ್ನು ತಾವು reject ಮಾಡಬೇಕೆಂದು ಮಾನ್ಯ ಸಚಿವರು ಕೇಳುತ್ತಿದ್ದಾರೆ. It reserves the merit of the case. Shall we go with the merit of the case or not?

**(ಗೊಂದಲ)**

**ಶ್ರೀ ವಿ.ಸೋಮಣ್ಣ:–** ಮಾನ್ಯ ಸಭಾಪತಿಗಳೆ, ಮಾನ್ಯ ರಮೇಶ್ ಕುಮಾರ್‌ರವರು ಒಂದು ಒಳ್ಳೆಯ ಮಾತನ್ನು ಹೇಳಿದ್ದಾರೆ. ಕಲ್ಲಪ್ಪ ಹಂಡಿಬಾಗರವರು ಏತಕ್ಕೆ ಆತ್ಮಹತ್ಯೆ ಮಾಡಿಕೊಂಡರು? ಮಾಧ್ಯಮದಲ್ಲಿ ಬಂದಿರುವ ವಿಚಾರವನ್ನು prima facie ಮಾಡಿಕೊಂಡು ಪೊಲೀಸ್‌ನವರು ಅವರ ಮೇಲೆ ಒಂದು ಕೇಸ್ ಹಾಕಿ FIR register ಮಾಡಿದ್ದಾರೆ. ನಡೆದಿರುವ ಘಟನೆಯನ್ನು ಸದನದ ಗಮನಕ್ಕೆ ತರುತ್ತಿದ್ದೇನೆ. ಮಾನ್ಯ ರಮೇಶ್ ಕುಮಾರ್‌ರವರು ತಾವು ನಡೆದು ಬಂದಿರುವ ದಾರಿ ಪ್ರಕಾರ ವಾಸ್ತವಾಂಶವನ್ನು ಇಲ್ಲಿ ಹೇಳಿದ್ದಾರೆ. ಮಾನ್ಯ ಗೃಹ ಸಚಿವರು ಇಲ್ಲಿ ಇದ್ದಾರೆ. ಪತ್ರಿಕೆಯಲ್ಲಿ, ಮಾಧ್ಯಮದಲ್ಲಿ ಬಂದಿರುವ ವಿಚಾರವನ್ನು ನಾವು ನೂರಕ್ಕೆ ನೂರು ಸತ್ಯವೆಂದು ತೆಗೆದುಕೊಳ್ಳುವುದಿಲ್ಲ ಎನ್ನುವುದಾದ್ದರೆ, ತಾವು ಏಕೆ ಕಲ್ಲಪ್ಪ ಹಂಡಿಬಾಗ್‌ರವರ ಮೇಲೆ ಈಖಿಖ ಡಿಜಝಣಜಡಿ ಮಾಡಿ, ಅವರು ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಳ್ಳಲು ಕಾರಣಕರ್ತರು ಯಾರು? ಈ ಸರ್ಕಾರ ಒಬ್ಬರಿಗೆ ಒಂದು ರೀತಿ, ಇನ್ನೊಬ್ಬರಿಗೆ ಇನ್ನೊಂದು ರೀತಿ ಏಕೆ ಮಾಡುತ್ತಿದ್ದೆ? ಮಾನ್ಯ ಗಣಪತಿಯವರು ನನ್ನ ಸಾವಿಗೆ ಇಂತವರು ಕಾರಣ ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ಇವತ್ತು ಇಂದಿರಾ ಹೌಸಿಂಗ್ ಮನೆಯಲ್ಲಿ ಇರುವ ಕುಟುಂಬವನ್ನು ಬಿಟ್ಟು ಕಲ್ಲಪ್ಪರವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇದರ ಹೊಣೆಯನ್ನು ಯಾರು ತೆಗೆದುಕೊಳ್ಳುತ್ತಾರೆ? ಮಾನ್ಯ ರಮೇಶ್‌ಕುಮಾರ್‌ರವರನ್ನು ಮತ್ತು ಮಾನ್ಯ ಗೃಹ ಸಚಿವರನ್ನು ನಾನು ಕೇಳುವುದು, ಕೇವಲ ಮೂರು ದಿನಗಳಲ್ಲಿ ಒಬ್ಬ ಅಧಿಕಾರಿ ಮೇಲೆ ಕೇವಲ ಮಾಧ್ಯಮದಲ್ಲಿರುವ ಬಂದಿರುವ ವಿಚಾರದ ಮೇಲೆ FIR register ಮಾಡಿ ತಕ್ಷಣ arrest ಮಾಡಿ ಎಂದು ಹೇಳುತ್ತೀರಿ, ಅವರು ತಲೆಮರಿಸಿಕೊಂಡು ಯಾವುದೊ

ಮನೆಯಲ್ಲಿ ಹೋಗಿ ನೇಣು ಹಾಕಿಕೊಂಡಿದ್ದಾರೆ. ಇನ್ನೊಬ್ಬ ಗಣಪತಿ ಎನ್ನುವ ಅಧಿಕಾರಿ ನನಗೆ ಇಂತವರು ತೊಂದರೆ ಕೊಟ್ಟಿದ್ದಾರೆ, ಮಾನಸಿಕ ತೇಜೋವಧೆ ಮಾಡಿದ್ದಾರೆ, ನನ್ನ ಸಾವಿಗೆ ಇಂತವರು ಕಾರಣ ಎಂದು ಮಾದ್ಯಮದವರ ಮುಂದೆ ತಾವೇ ವಿವರವಾಗಿ ಹೇಳಿ, ಡೆತ್ ನೋಟ್ ಬರೆದಿಟ್ಟು ಎರಡು–ಮೂರು ದಿವಸಗಳಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಒಂದು ಕಣ್ಣಿಗೆ ಸುಣ್ಣ ಇನ್ನೊಂದು ಕಣ್ಣಿಗೆ ಬೆಣ್ಣೆ ಇದು ಯಾವ ನ್ಯಾಯ? ರಷೀದ್‌ರವರ ಕೇಸ್‌ನಲ್ಲಿ ದೂರು ಬಂದ ತಕ್ಷಣ ತತ್ವನಿಷ್ಠ ವ್ಯಕ್ತಿಯಾಗಿದ್ದ ಶ್ರೀ ಆರ್.ಎಲ್.ಜಾಲಪ್ಪನವರು ರಾಜೀನಾಮೆಯನ್ನು ಕೊಟ್ಟುಬಿಟ್ಟರು. ಅವರು ನಮ್ಮ ಪಕ್ಷದ ಸಭೆಯಲ್ಲಿ ಮಾನ್ಯ ಸಿದ್ದರಾಮಯ್ಯನವರು ಮಾನ್ಯ ಜಾಲಪ್ಪನವರು ರಾಜೀನಾಮೆ ಕೊಡಬೇಕು ಎಂದು ಹೇಳಿದ್ದರು. ಆ ನೈತಿಕತೆ ಎಲ್ಲಿ ಇದೆ ಇವತ್ತು? ಮೊನ್ನೆ ಹೈದ್ರಾಬಾದ್‌ನಲ್ಲಿ ರೋಹಿತ್ ವೇಮುಲಾ ಎನ್ನುವ ವಿದ್ಯಾರ್ಥಿ ಮುಖಂಡ ಸತ್ತಾಗ ನಮ್ಮ ರಾಜ್ಯದ ಮುಖ್ಯಮಂತ್ರಿಗಳಾದ ಮಾನ್ಯ ಸಿದ್ದರಾಮಯ್ಯನವರು ಕೇಂದ್ರ ಗೃಹ ಸಚಿವರ ಬಗ್ಗೆ ಯಾವ ರೀತಿ ಮಾಡಿದರು ಎನ್ನುವುದು ಎಲ್ಲರಿಗೂ ಗೊತ್ತು. ನೀತಿಪಾಠ ಹೇಳುವಾಗ ಸರಿಯಾಗಿತ್ತದೆ ಅಷ್ಟೆ. ನಾಲ್ಕು ದಿನ ಒಂದು ಕಡೆ, ಇನ್ನು ನಾಲ್ಕು ದಿನ ಇನ್ನೊಂದು ಕಡೆ ಎಂದು ಮಾಡುವುದು ಸರಿಯೇ? ಇದರ ವ್ಯವಸ್ಥೆ ಏನು?ಈ ರೀತಿಯಾದರೆ ಈ ರಾಜ್ಯದ ಜನರ ಭಾವನೆಗಳನ್ನು ಕೇಳುವವರು ಯಾರು? ಒಬ್ಬ ಅಧಿಕಾರಿ ಸತ್ತರೆ ಎಫ್‌ಐಆರ್ ಹಾಕುತ್ತಾರೆ, ಇನ್ನೊಬ್ಬ ಅಧಿಕಾರಿ ದೂರು ಕೊಡಲು ಹೋದರೆ ದೂರು ತೆಗೆದುಕೊಳ್ಳುವುದಿಲ್ಲ. ಈ ರೀತಿಯ ಗೊಂದಲ ಆಗಬಾರದು. Prima facie ನೋಡಿದಾಗ ಆತ್ಮಹತ್ಯೆ ಮಾಡಿಕೊಂಡಿರುವ ಗಣಪತಿಯವರೆ ಹೇಳಿರುವುದರಿಂದ, ಮಾನ್ಯ ಗೃಹ ಸಚಿವರಿಗೆ ಒಂದು ಇತಿಹಾಸವಿದೆ, ಅವರಲ್ಲಿ ನಾನು ಮನವಿ ಮಾಡಿಕೊಳ್ಳುವುದು..

**ಶ್ರೀ ಎಚ್.ಎಂ.ರೇವಣ್ಣ:–** ಏನು ಮಾತನಾಡುತ್ತಿದ್ದಾರೆ ಇವರು?

**(ಗೊಂದಲ)**

ಶ್ರೀ ವಿ.ಸೋಮಣ್ಣ:– ಕಲ್ಲಪ್ಪನವರ ಮೇಲೆ ಎಫ್‌ಐಆರ್ ಏಕೆ ಮಾಡಲಾಯಿತು? ಎಫ್‌ಐಆರ್ ಮಾಡಿರುವ ಅಧಿಕಾರಿಯನ್ನು dismiss ಮಾಡಿ. ಅವರ ಮೇಲೆಯೇ ಎಫ್‌ಐಆರ್ ಮಾಡಿ ಜೈಲಿಗೆ ಕಳುಹಿಸಿ. ಒಬ್ಬೊಬ್ಬ ಅಧಿಕಾರಿ ಒಂದೊಂದು ರೀತಿ ಮಾಡಿ ರಾಜ್ಯದ ಅಧಿಕಾರಿಗಳ ಆತ್ಮಸ್ಥೈರ್ಯ ಕುಗ್ಗುವಂತಹ ಕೆಲಸವನ್ನು ಸರ್ಕಾರ ಮಾಡುತ್ತಿರುವುದಕ್ಕೆ ನಮ್ಮ ಧಿಕ್ಕಾರವಿದೆ. ಕಲ್ಲಪ್ಪನವರ ಕುಟುಂಬದವರು ಜೀವನ ಮಾಡಬೇಕು ಎನ್ನುವುದಾದ್ದರೆ, ರಾಜ್ಯದಲ್ಲಿ ಅಧಿಕಾರಿಗಳು ಸುಸೂತ್ರವಾಗಿ ಕೆಲಸ ಮಾಡಬೇಕು ಎನ್ನುವುದಾದ್ದರೆ ನಾವು ತಂದಿರುವ ನಿಲುವಳಿ ಸೂಚನೆಗೆ ತಾವು ಅನುಮತಿ ಕೊಡಬೇಕು. ಯಾರ‍್ಯಾರ ಹೆಸರುಗಳನ್ನು ಹೇಳಿದ್ದಾರೆ, ಅವರ ಮೇಲೆ ಎಫ್‌ಐಆರ್ ರಿಜಿಸ್ಟರ್ ಮಾಡಿ ಕಠಿಣ ಕ್ರಮಕ್ಕೆ ಒಳಪಡಿಸಬೇಕೆಂದು ಈ ಮೂಲಕ ಸರ್ಕಾರವನ್ನು ನಾನು ಆಗ್ರಹಪಡಿಸುತ್ತೇನೆ.

**ಶ್ರೀ ರಿಜ್ವಾನ್ ಅರ್ಷದ್:–** ಮಾನ್ಯ ಸಭಾಪತಿಗಳೆ, ಸುಪ್ರಿಮ್ ಕೋರ್ಟ್...

**ಸಭಾಪತಿಯವರು:–** ಈ ರೀತಿಯ ಚರ್ಚೆಯಲ್ಲಿ ಸರ್ಕಾರದ ಪರವಾಗಿ ಸರ್ಕಾರ ಉತ್ತರ ಕೊಡುತ್ತದೆ ಅಂದರೆ ಸಚಿವರು ಉತ್ತರ ಕೊಡುತ್ತಾರೆ. ಬೇರೆಯವರು ಸರ್ಕಾರಕ್ಕೆ ಮಾಹಿತಿ ಕೇಳಬಹುದೆ ಹೊರತು defence ಇಲ್ಲ. ಸಚಿವರು competent ಇದ್ದಾರೆ, ಅವರು ಮಾತನಾಡುತ್ತಾರೆ. ವಿರೋಧ ಪಕ್ಷದವರಿಗೆ ಮಾತನಾಡಲು ಅಧಿಕಾರವಿದೆ ಅವರು ಮಾತನಾಡಬಹುದು. ಸರ್ಕಾರದ ಪರವಾಗಿ ವಿರೋಧ ಪಕ್ಷದವರು ಮಾತನಾಡಿದರೂ ನಾನು ಒಪ್ಪುವುದಿಲ್ಲ. ಸಚಿವರಿಗೆ ಮಾತ್ರ ಮಾತನಾಡಲು ಅಧಿಕಾರವಿರುವುದು.

**ಶ್ರೀ ರಾಮಚಂದ್ರಗೌಡ:–** ಮಾನ್ಯ ಸಭಾಪತಿಗಳೆ, Ramesh Kumar is a very good Lawyer for a bad case. ಸರ್ಕಾರದಲ್ಲಿ there is abundant indiscipline. That is the most reason for all things. There is no discipline in the Government. ಅವರು ಮಾನ್ಯ ರಾಮಕೃಷ್ಣ ಹೆಗಡೆಯವರ ವಿಚಾರವನ್ನು ಮಾತನಾಡಿದರು. ರಾಮಕೃಷ್ಣ ಹೆಗಡೆಯವರ ಕಾಲದಲ್ಲಿ ರೇವುಜಿತು ವಿಚಾರ ಬಂದಾಗ, ಟೆಲಿಫೋನ್ ಕದ್ದಾಲಿಕೆ ವಿಚಾರ

ಬಂದಾಗ. ಕ್ಷಣಮಾತ್ರದಲ್ಲಿ ಮಾನ್ಯ ರಾಮಕೃಷ್ಣ ಹೆಗಡೆಯವರು ರಾಜೀನಾಮೆಯನ್ನು ಕೊಡಲಿಲ್ಲವೆ? ಮಾನ್ಯ ಜಾಲಪ್ಪನವರ ಮೇಲೆ ದೂರು ಬಂದಾಗ ಇದೇ ಮುಖ್ಯಮಂತ್ರಿಗಳು ಅವತ್ತು ಮಾನ್ಯ ಜಾಲಪ್ಪನವರು ರಾಜೀನಾಮೆ ಕೊಡಬೇಕು ಎಂದು ರಾಜೀನಾಮೆಯನ್ನು ಕೊಡಿಸಿದರು. ಮೇಲ್ನೋಟಕ್ಕೆ ಕಂಡು ಬಂದಿದೆ, ನಾವು ಯಾರು ಒತ್ತಾಯ ಮಾಡುವ ಅವಶ್ಯಕತೆ ಇರಲಿಲ್ಲ, ಮಾನ್ಯ ಮುಖ್ಯಮಂತ್ರಿಗಳು ಹೇಳುವ ಅವಶ್ಯಕತೆಯು ಇರಲಿಲ್ಲ. ನಿಜವಾಗಿಯು ಮಾನ್ಯ ಜಾರ್ಜ್‌ನವರು ಶೀಲವಂತರು, ಅವರ ಬಗ್ಗೆ ನನಗೆ ಗೌರವವಿದೆ. ಆಪಾದನೆ ಬಂದ ತಕ್ಷಣ ರಾಜೀನಾಮೆಯನ್ನು ಕೊಟ್ಟಿದರೆ ಅವರ ಗೌರವ ಇನ್ನಷ್ಟು ಜಾಸ್ತಿಯಾಗಿರುತ್ತಿತ್ತು. ಅದರ ಬಗ್ಗೆ ಚರ್ಚೆ, ಪರೀಕ್ಷೆ ನಡೆಯುತ್ತಿತ್ತು. ಇವತ್ತು ಮಾನ್ಯ ಜಿಗಜಿಣಗಿಯವರ ಸನ್ಮಾನ್ಯ ಕಾರ್ಯಕ್ರಮಕ್ಕೆ ಹೋಗಿ ಬರುವುದರಲ್ಲಿ ನಾನು ಸ್ವಲ್ಪ ತಡವಾಗಿ ಸದನಕ್ಕೆ ಬಂದೆ. ನಾನು ಬರುವುದರೊಳಗೆ ಅವರು ರಾಜೀನಾಮೆ ಕೊಟ್ಟಿರುತ್ತಾರೆ, ಒಳ್ಳೆಯ ಸುದ್ದಿ ಬರುತ್ತದೆ ಅಂದುಕೊಂಡು ನಾನು ಬಂದೆ. ಆದರೆ ರಾಜೀನಾಮೆ ಕೊಡುವುದಕ್ಕೆ ಮೀನಾಮೇಷ ಎಣಿಸುತ್ತಿದ್ದಾರೆ. I am always a short speaker. ನಾನು ಹೆಚ್ಚಿನ ಸಮಯವನ್ನು ತೆಗೆದುಕೊಳ್ಳುವುದಿಲ್ಲ, ಮುಗಿಸುತ್ತೇನೆ. ಇವತ್ತು ಒಬ್ಬ ಪೊಲೀಸ್ ಅಧಿಕಾರಿ ಮಂತ್ರಿಗಳ ಕಿರುಕಳು ತಾಳಲಾರದೆ ಆತ್ಮಹತ್ಯೆ ಮಾಡಿಕೊಂಡರು, ಇನ್ನೊಬ್ಬ ಪೊಲೀಸ್ ಅಧಿಕಾರಿ ಮೇಲೆ ಎಫ್‌ಐಆರ್ ಹಾಕಿದರು ಎಂದು ಹೇಳಿ ಅವರು ಆತ್ಮಹತ್ಯೆ ಮಾಡಿಕೊಂಡರು. ಒಬ್ಬರು ಐಎಎಸ್ ಅಧಿಕಾರಿ ಜಿಲ್ಲಾಧಿಕಾರಿಯಾಗಿರುವವರು ಒಬ್ಬ ಕಾರ್ಯಕರ್ತನ ಮೇಲೆ ದೂರು ಕೊಟ್ಟರೆ ಆ ಕಾರ್ಯಕರ್ತನನ್ನು ಮುಚ್ಚಿಡುವಂತಹ ಪ್ರಯತ್ನ ನಡೆಯುತ್ತಿದೆ ಎನ್ನುವ ಆರೋಪ ಇದೆ. Is it not indiscipline in the Government? Our responsibility is to bring discipline in the Government. We both should work together. Instead of working together, ಸುಮ್ಮನೆ ನಮ್ಮ ಮೇಲೆ ನೀವು, ನಿಮ್ಮ ಮೇಲೆ ನಾವು ಹೇಳುತ್ತಾ ಕೂಡುವುದು, ನಿಮ್ಮ ಸರ್ಕಾರ ಇದ್ದಾಗ ಈ ರೀತಿ ಮಾಡಿದ್ದೀರಿ, ಈ ಸರ್ಕಾರ ಬಂದಾಗ ಈ ರೀತಿ ಮಾಡುತ್ತಿದೆ, "ಆ ಸಾರಿ ಕಾಮಣ್ಣ ಹಾಗೆ ಆಯಿತು, ಈ ಸಾರಿ ಕಾಮಣ್ಣ ಹೀಗೆ ಆಯಿತು, ಕೊಡದೆ ಇದ್ದರೆ ನಾವು ಬಿಡುವವರಲ್ಲ" ಎಂದು ಪಾಠ ಮಾಡುವಾಗ ಬಡೆದುಕೊಳ್ಳುತ್ತಾ ಇದ್ದೇವು. ನಾವು ಹಳೆಯದನ್ನು ಹೇಳಿ ಏನು ಪ್ರಯೋಜನ ಇಲ್ಲ. ವಾಸ್ತವಿಕವಾಗಿ ಈಗ ಏನು ನಡೆಯುತ್ತಿದೆ, ಕಳೆದ ಒಂದುವರೆ ವರ್ಷದಲ್ಲಿ ಸರ್ಕಾರದಲ್ಲಿ ಏನು ನಡೆಯುತ್ತಿದೆ ಎನ್ನುವುದನ್ನಾದರೂ ಚರ್ಚೆ ಮಾಡಬೇಕು, ಅದರ ಅವಶ್ಯಕತೆ ಇದೆ ಎನ್ನುವ ವಿಚಾರವನ್ನು ನಮ್ಮ ನಾಯಕರು ಸದನದ ಮುಂದೆ ಇಟ್ಟಿದ್ದಾರೆ. ಚರ್ಚೆಯಾಗಬೇಕು ಅದರಿಂದ ಸರ್ಕಾರದ ಆಡಳಿತದ ಅಧಿಕಾರಿಗಳಿಗೆ ಸ್ವಲ್ಪ ಎಚ್ಚರಿಕೆ ಬರುತ್ತದೆ. ನಾನು ಅಧಿಕಾರಿಗಳ ಮೇಲೆ ಗೂಬೆ ಕೂಡಿಸುತ್ತಿಲ್ಲ. ನಾನು ಕಾರ್ಪೋರೆಟರ್ ಆಗಿದ್ದಾಗ, ಒಂದು ದಿನವು ಅಧಿಕಾರಿಗಳನ್ನು ಬೈಯಲಿಲ್ಲ. ಸರ್ಕಾರ ನಡೆಸುತ್ತಿರುವವರನ್ನು ಬೈಯುತ್ತಾ ಇದ್ದೆ. ತಪ್ಪು ಮಾಡುತ್ತಿರುವವರು ಅಧಿಕಾರಿ ಎಂದು ಗೊತ್ತು ನನಗೆ. ಅವರನ್ನು ಬೈಯ್ದರೆ ಏನು ಪ್ರಯೋಜನವಿಲ್ಲ. ಏಕೆಂದರೆ ಅವರಿಂದ ತಪ್ಪು ಮಾಡಿಸುವವರು ಚುನಾಯಿತ ಪ್ರತಿನಿಧಿಗಳು. ಹೀಗಾಗಬಾರದು ಎನ್ನುವ ದೃಷ್ಟಿಯಿಂದ... ಅವರು ತಪ್ಪು ಮಾಡಬೇಕೆಂದು ಇಷ್ಟಪಡುವುದಿಲ್ಲ, ಅವರ ಮೇಲೆ ಒತ್ತಡ ಬಂದಾಗ ತಪ್ಪು ಮಾಡಬೇಕಾಗುತ್ತದೆ. ಏಕೆಂದರೆ ಅವರು ಬದುಕಬೇಕು. They also exist. ದೇವರು ಎಲ್ಲರಿಗೂ ಹೊಟ್ಟೆ ಕೊಟ್ಟುಬಿಟ್ಟ. ಹೊಟ್ಟೆ ಕೊಡದೆ ಹೋಗಿದ್ದರೆ ಸಮಸ್ಯೆ ಇರಲಿಲ್ಲ. ಆ ಹೊಟ್ಟೆ ಕೊಟ್ಟಿದಕ್ಕಾಗಿ ಈ ಎಲ್ಲ ಸಮಸ್ಯೆಗಳು. ಹೀಗಾಗಿ ಅವರು ಬದುಕಬೇಕು, ನಾವು ಬದುಕಬೇಕು. ಇವತ್ತು ಚರ್ಚೆ ಮಾಡಬೇಕು ಎಂದು ತಂದಿರುವ ವಿಷಯದ ಬಗ್ಗೆ ನನ್ನ ಹತ್ತಿರ ಸಾಕಷ್ಟು ಮಾಹಿತಿ ಇದೆ. ಯಾರ‍್ಯಾರು ಏನೇನು ಹೇಳಿಕೆ ಕೊಟ್ಟಿದ್ದಾರೆ ಎನ್ನುವ ಎಲ್ಲ ಮಾಹಿತಿ ನನ್ನ ಹತ್ತಿರವಿದೆ. ಆದರೆ ಈ ಹೇಳಿಕೆಗಳ ಮೇಲೆ ಚರ್ಚೆ ಮಾಡುವುದಲ್ಲ. ನಾವು–ನೀವು ಏನು ತೀರ್ಮಾನ ಮಾಡುತ್ತೇವೆ ಅದರ ಮೇಲೆ ಚರ್ಚೆಯಾಗಬೇಕು. ಆ ತೀರ್ಮಾನ ಮಾಡುವ ಸಲುವಾಗಿ ಚರ್ಚೆಯಾಗಲಿ ಎಂದು ನಮ್ಮ ನಾಯಕರು ವಿಷಯವನ್ನು ತಂದಿದ್ದಾರೆ. ಬಹಳ ಯೋಗ್ಯವಾಗಿದೆ, ತೆಗೆದುಕೊಳ್ಳುವುದು ಉತ್ತಮ ಎಂದು ನನ್ನಗನ್ನಿಸುತ್ತದೆ. ಮಾನ್ಯ ಸಭಾಪತಿಗಳು ಇದಕ್ಕೆ ಅವಕಾಶ ಮಾಡಿಕೊಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಗಳೆ, ಗಣಪತಿಯವರ ಸಾವಿನ ಬಗ್ಗೆ ಪಕ್ಷಾತೀತವಾಗಿ ಇಲ್ಲಿ ಎಲ್ಲರಲ್ಲಿಯು ನೋವು, ಆತಂಕವಿದೆ ಎನ್ನುವುದನ್ನು ನಾನು ಒಪ್ಪುತ್ತೇನೆ. ಯಾವುದೊ ಒಂದು ದೊಡ್ಡ ಕ್ರಮ ತೆಗೆದುಕೊಳ್ಳಿ ಎಂದು ನಾವು ಇಲ್ಲಿ ಹೇಳುತ್ತಿಲ್ಲ. ಗಣಪತಿಯವರ ಸಾವು ತೀರಾ ವಿಭಿನ್ನ. ಮಾನ್ಯ ರಮೇಶ್‌ಕುಮಾರ್ ಅದ್ಭುತವಾಗಿ ಮಾತನಾಡುತ್ತಾರೆ. ಅವರ ವಾಕ್ಚಳಿಗೆ ನನ್ನ ನಮಸ್ಕಾರಗಳು. ಆದರೆ ಸಾವಿಗೂ ಮುನ್ನ ಗಣಪತಿಯವರು ಹೇಳಿರುವ ಹೇಳಿಕೆಯನ್ನು ಸರ್ಕಾರ ಮತ್ತು ನಾವು ಗಂಭೀರವಾಗಿ ತೆಗೆದುಕೊಳ್ಳಬೇಕಾಗುತ್ತದೆ. ಇವರ ಸಾವಿನ ಬಗ್ಗೆ ಚರ್ಚೆ ಮಾಡಲು ಅವಕಾಶವನ್ನು ಕೊಡಿ ಎಂದು ಕೇಳುತ್ತಿದ್ದೆವೆ. ಗಣಪತಿಯವರ ಸಾವಿನ ಬಗ್ಗೆ ಸರ್ಕಾರಕ್ಕೂ ಆತಂಕವಿದೆ. ವೀರನಾಡು ಮಡಿಕೇರಿಯಿಂದ ಬಂದಿರುವಂತಹ ವ್ಯಕ್ತಿ ಅವರು. ಸುಖಾಸುಮ್ಮನೆ ಆತ ಸಾವಿಗೆ ಶರಣಾಗಿಲ್ಲ. ಸಾವಿಗಿಂತ ಮುಂಚೆ ಅತ್ಯಂತ ಗಟ್ಟಿಯಾದ ಹೇಳಿಕೆಯನ್ನು ಮಾಡಿದ್ದಾನೆ. ಆ ಹೇಳಿಕೆ ಮೇಲೆ ಎಫ್ಐಆರ್ ಆಗಿ ವಿಚಾರಣೆ ಆರಂಭವಾಗಿದೆ ಎಂದು ಸರ್ಕಾರವೆ ಹೇಳಿದೆ. ಯಾರನ್ನು ಅವರು ದೂರಿದ್ದರೊ ಅವರ ಮೇಲೆ ಎಫ್ಐಆರ್ ಆಗಲಿಲ್ಲ, ವಿಚಾರಣೆಯು ಆಗಲಿಲ್ಲ. ಮಾನ್ಯ ರಾಮಚಂದ್ರಗೌಡರು ಒಳ್ಳೆಯ ಮಾತನ್ನು ಹೇಳಿದ್ದಾರೆ. ಜಾರ್ಜ್‌ರವರ ಮೇಲ ಎಲ್ಲರಿಗೂ ಗೌರವವಿದೆ. ಎಫ್ಐಆರ್ ಹಾಕಿ, ವಿಚಾರಣೆ ಮಾಡಿ, ಮತ್ತೆ ಅವರನ್ನು ಸಚಿವರನ್ನಾಗಿ ಮಾಡಿ ನಾವು ಬೇಡ ಎನ್ನುವುದಿಲ್ಲ. ಇವತ್ತು ಇಡೀ ರಾಜ್ಯದ ಜನ ಚಿಂತಿತರಾಗಿದ್ದಾರೆ. ಈ ಕುರಿತು ಗಂಭೀರವಾದ ಚರ್ಚೆ ಈ ಸದನದಲ್ಲಿ ಆಗದೆ ಹೋದರೆ ಜನರು ನಮ್ಮ ಬಗ್ಗೆ ಮತ್ತು ನಿಮ್ಮ ಬಗ್ಗೆ ತಪ್ಪು ತಿಳಿಯುತ್ತಾರೆ. ಜನರು ನಿಮ್ಮನ್ನು ಮತ್ತು ನಮ್ಮೆಲ್ಲರನ್ನೂ ತಪ್ಪು ತಿಳಿಯುತ್ತಾರೆ. ಹಾಗಾಗಿ ತಾವು ಹೇಳಿದ ಎಲ್ಲಾ ಪ್ರಕರಣಗಳನ್ನು ನಾವು ಒಪ್ಪಿಕೊಳ್ಳುತ್ತೇವೆ. ಆದರೆ ಈ ಗಣಪತಿಯವರ ಪ್ರಕರಣ ಅತ್ಯಂತ ಭಿನ್ನ ಎನ್ನುವುದನ್ನು ತಾವು ಒಪ್ಪಿಕೊಂಡು. ಇದರ ಚರ್ಚೆಗೆ ಆದ್ಯತೆಯ ಮೇರೆಗೆ ಅವಕಾಶ ಮಾಡಿಕೊಡಬೇಕೆಂದು ತಮ್ಮಲ್ಲಿ ನನ್ನ ಮನವಿ ಮತ್ತು ಆಗ್ರಹ.

**ಶ್ರೀ ಬಿ.ಜೆ. ಪುಟ್ಟಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ನೈತಿಕತೆಯ ಬಗ್ಗೆ ಮಾತನಾಡುತ್ತಿರುತ್ತಾರೆ. ಆ ನೈತಿಕತೆ ಎನ್ನತಕ್ಕಂತಹುದು ಈ ಸರ್ಕಾರದಲ್ಲಿ ಇದ್ದಿದ್ದರೆ, ಇವತ್ತು Adjournment Motion ನನ್ನು ನಮ್ಮ ನಾಯಕರು ತರುವಂತಹ ಅವಕಾಶ ಇರಲಿಲ್ಲ. ಅದಕ್ಕೆ ಒಂದು ಉದಾಹರಣೆಯನ್ನು ಕೊಡಬಹುದು. ಡಿ.ಸಿ.ಯವರು ಒಬ್ಬ District Magistrate. ಒಬ್ಬ Magistrate ದೂರು ಕೊಟ್ಟರೆ, ಆ ಮನುಷ್ಯನನ್ನು ಇವತ್ತಿನವರೆಗೆ ಬಂಧಿಸಲಿಲ್ಲ ಅಂದರೆ ಇವರಿಗೆ ನೈತಿಕತೆ ಇದೇಯಾ. ತಾವು ಪತ್ರಿಕೆಯಲ್ಲಿ ನೋಡಿ ಪರಮ ಆತ್ಮನ ವಿರುದ್ಧ ನೀಡದಂತೆ ಸಿ.ಎಂ. ಒತ್ತಡ. ಆಮೇಲೆ ಇನ್ನೊಂದು ಹೇಳುತ್ತಾರೆಂದರೆ ಡಿ.ಸಿ. ಗೆ ಬೆದರಿಕೆ ಹಾಕಿದ ಸಚಿವರ ಮನೆಯ ಮುಂದೆ ಸಂದಾನ. ಅದಕ್ಕೆ ಹೇಳುತ್ತೀರುವುದು ವಿಚಾರಣೆಯಾಗಬೇಕೆಂದು, ಆಗ ಸತ್ಯ ಹೊರಕ್ಕೆ ಬರುತ್ತದೆಂದು. ನೈತಿಕತೆ ಬಗ್ಗೆ ಮಾತನಾಡುತ್ತಿದ್ದೀರಲ್ಲ, ನೈತಿಕತೆ ಇದ್ದಿದ್ದರೆ ಈ ತರಹ ಆಗುತ್ತಿರಲಿಲ್ಲ.

**ಸಭಾಪತಿಯವರು:** ತಾವು ಕುಳಿತುಕೊಳ್ಳಿ, ಸಚಿವರು ಉತ್ತರ ಕೊಡುತ್ತಾರೆ.

**ಗೊಂದಲ**

**ಶ್ರೀ ಬಿ.ಜೆ. ಪುಟ್ಟಸ್ವಾಮಿ:–** ಮಾನ್ಯ ಸಭಾಪತಿಯವರೇ, ತಮ್ಮಲ್ಲಿ ಮನವಿ ಮಾಡುತ್ತೀರುವುದು, ಇದರಲ್ಲಿ ಚರ್ಚೆಯಾಗಬೇಕು. ಈ ರೀತಿ ನಾವು ಮಾಡುತ್ತೀರುವುದು ಅವರ ಮುಖಕ್ಕೆ ಹಿಡಿಯಬೇಕೆಂದು. ಒಬ್ಬ Magistrate ಗೆ ರಕ್ಷಣೆ ಇಲ್ಲವೆಂದರೆ, ಈ ಸರ್ಕಾರದಲ್ಲಿ ಮತ್ಯಾರಿಗೆ ರಕ್ಷಣೆ ಇದೆ? ಅವರು ಏನಾದರೂ ಹೊರ ದೇಶಕ್ಕೆ ಹೋಗಿದ್ದಾರಾ. ಅವರನ್ನು 24 ಗಂಟೆಗಳ ಒಳಗಡೆ ಹಿಡಿಯಬಹುದು. ಆದರೆ ಹಿಡಿಯುವುದಕ್ಕೆ ಆಗುವುದಿಲ್ಲವೆಂದರೆ, ಈ ಸರ್ಕಾರದಲ್ಲಿ ಮತ್ಯಾರಿಗೆ ರಕ್ಷಣೆ ಇದೆ.

**ಶ್ರೀಮತಿ ವಿಮಲಾಗೌಡ:** ಮಾನ್ಯ ಸಭಾಪತಿಯವರೇ, ಬೆಂಕಿ ಹತ್ತಿಕೊಂಡು ಹುರಿಯುತ್ತದೆ.

**ಶ್ರೀ ಡಿ. ಎಸ್. ವೀರಯ್ಯ:–** ಮಾನ್ಯ ಸಭಾಪತಿಯವರೇ, ಪ್ರಜಾತಂತ್ರ ವ್ಯವಸ್ಥೆಯನ್ನು ಕಾಪಾಡುವುದು ಹೇಗೆ.

**ಶ್ರೀ ಕ್ಯಾಪ್ಟನ್ ಗಣೇಶ್ ಕಾರ್ಣಿಕ್:–** ಮಾನ್ಯ ಸಭಾಪತಿಯವರೇ, ಒಬ್ಬ ಅಧಿಕಾರಿಯ ಹತ್ಯೆಯಾಗಿದೆ. ಸರ್ಕಾರದ ತಪ್ಪು ಇದೆ ಎಂದು ಹೇಳುತ್ತಿದ್ದೇವೆ ನಾವು ಮಾತನಾಡುವುದಕ್ಕೆ ಬಿಡುವುದಿಲ್ಲವೆಂದರೆ? ಇಡೀ ರಾಜ್ಯ ಆತಂಕಗೊಂಡಿದೆ. ಒಬ್ಬ ಅಧಿಕಾರಿಯ ಹತ್ಯೆಯಾಗಿದೆ. ಇದರೊಂದಿಗೆ ಗೃಹ ಇಲಾಖೆ ನೇರವಾಗಿ ಸೇರಿಕೊಂಡಿದೆ. ಇದಕ್ಕೆ ಸಂಬಂಧಪಟ್ಟಂತೆ ಹಿರಿಯ ಸದಸ್ಯರು ಮತ್ತು ಮಾಜಿ ಮಂತ್ರಿಗಳು ಈ ವಿಷಯ ಮಾತನಾಡಲಿಕ್ಕೆ ಬಿಡುತ್ತಿಲ್ಲ.

**ಶ್ರೀ ಡಿ. ಎಸ್. ವೀರಯ್ಯ:–** ಮಾನ್ಯ ಸಭಾಪತಿಯವರೇ, ಅವರು ಏನು ಹೇಳಿದರು ಎಂದು ಕೇಳಿಸಿಕೊಳ್ಳಲಿಲ್ಲ ಆದರೆ ಇದನ್ನು ತಿಳಿಯುವ ಹಕ್ಕು ನಮಗೆ ಇದೆ.

**ಸಭಾಪತಿಯವರು:–** ಮಾನ್ಯ ಸಚಿವರು ಆದ ನಂತರ ಅವಕಾಶ ಕೊಡುತ್ತೇನೆ. ಸಚಿವರು ಮಾತನಾಡುತ್ತಾರೆ.

**ಶ್ರೀ ರಮೇಶ್‌ಕುಮಾರ್:–** ಮಾನ್ಯ ಸಭಾಪತಿಯವರೇ, ನಮಗೆ ಕಷ್ಟ ಅವರು ಮಧ್ಯ ಪ್ರವೇಶ ಮಾಡಿ ಹಲವಾರು ಮಾತುಗಳನ್ನು ಹೇಳಿದ್ದಾರೆ. ಮಾಧ್ಯಮದವರು ಅದನ್ನೆಲ್ಲಾ ಗೌರವಿಸುತ್ತಾರೆ ಮತ್ತು ಅಚ್ಚು ಮಾಡುತ್ತಾರೆ. ನಾವು ನಮ್ಮ ವತಿಯಿಂದ ಹೇಳತಕ್ಕಂತಹ ಮಾತನ್ನು ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಹೇಳಲೇಬೇಕಾಗುತ್ತದೆ. ಸಮಯ ವ್ಯರ್ಥ ಮಾಡಬೇಕು ಎನ್ನುವ ಉದ್ದೇಶ ನನಗೆ ಇಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರು ಮೇಲಿಂದ ಮೇಲೆ Death Note ಬಗ್ಗೆ ಹೇಳಿದರು. Death Note ಎನ್ನತಕ್ಕಂತಹದು, Dying Declaration ಬೇರೆ ಬೇರೆ ಅರ್ಥ ಇರುತ್ತದೆ. ನಾನು ಅದನ್ನು ವಿಶ್ಲೇಷಿಸಿ ನಡೆಯುತ್ತಿರುವಂತಹ ವಿಚಾರಣೆಯನ್ನು prejudice ಮಾಡಲಿಕ್ಕೆ ನಾನು ಪ್ರಯತ್ನ ಮಾಡುತ್ತೇನೆ. It is up to the discretion of the Enquiry Officer. ಅದನ್ನ Death Note ಎಂದು consider ಮಾಡಬೇಕಾ? Dying Declaration ಎಂದು consider ಮಾಡಬೇಕಾ? Enquiry Officer ಅದರ ಜವಾಬ್ದಾರಿಯನ್ನು ಒಪ್ಪಿಕೊಂಡಿರುವಾಗ ನಾವು ಅದರ ಬಗ್ಗೆ ಮಾತನಾಡುವುದು ಅಕ್ಷಮ್ಯ ಅಪರಾಧ. ಎರಡನೇಯದಾಗಿ ಶ್ರೀ ಪುಟ್ಟಸ್ವಾಮಿಯವರು District Magistrate ಬಗ್ಗೆ ಹೇಳಿದರು. Yes, every Deputy Commissioner is a District Magistrate. District magistrate ಎದುರಿನಲ್ಲಿ ಮರಿಗೌಡ ಅಲ್ಲ ಅವರ ಅಪ್ಪ ಬಂದು misbehave ಮಾಡಿದರೂ ಅವರು ಅಲ್ಲೆ the concerned District Magistrate should summon the police and handover that fellow to them. ಅದನ್ನು ಅವರು ಮಾಡಿಲ್ಲ. ಅವನು ಹೊರಟು ಹೋದ ಮೇಲೆ ದೂರು ನೀಡಿದ್ದಾರೆ. ಆ ದೂರನ್ನು register ಮಾಡಿದ್ದಾರೆ. ಅದರ ಪ್ರಕಾರ the Deputy Commissioner is the Complainant and Mr. Marigowda is an Accused. Accused ಆದವನ್ನು ಯಾರದರೂ ಬಂದು ಹಿಡಿದುಕೊಳ್ಳಲಿ ಎಂದು ಸಿಗುವುದಿಲ್ಲ. ಸರ್ಕಾರ ಅಸಮರ್ಥನ್ನೋ, ಸಮರ್ಥನ್ನೋ ಆಥವಾ ಬೇಕೆಂದು ಹಿಡಿದುಕೊಳ್ಳಲಿಲ್ಲವೋ ಅದೆಲ್ಲಾ ನಿಧಾನವಾಗಿ ಗೊತ್ತಾಗುತ್ತದೆ. ಆದರೆ ಅವನನ್ನು ಅಪರಾಧಿ ಅಲ್ಲ ಎಂದು ತಪ್ಪಿಸುವುದಕ್ಕೆ ಯಾರು ಪ್ರಯತ್ನ ಮಾಡುತ್ತಿಲ್ಲ. ಯಾರು ಆವನನ್ನು ರಕ್ಷಣೆ ಮಾಡಲಿಕೆ ಹೊರಟಿಲ್ಲ. ಆ ಹೆಣ್ಣು ಮಗಳು ಜಿಲ್ಲಾಧಿಕಾರಿಯಾಗಿದ್ದಾರೆ ಎಂದು ಅಲ್ಲ. ಯಾರೆ ಆಗಿದ್ದರೂ ಕೂಡ ಒಬ್ಬ ಹೆಣ್ಣು ಮಗಳನ್ನು ಗೌರವದಿಂದ ನಡೆಸುಕೊಳ್ಳುವಂತಹ ಸಂಸ್ಕಾರ ನಮ್ಮದಾಗಿರಬೇಕು.

**ಶ್ರೀಮತಿ ತಾರಾ ಅನುರಾಧ:–** ಮಾನ್ಯ ಸಭಾಪತಿಯವರೇ, ಮಹಿಳೆಯಾಗಿ, ಆ ಮಹಿಳೆಗೆ ಮುಖ್ಯಮಂತ್ರಿಗಳ ಸಮ್ಮುಖದಲ್ಲೆ ಆತ ಬೈದು ಕೆಟ್ಟ ಮಾತುಗಳನ್ನು ಆಡಿದಾಗ, ಆ ಮಹಿಳೆಗೆ ಮಾತನಾಡಲಿಕ್ಕೆ ಅವಕಾಶ ಮಾಡಿಕೊಡುತ್ತೀರ? ಅವರು ಫೋನ್‌ನಲ್ಲೂ ಕೂಡ ಮಾತನಾಡಿದ್ದಾರಂತೆ, ಅದಕೋಸ್ಕರ ಆಕೆ ದೂರು ನೀಡಿದಾಗ, ಆಕೆ ಎಫ್.ಐ.ಆರ್ ಫೈಲ್ ಮಾಡಿದಾಗ, ಇನ್ನು ಏಕೆ arrest ಮಾಡಿಲ್ಲ ಎನ್ನುವುದೇ ನಮಗೆ ಬೇಕಾಗಿರುವುದು. ಸಚಿವರೇ ತಾವು ಮಹಿಳೆಯರ ಬಗ್ಗೆ ತುಂಬ ಕಾಳಜಿಯಿಂದ ಮಾಡನಾಡುತ್ತೀದ್ದಿರಿ.

**ಗೊಂದಲ**

**ಶ್ರೀ ಟಿ. ಎ. ಶರವಣ:–** ಇವರು ಅರೆಸ್ಟ್ ಮಾಡಿರುವುದು ಮರೀಗೌಡರನ್ನ ಅಲ್ಲ, ಅವರ ಕಾರನ್ನ.

**Capt. GANESH KARNIK:** She is a District Magistrate.

**ಗೊಂದಲ**

**ಶ್ರೀ ರಮೇಶ್‌ಕುಮಾರ್:–** ಮಾನ್ಯ ಸಭಾಪತಿಯವರೇ, ಮರೀಗೌಡರು ಮಾಡಿರುವುದು ಸರಿ ಎಂದು ನಾನು ಹೇಳುತ್ತಿಲ್ಲ. ಮರೀಗೌಡನನ್ನು ಹಿಡಿಯುವ ಪ್ರಯತ್ನ ಪೊಲೀಸ್‌ನವರದ್ದು, ಮುಖ್ಯಮಂತ್ರಿಗಳ ಸಮ್ಮುಖದಲ್ಲಿ ಅವರು ಮಾಡಿಲ್ಲ. ಅವನು ಮಾಡನಾಡಿದರೆ, ಇನ್ನೊಂದು ಮಾಡಿದರೆ ಎಫ್.ಐ.ಆರ್. ಮಾಡುವುದು ಡಿ.ಸಿ. ಅಲ್ಲ, ದೂರು ಕೊಡುತ್ತಾರೆ ಅದನ್ನು ಎಫ್.ಐ.ಆರ್. ಎಂದು ಪೊಲೀಸ್‌ನವರು treat ಮಾಡುತ್ತಾರೆ. ಯಾರು ಕೂಡ ನಾಗರಿಕ ಸಮಾಜದಲ್ಲಿ ಮರೀಗೌಡ ಮಾಡಿರುವುದು ಸರಿ ಎಂದು ಆಗಲಿ ಅಥವಾ ಆತನನ್ನು ಸಂರಕ್ಷಣೆ ಮಾಡಬೇಕೆಂದು ಪ್ರತ್ಯಕ್ಷ ಆಥವಾ ಪರೋಕ್ಷವಾಗಿ ಮಾಡಿದರೆ ಅದು ಖಂಡನೀಯ, ಸರ್ಕಾರ ಅದಕ್ಕೆ ಎಂದೂ ಪ್ರೋತ್ಸಾಹ ಕೊಡುವುದಿಲ್ಲ.

**ಶ್ರೀ ಬಿ. ಜೆ. ಪುಟ್ಟಸ್ವಾಮಿ:–** ಮರೀಗೌಡರ ಅರಸ್ಟ್‌ನ್ನು ಮುಖ್ಯಮಂತ್ರಿಗಳು prevent ಮಾಡುತ್ತೀದ್ದಾರೆ ಎಂದು ಹೇಳುತ್ತಿದ್ದಾರೆ.

**Sri K.R. RAMESH KUMAR:** That's all right, that's a political version. ನೀವು ಹೇಳಬಹುದು, ಅದಕ್ಕೆ ಆಕ್ಷೇಪಣೆ ಇಲ್ಲ. ರಾಮಚಂದ್ರಗೌಡರು ಈ ಸದನದ ಅತ್ಯಂತ ಹಿರಿಯ ಸದಸ್ಯರು.

**ಶ್ರೀ ಕ್ಯಾಪ್ಟನ್ ಗಣೇಶ್ ಕಾರ್ಣಿಕ್:–** ಮಾನ್ಯ ಸಭಾಪತಿಯವರೇ, ಯಾರಾದರೂ ಸೂಸೈಡ್ ಮಾಡಿದರೆ, ಅವರ ಒಂದು ಮೊಬೈಲ್ ನಂಬರ್ ನೋಡಿಕೊಂಡು ಪೊಲೀಸ್‌ನವರು ಅವರನ್ನು ಹಿಡಿದುಕೊಂಡು ಬರುತ್ತಾರೆ.

**ಗೊಂದಲ**

**Sri K.R. RAMESH KUMAR:** Mr. Ganesh Karnik, allow me to speak. In parliamentary proceedings, you should both hear and listen. You can't continuously be speaking and interrupting. Allow me to speak. I had the patience to listen to all of you. ನೀವು ಹಾಗೇ ಮಾಡಿದರೆ ಹೇಗೆ? ನೀಡು ದಯಮಾಡಿ ಕೇಳಿ, ನೀವು ಪೊಲೀಸ್ incompetent ಆಗಿದ್ದಾರೆ, ಮರೀಗೌಡನ್ನನು ಹಿಡಿಯಲಿಲ್ಲ ಎಂದು ಹೇಳಿದರೆ, ನಾನು ಆಕ್ಷೇಪಣೆ ಮಾಡುವುದಿಲ್ಲ. ಅವನನ್ನು ಹಿಡಿಯಬೇಕಾಗಿತ್ತು. ಅದಕ್ಕೆ ನಮ್ಮ ತಕರಾರು ಇಲ್ಲ, that's a political version. ಹೌದು, ನಾವು ಅಧಿಕಾರದಲ್ಲಿ ಇರುವುದರಿಂದ ಆತ ನಮ್ಮ ಪಕ್ಷದವನೂ ಆಗಿರುವುದರಿಂದ, ಮುಖ್ಯಮಂತ್ರಿಗಳಿಗೆ close ಎಂದು ಎಲ್ಲರೂ ಹೇಳಿಕೊಳ್ಳುವವರೇ, ಆತ close ಆಥವಾ ಇಲ್ಲವೋ ಎನ್ನುವುದು ದೇಶಕ್ಕೆ ನಂತರ ಗೊತ್ತಾಗುತದೆ. ಆದರೆ, ಅವನನ್ನು arrest ಮಾಡಿಲ್ಲ, ಮಾಡಬೇಕು, ಮಾಡುವ ಎಲ್ಲ ಪ್ರಯತ್ನವನ್ನು ಪೊಲೀಸ್‌ನವರು ಮಾಡಬೇಕಾಗಿರುತ್ತದೆ. ಆ ಕೃತ್ಯ ಸರಿ ಅಂತ ಸಮರ್ಥನೆ ಮಾಡಿಕೊಳ್ಳುವಂತಹ ಕೆಲಸವನ್ನು ನಾವು ಯಾರು ಮಾಡಿಲ್ಲ.

**ಶ್ರೀ ಕೋಟಾ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಪೊಲೀಸ್‌ನವರು ಏನು ಮಾಡುತ್ತಾರೆ. ಮರೀಗೌಡರು ಮುಖ್ಯಮಂತ್ರಿಗಳ ತೋಟದ ಮನೆಯಲ್ಲಿದ್ದಾಗ ಪೊಲೀಸ್‌ನವರು ಹೇಗೆ ಹಿಡಿಯುತ್ತಾರೆ. ತಾವು ತುಂಬಾ ಕಷ್ಟದ ಕೆಲಸ ಮಾಡುತ್ತೀದ್ದಿರ.

**ಶ್ರೀ ರಮೇಶ್‌ಕುಮಾರ್:-** ಮಾನ್ಯ ಸಭಾಪತಿಯವರೇ, ಪೊಲೀಸ್‌ನವರು ಯಾವ ಯಾವ ಕಾಲದಲ್ಲಿ ಏನು ಮಾಡಬೇಕು ಎನ್ನುವುದನು ಎಲ್ಲಾ ಕಾಲದಲ್ಲೂ ತೆಗೆದು ನೋಡುತ್ತಾರೆ. ನಾನು ಒಂದನ್ನು ಹೇಳುತ್ತೇನೆ, ತಾವು ಹಾಗೆ ಮಾಡಿದ್ದೀರಿ, ನಾವು ಹೀಗೇ ಮಾಡುತೇವೆ ಎಂದು ಹೇಳಿ ಸಮರ್ಥಿಸಿಕೊಳ್ಳುವ ಮನುಷ್ಯ ನಾನಲ್ಲ. ಇವತ್ತು ನಾವು ಇಲ್ಲಿದ್ದೇವೆ, ನಮ್ಮ ಜವಾಬ್ದಾರಿಯನ್ನ ನಾವು ಯೋಗ್ಯ ರೀತಿಯಲ್ಲಿ ನಿರ್ವಹಿಸುತ್ತಾ ಇದ್ದೇವಾ ಅಥವಾ ಇಲ್ಲವಾ ಎನ್ನುವುದಷ್ಟೇ ನಮ್ಮ ಕೆಲಸ ಮತ್ತು ರಾಮಚಂದ್ರಗೌಡರು ಹೇಳಿದರು, "Ramesh Kumar is handling a bad case. He is a good lawyer." Professional ethics says, a lawyer cannot say whether it is a good case or a bad case. He must protect the interest of the client. I am a part of the Government. Do you want me to speak for you? If I do that, am I not committing a breach of professional ethics? ದಯಮಾಡಿ ಹೇಳಿ.

**ಶ್ರೀ ರಾಮಚಂದ್ರಗೌಡ:-** ಮಾನ್ಯ ಸಭಾಪತಿಯವರೇ, a lawyer works as per his fees.

**Sri K.R. RAMESH KUMAR:** No, impossible.

**Sri RAMACHANDRA GOWDA:** But a legislator will not work for a fee. There is a difference between an Advocate and a Legislator. Therefore, advocating is his commitment whether it is good or bad. But here, we must select whether it is good or not and then we must speak about it.

ಶ್ರೀ ಕೆ.ಎಸ್. ಈಶ್ವರಪ್ಪ:- ಮಾನ್ಯ ಸಭಾಪತಿಯವರೇ, ಕೊಲೆಗಡುಕ ಎಂದು ಇಡೀ ರಾಜ್ಯ ಹೇಳುತ್ತಿರುವಾಗ ಮಂತ್ರಿಗಳಾಗಿ ಅವರ ಪರವಾಗಿ ವಾದ ಮಾಡುವ ಸ್ಥಿತಿ ಅವರಿಗೆ ಬಂತು, ಭಗವಂತ ಅವರನ್ನೂ ಕಾಪಾಡುವುದಿಲ್ಲ. ನಾನು ಇರುವ ವಿಚಾರವನ್ನು ಹೇಳುತ್ತೇನೆ.

**ಶ್ರೀ ಕೆ.ಆರ್. ರಮೇಶ್‌ಕುಮಾರ್:-** ನನಗೆ ಏನು ಮಾಡಬೇಕು ಮತ್ತು ಏನು ಮಾಡಬಾರದು ಎನ್ನುವುದು ಗೊತ್ತಿದೆ. ಯಾವುದೇ ಪ್ರತಿಭಟಿಸಬೇಕು ಮತ್ತು ಯಾವುದಕ್ಕೆ ಸಹಕರಿಸಬೇಕು ಎಂಬ ವಿವೇಚನೆ ಇಟ್ಟುಕೊಂಡಿದ್ದೇನೆ. ನಾನು ಸಭೆಯ ಸದಸ್ಯನಾಗಿದ್ದಾಗ ನಿರ್ಣಯಗಳನ್ನು ತೆಗೆದುಕೊಳ್ಳಬೇಕಾದ ಪರಿಸ್ಥಿತಿಯಲ್ಲಿ ಅವರಿಗೆ ಗಟ್ಟಿ ಧ್ವನಿಯಲ್ಲಿ ಹೇಳುತ್ತಿದ್ದೆನೆ. ನಿರ್ಣಯಗಳನ್ನು ತೆಗೆದುಕೊಳ್ಳುವ ಜಾಗದಲ್ಲಿಯೇ ನಾನೂ ಇರುವುದರಿಂದ ಇಲ್ಲಿ ಹೇಳುತ್ತಿರುವ ಮಾತುಗಳನ್ನು ನಿಖರವಾಗಿ ಅಲ್ಲಿಯೂ ಹೇಳುತ್ತೇನೆ. ಇಲ್ಲಿ ವ್ಯಾಪಕವಾಗಿ ಪ್ರಚಾರ ಸಿಗುತ್ತದೆ, ಅಲ್ಲಿ ಪ್ರಚಾರ ಸಿಗುವುದಿಲ್ಲ. ನಾನು ಆತ್ಮವಂಚನೆ ಮಾಡಿಕೊಂಡು ಒಂದು ನಿಮಿಷವೂ ಅಧಿಕಾರದಲ್ಲಿ ಇರುವುದಿಲ್ಲ.

**ಶ್ರೀ ಕೆ.ಎಸ್. ಈಶ್ವರಪ್ಪ:-** ಈಗ ಅವರು ಅದನ್ನು ಮಾಡುತ್ತಿದ್ದಾರೆ.

**Sri K.R. RAMESH KUMAR**: That is your opinion.

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯ ರಮೇಶ್‌ಕುಮಾರ್ ಮಾಡುತ್ತಿರುವುದು ಆತ್ಮವಂಚನೆ.

**Sri IVAN D'SOUZA**: **That is his version.**

**ಶ್ರೀ ಕೆ.ಎಸ್. ಈಶ್ವರಪ್ಪ:-** ಇಡೀ ರಾಜ್ಯದ ಜನರು ಹೇಳುತ್ತಿದ್ದಾರೆ. ಇದು ಆತ್ಮವಂಚನೆ. ಆದರೆ ಅವರು ಇಲ್ಲ ಎಂದು ಹತ್ತತ್ತು ಸಾರಿ ಹೇಳಿದರೂ ಆತ್ಮವಂಚನೆ ಆಗುವುದಿಲ್ಲವೇ?

**(ಗೊಂದಲ)**

**ಶ್ರೀ ಕೆ.ಆರ್. ರಮೇಶ್‌ಕುಮಾರ್:- ನಾನು ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ.**

**ಶ್ರೀ ಕೆ.ಎಸ್. ಈಶ್ವರಪ್ಪ:– ಹೇಳುವುದಕ್ಕೂ ಆಗುವುದಿಲ್ಲ.**

**ಶ್ರೀ ಕೆ.ಆರ್. ರಮೇಶ್‌ಕುಮಾರ್:–** ಹಿಂದೆ ಅವರ ಸರ್ಕಾರ ಇದ್ದಾಗ ಅತ್ಯಂತ ಶ್ರದ್ಧೆಯಿಂದ ಕೆಲಸ ಮಾಡುತ್ತಿದ್ದ ಬಳ್ಳಾರಿ ಜಿಲ್ಲೆ ಒಬ್ಬ ಜಿಲ್ಲಾಧಿಕಾರಿಯ ವಿರುದ್ಧ ಇನ್ನೊಬ್ಬ ಕೆಳಗಿನ ಮನುಷ್ಯನನ್ನು ತಯಾರು ಮಾಡಿ, ಜಿಲ್ಲಾಧಿಕಾರಿ ವಿರುದ್ಧ atrocity case ಆಯಿತು. Do you know the fun Mr. Ganesh? ಯಾವ ಅಧಿಕಾರಿಯ ವಿರುದ್ಧ atrocity complaint ಕೊಟ್ಟಿದ್ದರೋ, that officer also belonged to Scheduled Caste.

**ಶ್ರೀ ಕೆ.ಎಸ್. ಈಶ್ವರಪ್ಪ:–** ಸರಿ ಆಯಿತು, ಒಂದು ಕೆಲಸ ಮಾಡಿ, ಅಲ್ಲಿ ಅದಕ್ಕೋಸ್ಕರ ಆ ಕೆಲಸ ಮಾಡಿದರು, ಆದ್ದರಿಂದ ಇಲ್ಲಿ ಕೊಲೆಗಡುಕರನ್ನು......

**Sri K.R. RAMESH KUMAR**: Impossible.

ಶ್ರೀ ಕೆ.ಎಸ್. ಈಶ್ವರಪ್ಪ:– ಇವತ್ತಿನ ಮೌಲ್ಯವನ್ನು ಬೆಂಕಿಗೆ ಹಾಕಿ ರಕ್ಷಣೆ ಮಾಡುತ್ತೇವೆ ಎಂದು ಹೇಳಲಿ. ಶಾಸಕನಾಗಿದ್ದ ಸಂದರ್ಭದಲ್ಲಿ ಬಹಳ ಉಗ್ರ ಪ್ರತಾಪ ತೋರಿಸುತ್ತಿದ್ದು, ಮಂತ್ರಿಯಾದ ನಂತರ ಅವರಿಗೆ ಏನೂ ಮಾಡುವುದಕ್ಕೆ ಆಗುವುದಿಲ್ಲ. ಅವರು ಬಾಲ ಮುದುರಿಕೊಂಡಿದ್ದೇನೆ ಎಂದು ಒಪ್ಪಿಕೊಳ್ಳಲಿ. ಸುಮ್ಮನೆ ಏಕೆ defend ಮಾಡಿಕೊಳ್ಳಲು ಹೋಗುತ್ತಾರೆ?

(ಗೊಂದಲ)

**ಶ್ರೀ ಕೆ.ಆರ್. ರಮೇಶ್ ಕುಮಾರ್:– ಮಾನ್ಯ ವಿರೋಧ ಪಕ್ಷದ ನಾಯಕರು ಆ ಸ್ಥಾನ ಬಲದಿಂದ ಮಾತನಾಡುವ ಎಲ್ಲಾ ಹಕ್ಕು ಇದೆ. ಬಾಲ ಮುದುರಿಕೊಳ್ಳುವುದು, ಬೆನ್ನು ಬಗ್ಗಿಸುವುದು ನಮ್ಮ ಅಪ್ಪನಿಗೆ ಇರಲಿಲ್ಲ, ನನಗೂ ಇಲ್ಲ!. ನಾನು ಬೆನ್ನು ಬಗ್ಗಿಸಿ, ಕಾಲು ಹಿಡಿದು ಮಂತ್ರಿಯಾಗಿಲ್ಲ. ನನ್ನ ಮುಖ್ಯಮಂತ್ರಿಗಳು ನನಗೆ ಫೋನ್ ಮಾಡಿ ' ನಾವು ಜೊತೆಯಲ್ಲಿ ಕೆಲಸ ಮಾಡೋಣ, ಬಾರಪ್ಪ ನಮಗೆ ನಿನ್ನ ಸಹಾಯ ಬೇಕಿದೆ, ನಮ್ಮ ಜೊತೆ colleague ಆಗಿರು' ಎಂದು ಕರೆದಿರುವುದರಿಂದ ಬಂದಿದ್ದೇನೆ. ಅವರಿಗೆ ಬೇಡ ಎನಿಸಿದರೂ ಹೋಗುತ್ತೇನೆ. ನನಗೆ ಸಾಧ್ಯವಿಲ್ಲ ಎಂದಾಗಲೂ ಹೋಗುತ್ತೇನೆ. ನಾನು ಮಂತ್ರಿಯಾಗಲು 40 ವರ್ಷಗಳು ಬೇಕಾಗಿರಲಿಲ್ಲ, ಆದ್ದರಿಂದ ದಯಮಾಡಿ ಆದರ್ಶ ಮತ್ತು ಸ್ವಾಭಿಮಾನದ ಬಗ್ಗೆ ನಮಗ್ಯಾರೂ ಹೇಳುವುದು ಬೇಕಾಗಿಲ್ಲ. ನಾನು ವಿನಂತಿ ಮಾಡುವುದೇನೆಂದರೆ, ನಾನು ಕಾನೂನು ತಜ್ಞ ಅಲ್ಲ, ನಾನು ವಕೀಲನೇ ಅಲ್ಲ. ಅದು ಅವರಿಗೆ ಗೊತ್ತಿಲ್ಲ.**

ಶ್ರೀ ಕೆ.ಎಸ್. ಈಶ್ವರಪ್ಪ:– **ವಕೀಲರೇ ಕಾನೂನು ತಿಳಿದುಕೊಳ್ಳಬೇಕು ಎಂದೇನೂ ಇಲ್ಲ. ಮಾನ್ಯ ಸಚಿವರು ಮಾತನಾಡುವ ಸಂದರ್ಭದಲ್ಲಿ ಹೇಳುವುದೇನೆಂದರೆ, ಇದು ಇಡೀ ರಾಜ್ಯಕ್ಕೆ ಗೊತ್ತಿದೆ, ಪತ್ರಿಕೆ ಮತ್ತು ಟಿ.ವಿ.ಗಳಲ್ಲಿ ಬರುತ್ತಿದೆ, ವಿರೋಧ ಪಕ್ಷ ಮತ್ತು ಆಡಳಿತ ಪಕ್ಷಕ್ಕೂ ಅನ್ಯಾಯ ಆಗಿದೆ ಎಂದು ಗೊತ್ತಿದೆ. ಇದು ಗೊತ್ತಿದ್ದರೂ ಬಹಳ ಚೆನ್ನಾಗಿ ಮಾತನಾಡುತ್ತಿದ್ದಾರೆ. ಅವರು ಮಾತನಾಡುತ್ತಿರುವ ಸಂದರ್ಭದಲ್ಲಿ ಅವರು ಮಾತನಾಡುವ ಒಂದೊಂದು ಅಕ್ಷರವನ್ನು ಕರ್ನಾಟಕ ರಾಜ್ಯದ ಜನರು ಆಲಿಸುತ್ತಿದ್ದಾರೆ.**

ಶ್ರೀ ಕೆ.ಆರ್. ರಮೇಶ್‌ಕುಮಾರ್:– **ನೋಡಬೇಕು.**

ಶ್ರೀ ಕೆ.ಎಸ್. ಈಶ್ವರಪ್ಪ:– **ಇದು ಆತ್ಮವಂಚನೆ ಹೌದೋ–ಅಲ್ಲವೋ ಎಂಬುದನ್ನು ಅವರೇ ಹೇಳಲಿ. ನಾನು ಹೇಳುವುದೇನೆಂದರೆ, ನಾವು ಮಾಡಿದ್ದೆವು ಎಂದು ನಾನು defend ಮಾಡಿಕೊಳ್ಳುವುದಿಲ್ಲ. ನಾವು ಮಾಡಿದ ತಪ್ಪು ತಪ್ಪೇ. ಆದರೆ ಆ ತಪ್ಪನ್ನು ನಾವು ಮತ್ತೆ ಮಾಡುತ್ತೇವೆ ಎಂಬುದನ್ನು ಒಪ್ಪಿಕೊಳ್ಳುತ್ತಾರೆಯೇ?**

ಶ್ರೀ ಕೆ.ಆರ್. ರಮೇಶ್ ಕುಮಾರ್:– **ಅದರಿಂದಲೇ ನಾನು ಬಹಳ ಹೊತ್ತಾದ ನಂತರ ಒಂದೇ ಒಂದು ನಿದರ್ಶನವನ್ನು ಮಾತ್ರ ಹೇಳಿದೆ.**

ಶ್ರೀ ಕೆ.ಎಸ್. ಈಶ್ವರಪ್ಪ:– **ಒಂದಲ್ಲ, ಅವರು ನೂರು ಬೇಕಾದರೆ ಹೇಳಲಿ. ಆದರೆ ನಾನು ಹೇಳುವುದೇನೆಂದರೆ ಯಾರೇ ತಪ್ಪು ಮಾಡಿದರೂ ಅದು ತಪ್ಪಲ್ಲವೇ? ಅವರು ಆತ್ಮವಂಚನೆ ಬಗ್ಗೆ ಮಾತನಾಡುತ್ತಿರುವಾಗ ಮೌಲ್ಯ ಎಂಬ ಪದಗಳು ಅವರ ಬಾಯಿಂದ ಬರಬಾರದು. ಏಕೆಂದರೆ ಅವರು ಯಾರನ್ನು defend ಮಾಡಿಕೊಳ್ಳಲು ಹೊರಟಿದ್ದಾರೆ? ಸತ್ತ ಅಧಿಕಾರಿಯ ಹೆಂಡತಿ–ಮಕ್ಕಳು ಅಲ್ಲಿ ಧರಣಿ ಕುಳಿತಿದ್ದಾರೆ. ಈಗ ಯಾರನ್ನು defend ಮಾಡುತ್ತಿದ್ದಾರೆ. ಅವರು ಪತ್ರಿಕೆ ಮತ್ತು ಟಿ.ವಿಗಳಲ್ಲಿ ಹೇಳಿಕೆ ಕೊಟ್ಟಿದ್ದಾರೆ. ಆತ್ಮವಂಚನೆ ಅಲ್ಲವೇ ಎಂಬುದನ್ನು ತೀರ್ಮಾನ ಮಾಡಲಿ.**

(ಗೊಂದಲ)

ಶ್ರೀ ಕೆ.ಆರ್. ರಮೇಶ್ ಕುಮಾರ್:- **ಯಾವ ಹೊಸ ವಿಚಾರವನ್ನು ಇಷ್ಟೊತ್ತು ಇಷ್ಟೊಂದು ಉಗ್ರವಾಗಿ ಮಾತನಾಡಿದರೂ ಅವರಂತೂ ಹೇಳಿಲ್ಲ. ಅವರು ಹೇಳಿರುವ ಮಾತುಗಳು ಅವರ ಮುಂದೆಯೇ ಇವೆ. ನಿಯಮಗಳು ಏನು ಹೇಳುತ್ತವೆ ಎಂದು ಹೇಳಿದ್ದೇವೆ. ಎಲ್ಲಾ ವಿಚಾರಗಳು ಸಹ ವಿಚಾರಣಾ ಸಂಸ್ಥೆ ಮತ್ತು ವಿಚಾರಣಾಧಿಕಾರಿಯ ಮುಂದೆ ಇವೆ. ವಿಚಾರಣಾಧಿಕಾರಿಯವರು ಪಾವನಾ ಅವರ ಮಗ ಕೊಟ್ಟಿರುವ ಎಲ್ಲಾ ಹೇಳಿಕೆಗಳನ್ನು ಸೇರಿಸಿಕೊಂಡು UDR ಎಂದು case register ಮಾಡಿದಾಗ ಏನೇನು ಮಾಡಿದ್ದಾರೋ, ಅವುಗಳೆಲ್ಲವನ್ನು ನೋಡಿಯೇ ತೀರ್ಪಿಗೆ ಬರಬೇಕು. ವಿಚಾರಣಾಧಿಕಾರಿ ತನ್ನ ತೀರ್ಪನ್ನು ನೀಡುವುದಕ್ಕೆ ಮೊದಲೇ ನಾವೇ ತೀರ್ಮಾನಗಳನ್ನು ಕೊಡುವುದು ಪರೋಕ್ಷವಾಗಿ ವಿಚಾರಣಾಧಿಕಾರಿಯ ತೀರ್ಪನ್ನು prejudice ಮಾಡಿದಂತೆ ಆಗುತ್ತದೆ.**

Sri K.S. ESHWARAPPA: **FIR ಹಾಕಲಿಲ್ಲ. ಅಂದರೂ defend ಮಾಡಿಕೊಳ್ಳುತ್ತಿದ್ದಾರೆ.**

ಶ್ರೀ ಕೆ.ಆರ್. ರಮೇಶ್ ಕುಮಾರ್:- **ಆಯಿತು, ಆ ವಿಚಾರವನ್ನು ಹೇಳಿದ್ದಾರೆ. ನಾನು ಮತ್ತೆ ಆ ವಿಚಾರಗಳಿಗೆ ಹೋಗುವುದಿಲ್ಲ. I don't want to waste the precious time of the House. What is an FIR? What is a Complaint? What is a UDR? ಅದನ್ನೆಲ್ಲಾ ಹೇಳುತ್ತಾ ಹೋದರೆ ಒಂದು ದಿವಸವೇ ಆಗುತ್ತದೆ. ನಮ್ಮ ಅಧಿಕಾರಿಗಳಿಗೆ ಅದರ ಬಗ್ಗೆ ಗೊತ್ತಿದೆ. ಶಿಖಾ ರವರ ವಿಚಾರಕ್ಕೂ ನಾನು ಕ್ಲಾರಿಫೈ ಮಾಡಿದ್ದೇನೆ. ನಾನು ಮಾತನಾಡುವಾಗ ಅದನ್ನು ಹೇಳಿಲಿಲ್ಲ, ಅದಕ್ಕೆ ವಿಷಾಧ ವ್ಯಕ್ತಪಡಿಸುತ್ತೇನೆ. It was not intentional. ಅದು ಸರಿ ಎಂದು ನಾನು ಹೇಳುತ್ತಿಲ್ಲ. ನಾನು ಹೇಳುವುದನೇಂದರೆ ರಾಜಕೀಯವಾಗಿ ಅವರು ತೆಗೆದುಕೊಳ್ಳುವ ನಿಲುವನ್ನು ನಾವು ನಿರ್ಬಂಧಿಸಲು ಆಗುವುದಿಲ್ಲ. ಅದೇ ಪ್ರಜಾಪ್ರಭುತ್ವ. ನಾವು ಗೌರವಿಸುತ್ತೇವೆ. ಆದರೆ ರಾಜಕಾರಣ ಎಲ್ಲಿಯವರೆಗೂ ಹೋಗಬೇಕು?**

ಶ್ರೀ ಕೆ.ಎಸ್. ಈಶ್ವರಪ್ಪ:- **ಗಂಡನನ್ನು ಕಳೆದುಕೊಂಡಿರುವ ಹೆಂಡತಿ ಕೊಟ್ಟ ದೂರಿನಂತೆ FIR ದಾಖಲು ಮಾಡಿಲ್ಲ. ಅವರು ಮಾಡುತ್ತಿರುವುದು ರಾಜಕೀಯವೇ ಅಥವಾ ನಾವು ಮಾಡುತ್ತಿರುವುದು ರಾಜಕೀಯವೇ? ಇದನ್ನು ಇಡೀ ರಾಜ್ಯದ ಜನ ನೋಡುತ್ತಿದ್ದಾರೆ. ರಾಜಕೀಯ ಮಾಡುವುದು ಯಾರು? ರಾಜಕೀಯ ಮಾಡುವುದರಲ್ಲಿ ಮಾನ್ಯ ರಮೇಶ್ ಕುಮಾರ್‌ರವರು expert. ಆ ಜಿಲ್ಲೆಯಲ್ಲಿ ಎಲ್ಲವನ್ನೂ ಹೇಳುತ್ತಾರೆ. ಆದರೆ ಇಲ್ಲಿಯೂ ರಾಜಕೀಯ ಮಾಡಬಾರದು. ಅಲ್ಲಿ ಕಣ್ಣೀರು ಹಾಕುತ್ತಿದ್ದಾರೆ ಮತ್ತು FIR ದಾಖಲು ಮಾಡಿ ಎಂದು ಪೋಲೀಸ್ ಠಾಣೆ ಮುಂದೆ ಧರಣಿ ಕುಳಿತಿದ್ದಾರೆ. ಆದರೆ ಇಲ್ಲಿ ನಮಗೆ ರಾಜಕೀಯ ಮಾಡಬೇಡಿ ಎಂದು ಹೇಳುತ್ತಾರೆ. ಇದನ್ನು ಜನರೇ ತೀರ್ಮಾನ ಮಾಡಲಿ.**

ಶ್ರೀ ಕೆ.ಆರ್. ರಮೇಶ್ ಕುಮಾರ್:- **ನಾನು ರಾಜಕೀಯ ಮಾಡುವ expert ಆಗಿದ್ದರೆ, ಜನಜೀವನದಲ್ಲಿ ರಾಜಕೀಯ ಮಾಡುವುದಾಗಿದ್ದರೆ ಬೇರೆ ಯಾರೂ ಬೇಡ, ಕೋಲಾರ ಜಿಲ್ಲೆಯ ಭಾರತೀಯ ಜನತಾ ಪಕ್ಷದ ಘಟಕದ ಅಧ್ಯಕ್ಷರು, ಮುಖಂಡರೂ ಹಾಗೂ ಸದಸ್ಯರುಗಳನ್ನು ಕರೆಸಿ ಕೇಳಲಿ. ನೀರು, ಅನ್ನ, case, ಮನೆ ಕೊಡುವುದು, ಸೀಮೆಂಟ್ ರಸ್ತೆ, ಪೆನ್‌ಷನ್ ಇತ್ಯಾದಿ ಯಾವುದರಲ್ಲಿಯಾದರೂ ರಾಜಕೀಯ ಮಾಡುತ್ತೇನೆಯೇ ಎಂದು ಕೇಳಲಿ. ನಮ್ಮದೇ ಸರ್ಕಾರದಲ್ಲಿ ನಾನು ಮೂರು ವರ್ಷಗಳಿಂದ ಶಾಸಕನಾಗಿದ್ದರೂ, ನನ್ನ ವಿರುದ್ಧ case register ಮಾಡಿದ ಪೋಲೀಸ್ ಅಧಿಕಾರಿ ಸುದ್ದಿಗೆ ಹೋಗಿಲ್ಲ. ಅವರಾಗಿ ಅವರೇ ಮೂರು ವರ್ಷ ಆಯಿತು ಎಂದು ವರ್ಗಾವಣೆ ಆಗಿದ್ದಾರೆ. ನಾನು ರಾಜಕೀಯವನ್ನು ಆ ಮಟ್ಟಕ್ಕೆ ಇಳಿದು ಮಾಡಬೇಕಾದ ಅವಶ್ಯಕತೆ ಇಲ್ಲ. ನನಗೆ ಸ್ವರ್ಗಸ್ಥರಾದ ಮಾನ್ಯ ದೇವರಾಜ್ ಅರಸ್‌ರವರು ರಾಜಕೀಯ ದೀಕ್ಷೆ ಕೊಟ್ಟರು ಮತ್ತು ಮಾನ್ಯ ರಂಗನಾಥ್‌ರವರು ರಾಜಕೀಯ ಸಂಸ್ಕಾರವನ್ನು ಹೇಳಿಕೊಟ್ಟಿದ್ದಾರೆ. ದಯಮಾಡಿ ಸ್ವಲ್ಪ ಆಲೋಚನೆ ಮಾಡಬೇಕು, ಅಷ್ಟು ಲಘುವಾದ ಜೀವನ ನಡೆಸುವ ಅಪೇಕ್ಷೆ ನನ್ನದಲ್ಲ. ಇದೇನೂ ಶಾಶ್ವತ ಅಲ್ಲ, ಇದರಿಂದ ನನಗೇನೂ ಬರುವುದಿಲ್ಲ. ನಾನು 5 ವರ್ಷಗಳ ಕಾಲ ಸಭಾಧ್ಯಕ್ಷನಾಗಿ ಕೆಲಸ ಮಾಡಿದೆ. ಆಗ ನನ್ನ ವಯಸ್ಸು 43 ವರ್ಷಗಳಾಗಿದ್ದು, ಇತಿಹಾಸದಲ್ಲಿ ಯಾರೂ ಅಷ್ಟು ಚಿಕ್ಕ ವಯಸ್ಸಿನಲ್ಲಿ ಸಭಾಧ್ಯಕ್ಷರಾಗುವುದಿಲ್ಲ. ಎಲ್ಲರೂ ಮಂತ್ರಿಗಳಾಗಬೇಕೆಂದೂ ಅಪೇಕ್ಷೆ ಪಡುತ್ತಾರೆ. ಆದರೆ ನಾನು ಮಂತ್ರಿಯಾಗುವ ಅಪೇಕ್ಷೆ ವ್ಯಕ್ತಪಡಿಸಲಿಲ್ಲ. ಇವತ್ತು ಸಾಕ್ಷಿ ಇಲ್ಲ, ಆದರೂ ಹೇಳುತ್ತೇನೆ. ಮಾನ್ಯ ಪಟೇಲರು ಒಂದು ಸಾರಿ ನನ್ನನ್ನು ಕರೆಸಿದರು. ಈಗ ಶ್ರೀ ಬಿ.ಎಸ್. ಪಾಟೀಲರು ಹಾಗೂ ಶ್ರೀ ಕೆ.ಹೆಚ್. ಶ್ರೀನಿವಾಸ್ ರವರುಗಳು ಬದುಕಿದ್ದಾರೆ. ಮಾನ್ಯ ಪಟೇಲರು ನನ್ನನ್ನು ಕರೆಸಿ ' ಏನಪ್ಪಾ, Higher Education ಖಾತೆಯನ್ನು handle ಮಾಡಬೇಕು, ನೀನೇನಾದರೂ ದೊಡ್ಡ ಮನಸ್ಸು ಮಾಡುತ್ತೀಯಾ?' ಎಂದು ಕೇಳಿದರು. ಆಗ ನಾನು ಅವರಿಗೆ 'ನಾನು**

**ಶಾಸನ ಸಭೆಯ ಅಧ್ಯಕ್ಷನಾಗಿರುವುದು ನಿಮಗೆ ಏನಾದರೂ ಸಮಾಧಾನ ಇಲ್ಲದೇ ಹೋದರೆ ಕೇವಲ ಸಭೆಯ ಸದಸ್ಯನಾಗಿ ಕುಳಿತುಕೊಳ್ಳುತ್ತೇನೆ, ನಾನು ಆ ಸ್ಥಾನದಲ್ಲಿ ಕುಳಿತು ಮತ್ತೆ ಮಂತ್ರಿ ಸ್ಥಾನಕ್ಕೆ ಬರುವುದಿಲ್ಲ' ಎಂದು ಹೇಳಿದೆ. ನನಗೆ ಆದರ್ಶಗಳ ಬಗ್ಗೆ ದೃಢವಾದ ನಿಲುವು ಇದ್ದು, ಆದರ್ಶಗಳನ್ನು ಬಿಟ್ಟು ರಾಜಕಾರಣ ಮಾಡುವುದಿಲ್ಲ. ನಾನು ಹೇಳುವುದೇನೆಂದರೆ ರಾಜಕಾರಣಕ್ಕೆ ಒಂದು ಮಿತಿ ಇರಬೇಕು. ಮಾಧ್ಯಮದವರ ಬಗ್ಗೆ ನಮಗೆ ಅತ್ಯಂತ ಗೌರವ ಇದ್ದು, ಮಾಧ್ಯಮಗಳು ಪ್ರಜಾಪ್ರಭುತ್ವದಲ್ಲಿ ಒಂದು ಪ್ರಮುಖವಾದ ಅಂಗ. ಆದರೆ ಅತ್ಯಂತ ನಮ್ರತೆ ಮತ್ತು ವಿನಯದಿಂದ ನಾನು ಹೇಳುವುದೇನೆಂದರೆ, ಮಾಧ್ಯಮಗಳು ಹೇಳುವ ಮತ್ತು ಬರೆಯುವ ಎಲ್ಲವೂ ಸತ್ಯ ಆಗಿರಬೇಕಾಗಿಲ್ಲ, ಅವರಿಗೆ ಬರುವ ವರದಿ ಮತ್ತು ಮಾಹಿತಿಗಳನ್ನು ಆಧರಿಸಿ ಅವರು ಬರೆಯುತ್ತಾರೆ. ನಮ್ಮಲ್ಲಿ ಅನೇಕ ರೂಲಿಂಗ್ಸ್ ಇದ್ದು, ಪತ್ರಿಕೆಗಳಲ್ಲಿ ಬರುವ ವಿಷಯಗಳನ್ನೇ ಆಧರಿಸಿ we cannot proceed. We have a system. We have devised a system. ವಿಚಾರಣೆ ಪೂರ್ತಿಯಾಗುವವರೆಗೂ ನಾವುಗಳೆಲ್ಲರೂ ಸ್ವಲ್ಪ ತಾಳ್ಮೆ ಇಟ್ಟುಕೊಳ್ಳೋಣ. ಕೇಸ್ ಯಾವಾಗ UDR ಎಂದು ತೆಗೆದುಕೊಂಡರು, ಅದರಲ್ಲಿ ಯಾರ್ಯಾರು ಇದ್ದಾರೆ ಮತ್ತು ಆಮೇಲೆ ಏನಾಗಿದೆ ಎಂಬ ಹೇಳಿಕೆಯನ್ನು ಮಾನ್ಯ ಜಿ. ಪರಮೇಶ್ವರ್ ರವರು ಗೃಹ ಸಚಿವರು ಹಾಗೂ ಸಭಾನಾಯಕರಾಗಿ ಎಲ್ಲವನ್ನೂ ಹೇಳುತ್ತಾರೆ. ಒಟ್ಟಾರೆ ನಾನು ಒಂದು ಮನವಿ ಮಾಡುವುದೇನೆಂದರೆ, ನಿಯಮ 59ರ ಕೆಳಗೆ ಈ ವಿಷಯವನ್ನು ಸಭೆಯ ಎಲ್ಲಾ ಕಲಾಪಗಳನ್ನು ಬದಿಗಿಟ್ಟು ತೆಗೆದುಕೊಳ್ಳುವುದಕ್ಕೆ ಅರ್ಹವಾದ ವಿಷಯವಲ್ಲ, ತಿರಸ್ಕರಿಸಬೇಕು ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.**

**74–80 ಪೇಜ್**

**ಶ್ರೀ ಕೆ.ಆರ್.ರಮೇಶ್‌ಕುಮಾರ್:–** ಸನ್ಮಾನ್ಯ ಸಭಾಪತಿಯವರೇ, ನಮ್ಮ ಇತಿಹಾಸದಲ್ಲಿ ಯಾವುದಾದರೊಂದು ರಾಜ್ಯ ಸರ್ಕಾರ ಸಾರ್ವಜನಿಕ ಒತ್ತಡಕ್ಕೆ ಮತ್ತು ಶಾಸನಸಭೆಯಲ್ಲಿ ನಡೆದಂತಹ ಕಾರ್ಯಕಲಾಪಗಳನ್ನು ಅನುಸರಿಸಿ ಯಾವುದಾದರೊಂದು ವಿಚಾರವನ್ನು ಒಂದಲ್ಲ ಐದು ಸಾರಿ ಸಿ.ಬಿ.ಐ. ತನಿಖೆಗೆ ವಹಿಸಿರುವಂತಹ ಸಂಪ್ರದಾಯ ಈ ದೇಶದಲ್ಲಿ ಎಲ್ಲಾದರೂ ನಡೆದಿದೆಯೇ? ಆ ಕೆಲಸವನ್ನು ನಮ್ಮ ಸರ್ಕಾರ ಮಾಡಿದೆ. ಸುಮಾರು 5 ಪ್ರಕರಣಗಳನ್ನು ಸಿ.ಬಿ.ಐ. ತನಿಖೆಗೆ ವಹಿಸಿದೆ. ಆದರೆ, ಒಂದು ಪ್ರಕರಣಕ್ಕೂ ಸಂಬಂಧಪಟ್ಟಂತೆ ಫಲಿತಾಂಶ ಬಂದಿಲ್ಲ.

ಸನ್ಮಾನ್ಯ ಸಭಾಪತಿಯವರೇ, ನಮ್ಮ ರಾಜ್ಯದಲ್ಲಿ ದಕ್ಷ ಮತ್ತು ಪ್ರಾಮಾಣಿಕ ಅಧಿಕಾರಿಗಳ ಕೊರತೆಯಿಲ್ಲ. ಮಾನ್ಯ ವಿರೋಧ ಪಕ್ಷದವರು ಸದರಿ ಪ್ರಕರಣವನ್ನು ಸಿ.ಬಿ.ಐ.ಗೆ ವಹಿಸಬೇಕೆಂದು ಕೇಳುತ್ತಿದ್ದಾರೆ. ಸಿ.ಬಿ.ಐ.ಗೆ ಪ್ರಕರಣವನ್ನು ವಹಿಸಿ ನಮ್ಮವರನ್ನು ನಾವು ಅನುಮಾನಿಸುವುದು ಬೇಡವೆನ್ನುವುದು ನನ್ನ ಅಭಿಪ್ರಾಯವಾಗಿದೆ. ಪ್ರಾಮಾಣಿಕವಾಗಿರುವ ಅಧಿಕಾರಿಗಳಿಗೆ ವಹಿಸಿದರೆ ವಿಚಾರಣೆಯ ಫಲಿತಾಂಶ ಬೇಗನೆ ಬರುತ್ತದೆ. ಆತ ಒಳ್ಳೆಯವ, ಕೆಟ್ಟವ, ಪ್ರಾಮಾಣಿಕ ಎನ್ನುವುದರ ಬಗ್ಗೆ ಈಗಲೇ ನಿರ್ಧಾರಕ್ಕೆ ಬರುವುದು ಸರಿಯಲ್ಲ. Allow the enquiry to take its course.

**ಶ್ರೀ ಎಂ.ಕೆ.ಪ್ರಾಣೇಶ್:–** ಸನ್ಮಾನ್ಯ ಸಭಾಪತಿಯವರೇ, ಸದರಿ ಪ್ರಕರಣವನ್ನು ಸಿ.ಬಿ.ಐ. ತನಿಖೆಗೆ ವಹಿಸಬೇಕೆಂದು ನಾವು ಏತಕ್ಕೋಸ್ಕರ ಒತ್ತಾಯ ಮಾಡುತ್ತಿದ್ದೇವೆಂದರೆ, ಈ ಪ್ರಕರಣದಲ್ಲಿ ಪೊಲೀಸ್ ಇಲಾಖೆಯ ಮುಖ್ಯ ಅಧಿಕಾರಿಗಳು ಭಾಗಿಗಳಾಗಿದ್ದಾರೆ. ಆ ಅಧಿಕಾರಿಗಳ ಕೆಳಗೆ ಇರುವಂತಹ ಅವರ subordinates ಇದರ ಬಗ್ಗೆ ತನಿಖೆ ಮಾಡುತ್ತಾರೆ. ಮೇಲಿರುವ ಅಧಿಕಾರಿಗಳ ಬಗ್ಗೆ ತನಿಖೆ ಮಾಡಿ ಕೆಳಗಿನ subordinates ನ್ಯಾಯ ದೊರಕಿಸಿ ಕೊಡುವುದಕ್ಕೆ ಸಾಧ್ಯವಾಗುತ್ತದೆಯೇ ಎನ್ನುವುದು ನಮ್ಮ ಪ್ರಶ್ನೆಯಾಗಿದೆ.

**(ಗೊಂದಲ)**

**ಶ್ರೀಮತಿ ಮೋಟಮ್ಮ:–** ಸನ್ಮಾನ್ಯ ಸಭಾಪತಿಯವರೇ, ಸದರಿ ವಿಷಯವನ್ನು ನಿಯಮ 59ರಡಿಯಲ್ಲಿ ಚರ್ಚೆಗೆ ತೆಗೆದುಕೊಳ್ಳಬೇಕೇ ಅಥವಾ ನಿಯಮ 68ರಡಿಯಲ್ಲಿ ತೆಗೆದುಕೊಳ್ಳಬೇಕೇ

ಎನ್ನುವುದರ ಬಗ್ಗೆ ತಾವು ನಿರ್ಣಯ ಕೊಡುವುದಕ್ಕೂ ಮೊದಲೇ ಅವರುಗಳು ಏನೇನೋ ಮಾತನಾಡಿದರೆ ಹೇಗೇ?

**(ಗೊಂದಲ)**

**ಶ್ರೀ ಎಂ.ಕೆ.ಪ್ರಾಣೇಶ್:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಗೃಹ ಸಚಿವರು ಪತ್ರಿಕೆಗಳಿಗೆ ಹೇಳಿಕೆಯನ್ನು ಕೊಟ್ಟಿದ್ದಾರೆ. "ಸರ್ಕಾರ ಡಿವೈಎಸ್‌ಪಿ.ಯವರ ಆತ್ಮಹತ್ಯೆಯನ್ನು ಗಂಭೀರವಾಗಿ ಪರಿಗಣಿಸಿದೆ" ಎಂದು ಹೇಳುವ ಸಂದರ್ಭದಲ್ಲಿ ಡಿ.ವೈ.ಎಸ್.ಪಿ. ಗಣಪತಿಯರವರ ಸಾವಿಗೂ ಮಾನ್ಯ ಕೆ.ಜೆ.ಜಾರ್ಜ್‌ರವರಿಗೂ ಯಾವುದೇ ಸಂಬಂಧವಿಲ್ಲ ಎನ್ನುವ ಮಾತನ್ನು ಹೇಳಿದ್ದಾರೆ.

**(ಗೊಂದಲ)**

**ಶ್ರೀ ಭಾನುಪ್ರಕಾಶ್(ವಿಧಾನಸಭಾ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೇ, ಇನ್ನೂ ಆರೋಪ ಸಾಬೀತು ಆಗದೇ ಇರುವುದರಿಂದ 'ಕೊಲೆಗಡುಕರು' ಎನ್ನುವ ಪದವನ್ನು ಪ್ರಯೋಗ ಮಾಡುವುದಕ್ಕೆ ಸಾಧ್ಯವಿಲ್ಲವೆಂದು ಮಾನ್ಯ ರಮೇಶ್‌ಕುಮಾರ್‌ರವರು ಕ್ರಿಯಾಲೋಪವನ್ನು ಎತ್ತಿದ್ದಾರೆ. ಈ ಮಾತನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ, ಯಾರೋ ಒಬ್ಬ ಸಾಮಾನ್ಯ ಮನುಷ್ಯ ಮೇಲ್ನೋಟಕ್ಕೆ ಇಂತಹವರು ಪ್ರಕರಣದಲ್ಲಿ ಭಾಗಿಗಳಾಗಿಲ್ಲ, ಇಂತಹವರು ಭಾಗಿಗಳಾಗಿದ್ದಾರೆ ಎನ್ನುವ ಮಾತುಗಳನ್ನು ಹೇಳಿದರೆ, ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟಿನ ನ್ಯಾಯಾಧೀಶರಿಗೆ ಏನು ಕೆಲಸ ಎನ್ನುವುದು ನನಗೆ ಅರ್ಥವಾಗುತ್ತಿಲ್ಲ. ಮೇಲ್ನೋಟದ ಮತ್ತು ಕೆಳ ನೋಟದ ನ್ಯಾಯವೆಂದು ಇದೆಯೇ? ಅತ್ಯಂತ ಜವಾಬ್ದಾರಿಯುತ ಸ್ಥಾನದಲ್ಲಿರುವವರು ಮಾನ್ಯ ಗೃಹಸಚಿವರು. ನಾಳೆ ಅವರು 'ಈ ರೀತಿ ತನಿಖೆ ಮಾಡಿ' ಎಂದು ಪೊಲೀಸ್ ಅಧಿಕಾರಿಗಳಿಗೆ ಆದೇಶ ಮಾಡುತ್ತಾರೆ.

**(ಗೊಂದಲ)**

**ಶ್ರೀಮತಿ ಮೋಟಮ್ಮ:–** ಸನ್ಮಾನ್ಯ ಸಭಾಪತಿಯವರೇ, 'ಈ ರೀತಿ ತನಿಖೆ ಮಾಡಿ' ಎಂದು ಹೇಳುವುದಿಲ್ಲ. 'ಕಾನೂನು ಪ್ರಕಾರವಾಗಿ ಕ್ರಮ ಕೈಗೊಳ್ಳಿ' ಎಂದು ಹೇಳುತ್ತಾರೆ.

**ಶ್ರೀ ಭಾನಪ್ರಕಾಶ್:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಮೋಟಮ್ಮನವರು ಈ ವಿಚಾರದಲ್ಲಿ ಬಹಳ ತಿಳಿದವರು. ಅವರು ಹೇಳಿದಂತೆ ಕಾನೂನು ಪ್ರಕಾರವಾಗಿ ತನಿಖೆ ಮಾಡಲು ಹೇಳುತ್ತಾರೆ. ತನಿಖಾಧಿಕಾರಿಗಳನ್ನು ನೇಮಕ ಮಾಡಿ ಬಹಳ ಪಾರದರ್ಶಕವಾಗಿ ತನಿಖೆಯನ್ನು ಮಾಡುತ್ತಾರೆ ಎನ್ನುವುದಾದರೆ,. . . . .  .

**ಶ್ರೀಮತಿ ಮೋಟಮ್ಮ:–** ಸನ್ಮಾನ್ಯ ಸಭಾಪತಿಯವರೇ, ಇದು ನಿಯಮ 59ರಡಿಯಲ್ಲಿ ಈ ವಿಚಾರವನ್ನು ತೆಗೆದುಕೊಳ್ಳಬೇಕು ಎನ್ನುವುದರ ಬಗ್ಗೆ ಚರ್ಚೆ ನಡೆಯುತ್ತಿದೆಯೇ ಎನ್ನುವ ಅನುಮಾನ ಬರುತ್ತಿದೆ.

**ಶ್ರೀ ಭಾನುಪ್ರಕಾಶ್:–** ಸನ್ಮಾನ್ಯ ಸಭಾಪತಿಯವರೇ, ಈ ವಿಚಾರವನ್ನು ನಿಯಮ 59ರಡಿಯಲ್ಲಿ ಏತಕ್ಕೋಸ್ಕರ ಚರ್ಚೆಗೆ ತೆಗೆದುಕೊಳ್ಳಬೇಕೆಂದರೆ, ಈ ರಾಜ್ಯದಲ್ಲಿ, ಈ ವಿಚಾರಕ್ಕಿಂತ ಗಂಭೀರವಾದ ವಿಚಾರ ಮತ್ತೊಂದು ಇಲ್ಲ. ಇಡೀ ರಾಜ್ಯದ ಜನರು ಈ ಸದನದ ಕಡೆ ನೋಡುತ್ತಿದ್ದಾರೆ. ಕಳೆದ 4–5 ದಿನಗಳಿಂದ ಸದನಕ್ಕೆ ರಜೆ ಇತ್ತು. ಇವತ್ತು ಸದನ ಪ್ರಾರಂಭವಾಗಿರುವ ಮೊದಲನೆಯ ದಿನವಾಗಿದೆ. ನಿಯಮ 59ರಡಿಯಲ್ಲಿ ಈ ವಿಚಾರವನ್ನು ಕೈಗೆತ್ತಿಕೊಳ್ಳಬೇಕು ಎನ್ನುವ ಕಾರಣಕ್ಕಾಗಿ ತಮ್ಮ ಮನಸ್ಸನ್ನು ಒಪ್ಪಿಸುವುದಕ್ಕೆ ಸಣ್ಣ ಸಣ್ಣ ಆಧಾರಗಳನ್ನು ಹೇಳುತ್ತಿದ್ದೇವೆ. ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಮಾನ್ಯ ಗೃಹ ಸಚಿವರು 'ಮೇಲ್ನೋಟಕ್ಕೆ' ಎನ್ನುವ ಪದ ಪ್ರಯೋಗ ಮಾಡಿ ನೀಡಿರುವ ಪತ್ರಿಕಾ ಹೇಳಿಕೆಯನ್ನು ನೋಡಿದರೆ ಸಾಮಾನ್ಯ ಜನರು ಮೇಲ್ನೋಟಕ್ಕೆ ಮಾಜಿ ಗೃಹ ಸಚಿವರಾದ ಮಾನ್ಯ ಕೆ.ಜೆ.ಜಾರ್ಜ್‌ರವರ ಪಾತ್ರವಿಲ್ಲವೆಂದು ಹೇಳಿರುವುದು ಕ್ಲೀನ್ ಚಿಟ್ ಕೊಟ್ಟಂತಾಗಿಲ್ಲವೇ?

ಸನ್ಮಾನ್ಯ ಸಭಾಪತಿಯವರೇ, ನಿಯಮ 59ರಡಿಯಲ್ಲಿ ಈ ವಿಚಾರವನ್ನು ಏಕೆ ಚರ್ಚೆಗೆ ತೆಗೆದುಕೊಳ್ಳಬೇಕೆನ್ನುವುದಕ್ಕೆ ಸಂಬಂಧಪಟ್ಟಂತೆ ತಮ್ಮ ಮನಸ್ಸನ್ನು ಒಪ್ಪಿಸುವುದಕ್ಕಾಗಿ ನಾನು ಈ ವಾದ ಮಾಡುತ್ತಿದ್ದೇನೆಯೇ ಹೊರತು, ವಾದ ಮಾಡುವುದಕ್ಕಾಗಿ ವಾದ ಮಾಡುತ್ತಿಲ್ಲ. ಮಾನ್ಯ ಗೃಹ ಸಚಿವರು ಹೇಳಿದ ಮೇಲೆ ಮೇಲ್ನೋಟಕ್ಕೆ ಈ ರೀತಿ ಇಲ್ಲವೆಂದಾದ ಮೇಲೆ ನ್ಯಾಯ ಯಾವ ರೀತಿ ಸಿಗುತ್ತದೆ? ಈ ಕಾರಣಕ್ಕಾಗಿ ನಿಯಮ 59ರಡಿಯಲ್ಲಿ ಈ ವಿಚಾರವನ್ನು ಚರ್ಚಿಸಲು ನಮಗೆ ಅವಕಾಶವನ್ನು ಕೊಡಬೇಕೆನ್ನುವುದು ನಮ್ಮ ಮನವಿಯಾಗಿದೆ.

**ಶ್ರೀ ಐವನ್ ಡಿ'ಸೋಜಾ(ಸರ್ಕಾರದ ಮುಖ್ಯ ಸಚೇತಕರು):–** ಸನ್ಮಾನ್ಯ ಸಭಾಪತಿಯವರೇ, ನಿಯಮ 59ರಡಿಯಲ್ಲಿ ಈ ವಿಚಾರವನ್ನು ತೆಗೆದುಕೊಳ್ಳಬೇಕೇ, ಬೇಡವೇ ಎನ್ನುವುದರ ಬಗ್ಗೆ ತಾವು ರೂಲಿಂಗ್ ಕೊಡಬೇಕು.

**ಶ್ರೀ ಎಂ.ಕೆ.ಪ್ರಾಣೇಶ್:–** ಸನ್ಮಾನ್ಯ ಸಭಾಪತಿಯವರೇ, 'ಹೊಸ ದಿಗಂತ' ಎನ್ನುವ ಪತ್ರಿಕೆಯಲ್ಲಿ ಪ್ರಕಟವಾಗಿರುವಂತೆ ಮಾನ್ಯ ಗೃಹಸಚಿವರು 'ಸರ್ಕಾರ ಡಿವೈಎಸ್‌ಪಿ ಗಣಪತಿಯವರ ಆತ್ಮಹತ್ಯೆಯನ್ನು ಗಂಭೀರವಾಗಿ ಪರಿಗಣಿಸಿದೆ ಎನ್ನುವ ಮತನ್ನು ಹೇಳಿದ್ದಾರೆ. ಅದರ ಜೊತೆಗೆ 'ಡಿವೈಎಸ್‌ಪಿ ಆತ್ಮಹತ್ಯೆಗೂ ಮಾನ್ಯ ಕೆ.ಜೆ.ಜಾರ್ಜ್. ಅವರಿಗೂ ಯಾವುದೇ ಸಂಬಂಧವಿಲ್ಲ' ಎಂದು ಔಟ್‌ರೈಟ್ ಆಗಿ ರಿಜೆಕ್ಟ್ ಮಾಡಿದ್ದಾರೆ. ಅವರನ್ನು ಡಿಫೈನ್ ಮಾಡಿಕೊಳ್ಳಬೇಕು ಮತ್ತು ಅವರನ್ನು ಉಳಿಸಬೇಕೆನ್ನುವ ತೀರ್ಮಾನವನ್ನು ಈ ಸರ್ಕಾರ ಮಾಡಿದೆ. ಆದ್ದರಿಂದ ಸದರಿ ಪ್ರಕರಣದ ತನಿಖೆಯನ್ನು ಸಿ.ಬಿ.ಐ.ಗೆ ವಹಿಸಬೇಕು.

**ಶ್ರೀ ಹೆಚ್.ಎಂ.ರೇವಣ್ಣ:–** ಸನ್ಮಾನ್ಯ ಸಭಾಪತಿಯವರೇ, ಎಲ್ಲಿ ತೀರ್ಮಾನವಾಗಿದೆ? ತಾವು ಇನ್ನೂ ರೂಲಿಂಗ್ ಕೊಟ್ಟಿಲ್ಲ. ತಾವು ರೂಲಿಂಗ್ ಕೊಡಬೇಕು.

**(ಗೊಂದಲ)ಕ್ಯಾಪ್ಟನ್ ಗಣೇಶ್ ಕಾರ್ಣಿಕ್:–** ಸನ್ಮಾನ್ಯ ಸಭಾಪತಿಯವರೇ, ಆ ವ್ಯಕ್ತಿ ಸಾಯುವುದಕ್ಕೂ ಮೊದಲು ನನ್ನ ಆತ್ಮಹತ್ಯೆಗೆ ಮಾನ್ಯ ಕೆ.ಜೆ.ಜಾರ್ಜ್‌ರವರೇ ಕಾರಣವೆಂದು ಹೇಳಿ ಸತ್ತಿದ್ದಾನೆ. ಅದು ದೂರದರ್ಶನಗಳಲ್ಲಿ ಪ್ರಸಾರವಾಗಿದೆ.

**(ಗೊಂದಲ)**

**ಶ್ರೀ ಅರುಣ ಶಹಾಪುರ:–** ಸನ್ಮಾನ್ಯ ಸಭಾಪತಿಯವರೇ, ಈ ವಿಚಾರ ನಿಯಮ 59ರಡಿಯಲ್ಲಿಯೇ ಚರ್ಚೆಯಾಗಬೇಕಾಗಿದೆ.

**(ಗೊಂದಲ)**

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:–** ಸನ್ಮಾನ್ಯ ಸಭಾಪತಿಯವರೇ, ಆ ವ್ಯಕ್ತಿ ಆತ್ಮಹತ್ಯೆ ಮಾಡಿಕೊಳ್ಳುವುದಕ್ಕೂ ಮುಂಚೆ ಸಭೆ ಮಾಡಿ ನನ್ನ ಆತ್ಮಹತ್ಯೆಗೆ ಮಾನ್ಯ ಕೆ.ಜೆ.ಜಾರ್ಜ್‌ರವರೇ ಕಾರಣವೆಂದು ಹೇಳಿ ಸತ್ತಿದ್ದಾನೆ. ಮಾನ್ಯ ಗೃಹ ಸಚಿವರು ಯಾವ ಆಧಾರದ ಮೇಲೆ ಅವರು ಕಾರಣರಲ್ಲವೆಂದು ಹೇಳಿಕೆ ಕೊಟ್ಟಿದ್ದಾರೆ? ವ್ಯಕ್ತಿ ಸಾಯುವ ಕೊನೆಯ ಘಳಿಗೆಯಲ್ಲಿ ಹೇಳುವ ಹೇಳಿಕೆಗೆ ಮಹತ್ವವಿದೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

**ಸಭಾಪತಿಯವರು:–** ಈ ವಿಚಾರದ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ನಾನು ಸದನವನ್ನು ಮುಂದುವರಿಸಿಕೊಂಡು ಹೋಗಬೇಕಾಗಿದೆ. ವಿರೋಧ ಪಕ್ಷದ ಸದಸ್ಯರು ನಿಯಮ 59ರಡಿಯಲ್ಲಿ ಈ ವಿಚಾರವನ್ನು ತೆಗೆದುಕೊಳ್ಳಬೇಕು ಎನ್ನುವುದರ ಬಗ್ಗೆ ಒತ್ತಾಯ ಮಾಡುತ್ತಿದ್ದಾರೆ. ಆಡಳಿತ ಪಕ್ಷದವರು 59ರಡಿಯಲ್ಲಿ ಈ ವಿಚಾರವನ್ನು ತೆಗೆದುಕೊಳ್ಳುವುದು ಬೇಡ ಬೇರೆ ಯಾವುದಾದರೊಂದು ನಿಯಮದಡಿಯಲ್ಲಿ ಚರ್ಚೆಗೆ ಅವಕಾಶವನ್ನು ಮಾಡಿಕೊಡಿ ಎಂದು ಕೇಳುತ್ತಿದ್ದಾರೆ. ನಮ್ಮ ಸದನದಲ್ಲಿ

59ರಡಿಯಲ್ಲಿ ಚರ್ಚೆಗೆ ತೆಗೆದುಕೊಳ್ಳುವುದು ಬಹಳ ಕಷ್ಟಸಾಧ್ಯವಾದ ವಿಚಾರವಾಗಿದೆ. ಆದ್ದರಿಂದ ಆಡಳಿತ ಪಕ್ಷದವರ ಅಭಿಪ್ರಾಯವನ್ನು ತೆಗೆದುಕೊಳ್ಳೋಣ.

**ಶ್ರೀ ಕೆ.ಟಿ.ಶ್ರೀಕಂಠೇಗೌಡಃ–** ಸನ್ಮಾನ್ಯ ಸಭಾಪತಿಯವರೇ, ನಿಯಮ 59ರಡಿಯಲ್ಲಿ ಚರ್ಚೆಗೆ ತೆಗೆದುಕೊಳ್ಳುವುದಕ್ಕೆ ಇದಕ್ಕಿಂತ ಮಹತ್ವದ ವಿಚಾರ ಬೇರೆ ಯಾವುದು ಬೇಕು?

**ಸಭಾಪತಿಯವರುಃ–** ವಿರೋಧ ಪಕ್ಷದವರು ಒಪ್ಪುವುದಾದರೆ ಸದರಿ ವಿಚಾರವನ್ನು ಬೇರೆ ನಿಯಮದಡಿಯಲ್ಲಿ ಚರ್ಚೆಗೆ ತೆಗೆದುಕೊಳ್ಳಬಹುದು.

**ಶ್ರೀ ಟಿ.ಎ.ಶರವಣಃ–** ಸನ್ಮಾನ್ಯ ಸಭಾಪತಿಯವರೇ, ಇದೊಂದು ಬಹಳ ಗಂಭೀರವಾಗಿರುವ ವಿಚಾರವಾಗಿದೆ. ಆದ್ದರಿಂದ ನಿಯಮ 59ರಡಿಯಲ್ಲಿ ಈ ವಿಚಾರವನ್ನು ತೆಗೆದುಕೊಳ್ಳಬೇಕೆನ್ನುವುದು ನಮ್ಮ ಮನವಿಯಾಗಿದೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡಃ–** ಸನ್ಮಾನ್ಯ ಸಭಾಪತಿಯವರೇ, ಆತ್ಮಹತ್ಯೆ ಮಾಡಿಕೊಂಡಿರುವ ಡಿವೈಎಸ್‌ಪಿ ಗಣಪತಿಯವರ ಮಗ ಮತ್ತು ಅವರ ಧರ್ಮಪತ್ನಿ ಪೊಲೀಸ್‌ಠಾಣೆಯ ಎದುರು ಧರಣಿ ಕುಳಿತಿದ್ದಾರೆ. ಕನಿಷ್ಠ ಅವರ ದೂರನ್ನು ಸ್ವೀಕಾರ ಮಾಡುವಂತಹ ಸೌಜನ್ಯವನ್ನು ಸಹ ಪೊಲೀಸ್ ಅಧಿಕಾರಿಗಳು ತೋರಿಸುತ್ತಿಲ್ಲ.

**ಸಭಾಪತಿಯವರುಃ–** ಸದರಿ ವಿಚಾರವನ್ನು ನಿಯಮ 59ರಡಿಯಲ್ಲಿ ಚರ್ಚೆಗೆ ತೆಗೆದುಕೊಳ್ಳಬೇಕೋ ಅಥವಾ ಬೇರೆ ನಿಯಮದಡಿಯಲ್ಲಿ ಚರ್ಚೆಗೆ ತೆಗೆದುಕೊಳ್ಳಬೇಕೇ ಎನ್ನುವುದು ನಮ್ಮ ಮುಂದಿರುವ ಪ್ರಶ್ನೆಯಾಗಿದೆ. ನಾನು ನನ್ನ ನಿರ್ಣಯವನ್ನು ಹೇಳುತ್ತೇನೆ.

**ಶ್ರೀ ಪುಟ್ಟಣ್ಣ(ಶಿಕ್ಷಕರ ಕ್ಷೇತ್ರ)ಃ–** ಸನ್ಮಾನ್ಯ ಸಭಾಪತಿಯವರೇ, ಇದೊಂದು ಅತ್ಯಂತ ಸೂಕ್ಷ್ಮವಾಗಿರುವ ವಿಚಾರವಾಗಿದೆ. ಡಿವೈಎಸ್‌ಪಿ ಗಣಪತಿಯವರು ಆತ್ಮಹತ್ಯೆ ಮಾಡಿಕೊಳ್ಳುವುದಕ್ಕೂ ಮೊದಲು ಅವರು ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಆ ಹೇಳಿಕೆಯನ್ನು ಗಣನೆಗೆ ತೆಗೆದುಕೊಂಡು ಯಾವುದೇ ಕ್ರಮವನ್ನು ಸರ್ಕಾರ ತೆಗೆದುಕೊಳ್ಳುವುದಿಲ್ಲ ಎನ್ನುವುದಾದರೆ, 'ಮರಣಕ್ಕೆ ಮುನ್ನ ಕೊಡುವಂತಹ ಯಾವುದೇ ರೀತಿಯಾದ ಹೇಳಿಕೆಯನ್ನು ತೆಗೆದುಕೊಂಡು, ಯಾರ ಮೇಲೂ ಕ್ರಮವನ್ನು ತೆಗೆದುಕೊಳ್ಳುವುದಿಲ್ಲ' ಎನ್ನುವ ಒಂದು ಆದೇಶವನ್ನು ಈ ಸರ್ಕಾರ ಹೊರಡಿಸಿದರೆ ಅವರು ಸೇಫ್ ಆಗುತ್ತಾರೆ. ಇಲ್ಲದಿದ್ದರೆ, ಜನಸಾಮಾನ್ಯರಿಗೆ ಒಂದು ನೀತಿ, ಇವರಿಗೇ ಒಂದು ನೀತಿ ಎನ್ನುವುದು ಸಾಧ್ಯವಾಗುವುದಿಲ್ಲ. ಶ್ರೀ ಕೆ.ಜೆ.ಜಾರ್ಜ್‌ರವರ ಪಾತ್ರ ಇದರಲ್ಲಿ ಇಲ್ಲದೇ ಇರಬಹುದು. ನಾನು ಪತ್ರಿಕೆಗಳಲ್ಲಿ ಪ್ರಕಟವಾಗಿರುವ ಸುದ್ದಿಗಳನ್ನು ಮತ್ತು ಮಾನ್ಯ ಗೃಹ ಸಚಿವರು ನೀಡಿರುವ ಹೇಳಿಕೆಗಳನ್ನು ಎಲ್ಲವನ್ನು ಸಹ ಸೂಕ್ಷ್ಮವಾಗಿ ನೋಡಿದ್ದೇನೆ. ಅದರಲ್ಲಿ ಸಂಪೂರ್ಣವಾಗಿ ನೂರಕ್ಕೆ ನೂರರಷ್ಟು ಸತ್ಯಾಂಶವಿದೆಯೆಂದು ನಾನು ಹೇಳುವುದಿಲ್ಲ.

**ಶ್ರೀ ಕೆ.ಆರ್.ರಮೇಶ್‌ಕುಮಾರ್ಃ–** ಸನ್ಮಾನ್ಯ ಸಭಾಪತಿಯವರೇ, ಅವರಿಗೆ ಸಹಾಯ ಮಾಡಲು ಒಂದು ಮಾತನ್ನು ಹೇಳುವುದಕ್ಕೆ ಬಯಸುತ್ತಿದ್ದೇನೆ. ದಯಮಾಡಿ ಅವರು ಯೀಲ್ಡ್ ಆಗಬೇಕೆಂದು ಕೇಳಿಕೊಳ್ಳುತ್ತೇನೆ.

ಸನ್ಮಾನ್ಯ ಸಭಾಪತಿಯವರೇ, ಒಬ್ಬ ಮನುಷ್ಯನಿಗೆ ಯಾವುದೋ ಒಂದು ಘಟನೆಯಲ್ಲಿ ಗಂಭೀರವಾಗಿ ಗಾಯಗೊಂಡಿದ್ದರೆ ಸಾಯುವ ಸ್ಥಿತಿಯಲ್ಲಿದ್ದರೆ ಆತ ಏನಾಗುತ್ತಾನೋ ಏನೋ ಎಂದು ಸಾಯುವ ಮುನ್ನ ಅಧಿಕಾರಿಗಳ ಮುಂದೆ ಕೊಡುವ ಹೇಳಿಕೆ Dying Declaration ಆಗುತ್ತದೆ. ವಯೋವೃದ್ಧರಾಗಿರುವವರು ಸಾಯುವ ಮೊದಲು ವಿಲ್ ಮಾಡುವುದು ಕೂಡ Dying Declaration ಆಗುತ್ತದೆ. ಅಸಹಜ ಸಾವಿಗೆ ತನ್ನನ್ನು ತಾನು ಅರ್ಪಣೆ ಮಾಡಿಕೊಳ್ಳುವ ವ್ಯಕ್ತಿ ಹೆಣ್ಣಾಗಿರಲಿ, ಗಂಡಾಗಿರಲಿ ತಾನು ಈ ಕಾರಣಕ್ಕಾಗಿ ಸಾಯುತ್ತಿದ್ದೇನೆ ಅಥವಾ ತನ್ನ ಸಾವಿಗೆ ಇಂತಹವರು ಕಾರಣ ಎಂದು ಒಂದು ಚೀಟಿಯನ್ನು ಬರೆದಿಟ್ಟಿದ್ದರೆ ಅದು Death Note ಆಗುತ್ತದೆ. Death Note is different and Dying Declaration is different. Dying

Declaration ಗೆ ಎದುರು ಇಲ್ಲ. Here in this case, Death Note is not a dying declaration, Death Note is under investigation. Kindly, know this difference.

**ಶ್ರೀ ಪುಟ್ಟಣ್ಣಃ–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ರಮೇಶ್‌ಕುಮಾರ್‌ರವರು ಏನು ಹೇಳುತ್ತಿದ್ದಾರೆ ಅದಕ್ಕೆ ನನ್ನ ಆಕ್ಷೇಪವನ್ನು ವ್ಯಕ್ತಪಡಿಸುತ್ತಿಲ್ಲ. ಡಿವೈಎಸ್‌ಪಿ ಗಣಪತಿಯವರು ಹೇಳಿಕೆ ನೀಡಿ ಸತ್ತ ನಂತರ, ಅವರ ಧರ್ಮಪತ್ನಿ ಮತ್ತು ಅವರ ಮಗ ಪೊಲೀಸ್‌ಠಾಣೆಯ ಮುಂದೆ ಧರಣಿ ನಿರತರಾಗಿದ್ದಾರೆ. ಜನ ಸಾಮಾನ್ಯರು ಈ ರೀತಿ ಒತ್ತಾಯ ಮಾಡಿದ್ದರೇ ಪೊಲೀಸ್ ಇಲಾಖೆಯವರು ಎಫ್.ಐ.ಆರ್. ಫೈಲ್ ಮಾಡುತ್ತಿದ್ದರು. ಅವರನ್ನು ಅರೆಸ್ಟ್ ಮಾಡುತ್ತಿದ್ದರು. ಚಿಕ್ಕಮಗಳೂರು ಡಿವೈಎಸ್‌ಪಿ ಸತ್ತಂತಹ ಸಂದರ್ಭದಲ್ಲಿ ಕೇವಲ ಮಾಧ್ಯಮಗಳಲ್ಲಿ ವರದಿ ಬಂತು ಎನ್ನುವ ಕಾರಣದ ಹಿನ್ನೆಲೆಯಲ್ಲಿ ಅವರ ಮೇಲೆ ಎಫ್.ಐ.ಆರ್. ಫೈಲ್ ಮಾಡಲು ಹೊರಟಿದ್ದರು. ಆತನನ್ನು ಕರೆದು 'ನಿನ್ನ ಮಕ್ಕಳನ್ನು ಬಿಟ್ಟು ಬಾಪ್ಪ ನಿನ್ನ ಅರೆಸ್ಟ್ ಮಾಡುತ್ತೇವೆ' ಎಂದು ಹೇಳಲಿಲ್ಲವೇ? ಆ ನೀತಿಯನ್ನು ಇಲ್ಲಿ ಯಾಕೆ ಅನ್ವಯಿಸುತ್ತಿಲ್ಲ? ಮಂತ್ರಿಗಳಿಗೆ ಒಂದು ನೀತಿ, ಅಧಿಕಾರಿಗಳಿಗೆ ಒಂದು ನೀತಿ ಮತ್ತು ಶಾಸಕರಿಗೆ ಒಂದು ನೀತಿಯನ್ನು ಅನುಸರಿಸಲಾಗುತ್ತಿದೆಯೇ? ಆ ರೀತಿ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ದಯಮಾಡಿ ತಾವು ನಿಯಮ 59ರಡಿಯಲ್ಲಿ ಸದರಿ ವಿಚಾರದ ಬಗ್ಗೆ ಚರ್ಚೆ ಮಾಡಲು ಅವಕಾಶವನ್ನು ಕಲ್ಪಿಸಿಕೊಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

**ಶ್ರೀ ಕೆ.ಎಸ್.ಈಶ್ವರಪ್ಪಃ–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಪುಟ್ಟಣ್ಣನವರು ಬಹಳ ಸ್ಪಷ್ಟವಾಗಿ ಮಂತ್ರಿಗಳಿಗೊಂದು ನೀತಿ, ಶ್ರೀ ಸಾಮಾನ್ಯರಿಗೆ ಒಂದು ನೀತಿಯನ್ನು ಅನುಸರಿಸಲಾಗುತ್ತಿದೆಯೇ ಎನ್ನುವ ಮಾತನ್ನು ಕೇಳಿದ್ದಾರೆ. ಅದಕ್ಕೆ ಮಾನ್ಯ ಗೃಹ ಸಚಿವರಲ್ಲಿ ಮತ್ತು ಮಾನ್ಯ ರಮೇಶ್‌ಕುಮಾರ್‌ರವರ ಬಳಿ ಉತ್ತರವಿಲ್ಲ. ಮಂತ್ರಿಗಳಿಗೊಂದು ನೀತಿ, ಶ್ರೀಸಾಮಾನ್ಯರಿಗೆ ಒಂದು ನೀತಿ ಈ ರಾಜ್ಯದಲ್ಲಿ ನಡೆಯುವುದಿಲ್ಲ, ನಡೆಸುವುದಕ್ಕೆ ನಾವು ಬಿಡುವುದಿಲ್ಲ. ಅದಕ್ಕಾಗಿ ಈ ಹೋರಾಟ ನಡೆಯುತ್ತಿದೆ. ಏಕೆಂದರೆ ಮಂತ್ರಿಗಳಿಗೊಂದು, ಶ್ರೀ ಸಾಮಾನ್ಯರಿಗೊಂದು ಕಾನೂನು ಈ ರಾಜ್ಯದಲ್ಲಿ ನಡೆಯಲ್ಲ, ನಡೆಯಬಾರದು. ನಡೆಯುವುದಕ್ಕೆ ನಾವು ಬಿಡುವುದಿಲ್ಲ. ಇದಕ್ಕೆ ಈ ಹೋರಾಟ ನಡೆಯುತ್ತಿದೆ. ಸರ್ಕಾರ ನಮ್ಮದಲ್ಲ ನಿಮ್ಮದು. ಆದರೆ ಸರ್ಕಾರದಲ್ಲಿ ಗಣಪತಿಯವರು ಆತ್ಮಹತ್ಯೆ ಮಾಡಿಕೊಳ್ಳಲು ಕಾರಣರಾಗಿದ್ದ ಮಂತ್ರಿಯ ರಕ್ಷಣೆ ಮಾಡಲಿಕ್ಕೆ ಹೊರಟ್ಟಿದ್ದರಲ್ಲ ಅದರ ವಿರುದ್ಧ ನಾವು ಹೋರಾಟ ಮಾಡುತ್ತಿದ್ದೇವೆ. ನಾವು ವಿರೋಧ ಪಕ್ಷದಲ್ಲಿದ್ದು ಕೆಲಸ ಮಾಡುತ್ತಿದ್ದೇವೆ. ಸರ್ಕಾರ ನಿಮ್ಮದು. ಸರ್ಕಾರ ಮಾಡುತ್ತಿರುವುದು ಏನು ಯಾರೋ ಆತ್ಮಹತ್ಯೆ ಮಾಡಿಕೊಳ್ಳುವುದಕ್ಕೆ ಕಾರಣರಾಗಿದ್ದ ಮಂತ್ರಿಯನ್ನು ರಕ್ಷಣೆ ಮಾಡುವುದಕ್ಕೆ ಸರ್ಕಾರ ಏಕೆ ಬೇಕು. ನಾವು ಅದಕ್ಕೋಸ್ಕರ ಇಲ್ಲಿ ಹೇಳುತ್ತಿರುವುದು ಇಲ್ಲಿ ಕರ್ನಾಟಕ ರಾಜ್ಯದ ಶ್ರೀ ಸಾಮಾನ್ಯರಿಗೊಂದು ಮಂತ್ತಿಗಳಿಗೊಂದು ವ್ಯವಸ್ಥೆಯಾಗಬಾರದು. ಮಂತ್ರಿಗಳು, ಮುಖ್ಯಮಂತ್ರಿಗಳು ಏನು ಹೇಳಿಕೆಯನ್ನು ಕೊಟ್ಟಿದ್ದಾರೆ, ಆ ಹೇಳಿಕೆಯನ್ನು ವಾಪಸ್ಸು ತೆಗೆದುಕೊಳ್ಳಬೇಕು. ಮುಖ್ಯಮಂತ್ರಿಗಳಾಗಲೀ, ಗೃಹ ಮಂತ್ರಿಗಳಾಗಲೀ ಮಾನ್ಯ ಜಾರ್ಜ್‌ರವರ ಬಗ್ಗೆ ಹೇಳಿಕೆ ಕೊಟ್ಟಿರುವುದು ತಪ್ಪಾಗಿದೆ ಎಂದು ಹೇಳಿ ರಾಜ್ಯದ ಜನರಿಗೆ ಕ್ಷಮೆ ಕೇಳಿ ಇದನ್ನು ವಾಪಸ್ಸು ತೆಗೆದುಕೊಳ್ಳಬೇಕು. ಎರಡನೆಯದು ತುಂಬಾ ಸ್ಪಷ್ಟವಾಗಿ ಹೇಳುತ್ತೇನೆ. ಆತ್ಮಹತ್ಯೆಗೆ ಮಾಡಿಕೊಂಡಿರುವ ಡಿ.ವೈ.ಎಸ್.ಪಿ ಗಣಪತಿಯವರ ಡೆತ್ ನೋಟ್ ಇದೆ. ಟಿ.ವಿ ಮಾಧ್ಯಮದಲ್ಲಿ ಡೆತ್ ನೋಟ್‌ನ್ನು ನಾವು ಕಣ್ಣಿನಿಂದ ನೋಡಿದ್ದೇವೆ, ಕೇಳಿದ್ದೇವೆ. ಈಗಲೂ ನಾನು ಹೇಳುತ್ತೇನೆ. ವ್ಯಕ್ತಿ ತಪ್ಪು ಮಾಡುವುದು ಸಹಜ. ಅದನ್ನು ಡಿಫೆಂಡ್ ಮಾಡಿಕೊಳ್ಳುವುದು ಏನು ಇದೆ, ಅದು ದೊಡ್ಡ ಅಪರಾಧ. ಅದೂ ಕೂಡ ರಮೇಶ್‌ಕುಮಾರ್‌ರಂತಹವರು, ಪರಮೇಶ್ವರ್‌ರಂತಹವರು, ಮುಖ್ಯಮಂತ್ರಿಯವರಾದ ಮಾನ್ಯ ಸಿದ್ದರಾಮಯ್ಯನವರು ಈ ರೀತಿ ಡಿಫೆಂಡ್ ಮಾಡಿಕೊಂಡು ಬಿಟ್ಟರೆ ಅದು ಸರಿಯಾಗುವುದಿಲ್ಲ. ಈ ಅಪರಾಧಕ್ಕೆ ಶಿಕ್ಷೆ ಕೊಡಬೇಕಾಗುತ್ತದೆ. ಬೇರೆ ಏನಿದೆ. ನಾನು ಅದಕ್ಕೋಸ್ಕರ ಹೇಳಿದೆ ಇಂತಹ ಒಂದು ಅಪರಾಧ ಇವರು ಮಾಡುವುದಕ್ಕೆ ಹೊರಟ್ಟಿರುವುದು ಇದು ಖಂಡಿತಾ ಸರಿಯಲ್ಲ. ನಿಜಕ್ಕೂ ಕ್ಷಮೆ ಕೇಳಬೇಕು. ಆಗಿರುವ ತಪ್ಪಿಗೆ ಶಿಕ್ಷೆಯಾಗಬೇಕು. ಏಕೆಂದರೆ ಎಂತಹ ಮಂತ್ರಿಯಾಗಲೀ, ಆ ಮಂತ್ರಿಗಳು ಮಾಡಿದಂತಹ ತಪ್ಪಿಗೆ ಯಾವ ಕಾರಣಕ್ಕೂ ನಾವು ರಕ್ಷಣೆ ಕೊಡಲ್ಲ.

ಇದನ್ನು ಸ್ಪಷ್ಟವಾಗಿ ಅವರು ಹೇಳಬೇಕು. ಈ ರೀತಿಯಾದ ಹೇಳಿಕೆಯನ್ನು ಇಲ್ಲಿಯೇ ನೀಡಿ ಅವರು ಎಫ್‌ಐಆರ್ ಹಾಕುತ್ತೇವೆ ಎಂದು ಹೇಳಿದ್ದೇ ಆದರೆ, ಮಡಿಕೇರಿಯಲ್ಲಿ ಮೃತ ಗಣಪತಿಯವರ ಪತ್ನಿ ಹಾಗೂ ಮಕ್ಕಳು ಅಲ್ಲೇನು ಧರಣಿ ಕುಳಿತಿದ್ದಾರೆ ಅವರುಗಳು ಅಲ್ಲಿ ಧರಣಿಯನ್ನು ವಾಪಸ್ಸು ತೆಗೆದುಕೊಳ್ಳುತ್ತಾರೆ. ಎರಡನೆಯದು, ಕ್ರಿಮಿನಲ್ ಕೇಸ್ ಹಾಕಿ ಅವರನ್ನು ಅರೆಸ್ಟ್ ಮಾಡಿ. ಅವರ ರಾಜೀನಾಮೆ ತೆಗೆದುಕೊಳ್ಳುತ್ತೇವೆಂಬ ಮಾತನ್ನು ಹೇಳಬೇಕೆಂದು ನಾನು ವಿನಂತಿಸುತ್ತೇನೆ. ಇದರ ಬಗ್ಗೆ ಸಿಬಿಐ ತನಿಖೆ ಮಾಡಿದ್ದೇ ಆದರೆ ಅದರಲ್ಲಿ ಏನು ತಪ್ಪಿದೆ. ನಾನು ಅದಕ್ಕೋಸ್ಕರ ಇವತ್ತು ಪ್ರಶ್ನೆಯ ವಿವರಕ್ಕೆ ಹೋಗುವುದಿಲ್ಲ. ನಾವು ವಿರೋಧ ಪಕ್ಷ ದಲ್ಲಿ ಇರಬಹುದು. ನೀವು ಆಡಳಿತ ಪಕ್ಷದಲ್ಲಿ ಇರಬಹುದು. ಆದರೆ ನ್ಯಾಯಕ್ಕೆ ಇವತ್ತು ಜಯ ಸಿಗಬೇಕೆಂಬುದೇ ನಮ್ಮೆಲ್ಲರ ಅಪೇಕ್ಷೆಯಾಗಿದೆ. ನಮ್ಮೆಲ್ಲರ ಅನಿಸಿಕೆಯೂ ಒಂದೇ ಇದೆ. **'ಸತ್ಯಮೇವ ಜಯತೇ'** ಎಂದು ಬರೀ ಹೇಳುವುದಕ್ಕೋಸ್ಕರ ಅಲ್ಲ, ಅದು ಆಚರಣೆ ತರುವುದಕ್ಕೋಸ್ಕರ ಇರವಂತಹ ಒಂದು ವ್ಯವಸ್ಥೆಯಾಗಿದೆ.

**ಶ್ರೀಮತಿ ಮೋಟಮ್ಮ:–** ಹಿಂದೆ ಕೂಡ ಹೆಣ್ಣುಮಕ್ಕಳ ಬಗ್ಗೆ ನಮ್ಮ ಸದನದ ಶ್ರೀಮತಿ ತಾರಾ ಅನುರಾಧಾ ಅವರು ಮಾತನಾಡಿದರು ಮತ್ತು ವಿಮಲಗೌಡರವರು ಮಾತನಾಡಿದರು. ನಮಗೆ ಎಲ್ಲರ ಮೇಲೆ ಗೌರವವಿದೆ. ಹಿಂದೆ ಶಾಸಕರಾದ ರಘುಪತಿಭಟ್‌ರವರ ಪತ್ನಿ ನೇಣು ಹಾಕಿಕೊಂಡರಲ್ಲ, ಅದಕ್ಕೆ ಯಾರು ಕಾರಣರು ಹೇಳಿ ನೋಡೋಣ. ಇವತ್ತು ಏನಾಗಿದೆ ಗೊತ್ತಾ? ಅವತ್ತು ಅಂದಿನ ಶಾಸಕರನ್ನು ನೀವು ರಾಜೀನಾಮೆ ಕೇಳಿದ್ದೀರಾ? ಅವರು ರಾಜಿನಾಮೆ ಕೊಟ್ಟರೇ? ಅಪರಾಧ ಅಪರಾಧನೇ ಕಣ್ರೀ. ಯಾರಾದರೇನು. ಸಂದರ್ಭ, ಅಪರಾಧ ಎಲ್ಲಾರಿಗೂ ಒಂದೇ.

**ಶ್ರೀಮತಿ ತಾರಾ ಅನುರಾಧ:–** ಮಹಿಳೆಯರ ಬಗ್ಗೆ ಅಂದರೆ, ನೀವು ಜಿಲ್ಲಾಧಿಕಾರಿ ಶ್ರೀಮತಿ ಶಿಖಾ ಬಗ್ಗೆ ಶ್ರೀಮತಿ ರಶ್ಮಿ ಬಗ್ಗೆ ಮಾತನಾಡುತ್ತೀರಿ, ಶ್ರೀಮತಿ ಪಾವನ ಅವರ ಬಗ್ಗೆ ಮಾತನಾಡುತ್ತೀರಿ ಎಂದು ನಾವು ತಿಳಿದಿದ್ದೆವು. ನೀವು ಇದನ್ನು ಸ್ಮರಿಸಿಕೊಳ್ಳಬೇಡಿ . . . . .

**ಶ್ರೀ ಕೆ.ಟಿ. ಶ್ರೀಕಂಠೇಗೌಡ :–** ಆ ಕೇಸ್ ರೀ ಓಪನ್ ಮಾಡಲಿ ಮರು ವಿಚಾರಣೆ ಮಾಡಲಿ ಮರು ತನಿಖೆ ಮಾಡಲಿ.

**ಸಭಾಪತಿಗಳೇ:–** ಆಯಿತು ಈಗ ಚರ್ಚೆ ಬೇಡ. ವಿರೋಧ ಪಕ್ಷದ ನಾಯಕರು ಏನು ಹೇಳುತ್ತಾರೆಯೋ ಹೇಳಿ ಮುಗಿಸಿಬಿಡಿ. ನಾನು ರೂಲಿಂಗ್ ಕೊಡಬೇಕಾಗುತ್ತದೆ. ನೀವು ಏನು ಹೇಳುತ್ತೀರಿ ಹೇಳಿ ನಾನು ರೂಲಿಂಗ್ ಕೊಡಬೇಕು.

**ಶ್ರೀ ಕೆ.ಎಸ್ ಈಶ್ವರಪ್ಪ:–** ನಮಗೆ ಇದು ಭಂಡ ಸರ್ಕಾರ ಎನ್ನುವ ತೀರ್ಮಾನ ಆಗಿರುತ್ತದೆ. ಡಿ.ವೈಎಸ್.ಪಿ ಶ್ರೀ ಗಣಪತಿಯವರ ಆತ್ಮಹತ್ಯೆಗೆ ಕಾರಣರಾಗಿರತಕ್ಕಂತ ಜಾರ್ಜ್‌ರವರನ್ನು ಇವರು ಸಚಿವ ಸಂಪುಟದಿಂದ ಕೈ ಬಿಡುವುದಿಲ್ಲ, ಸಿಬಿಐ ತನಿಖೆ ಮಾಡುವುದಿಲ್ಲ ಎಂದು ಹೇಳಿದ್ದಾರೆ. ಈ ತನಿಖೆಯಲ್ಲಿ ಶಾಮೀಲಾಗಿರುತ್ತಾರೆಂದು ಏನು ಅಧಿಕಾರಿಯ ಹೆಸರು ಬಂದಿರುತ್ತದೋ ಅವರನ್ನು ಕೂಡಲೇ ಅಮಾನತ್ತಿನಲ್ಲಿ ಇಡಬೇಕು ಮತ್ತು ತಪ್ಪಿತಸ್ಥರ ಮೇಲೆ ಕ್ರಿಮಿನಲ್ ಕೇಸ್‌ನ್ನು ಹಾಕಬೇಕು. ಅವರ ಹೆಂಡತಿ ಮಕ್ಕಳು ಧರಣಿ ಕುಳಿತಿದ್ದಾರೆ. ಅವರು ಈ ಮೂವರ ಮೇಲೆ ಎಫ್‌ಐಆರ್ ದಾಖಲು ಮಾಡಬೇಕೆಂದು ಒತ್ತಾಯಿಸುತ್ತಿದ್ದಾರೆ. ಅವರುಗಳ ಮೇಲೆ ಕ್ರಿಮಿನಲ್ ಕೇಸ್ ಹಾಕಬೇಕು. ಅವರನ್ನು ಸಚಿವ ಸಂಪುಟದಿಂದ ಕೈಬಿಡಬೇಕು ಮತ್ತು ಸಿಬಿಐ ತನಿಖೆಯಾಗಬೇಕು ಅಲ್ಲಿಯವರೆವಿಗೂ ಕೂಡ ನಾವುಗಳು ಧರಣಿ ಮಾಡುತ್ತೇವೆ.

**(ಮಾನ್ಯ ಈಶ್ವರಪ್ಪನವರು ಸದನದ ಬಾವಿಗೆ ಬಂದು ಧರಣಿಯಲ್ಲಿ ನಿರತರಾದರು)**

**ಶ್ರೀ ಟಿ.ಎ. ಶರವಣ:–** ಮಾನ್ಯ ಜಾರ್ಜ್‌ರವರು ರಾಜೀನಾಮೆ ಕೊಡುವವರೆಗೂ, ಅವರನ್ನು ಸಚಿವ ಸಂಪುಟದಿಂದ ಕೈ ಬಿಡುವವರೆಗೂ, ಆ ಇಬ್ಬರು ಹಿರಿಯ ಅಧಿಕಾರಿಗಳ ಮೇಲೆ ಕ್ರಿಮಿನಲ್ ಕೇಸ್ ದಾಖಲೆಯಾಗುವವರೆಗೂ ಮತ್ತು ಮೃತರ ಕುಟುಂಬದವರು ಏನು ಅಲ್ಲಿ ಪ್ರತಿಭಟನೆ ಕುಳಿತಿದ್ದಾರೆ ಅವರ ಪರವಾಗಿ ನ್ಯಾಯ ಕೊಡಿಸಬೇಕಾಗಿದೆ. ಸಾಮಾನ್ಯ ಜನರಿಗೊಂದು ನ್ಯಾಯ, ಮಂತ್ರಿಗಳಿಗೆ, ಶಾಸಕರಿಗೊಂದು ನ್ಯಾಯ ಇರಬಾರದು. ಅದಕ್ಕೋಸ್ಕರ ಈ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಎಲ್ಲರಿಗೂ

ಒಂದೇ ರೀತಿಯ ನೀತಿ–ನಿಯಮಗಳು ಆಗಬೇಕು ಎಂಬುದು ನಮ್ಮ ಅಭಿಪ್ರಾಯವಾಗಿದೆ. ಶ್ರೀ ಗಣಪತಿಯವರ ಕುಟುಂಬದವರಿಗೆ ನ್ಯಾಯ ಸಿಗುವವರೆಗೂ ನಾವೂ ಕೂಡ ಜೆಡಿ(ಎಸ್)ನಿಂದ ಪಕ್ಷದಿಂದ ಧರಣಿಯನ್ನು ಮುಂದುವರಿಸುತ್ತೇವೆ.

**ಶ್ರೀ ಕೆ.ಟಿ. ಶ್ರೀಕಂಠೇಗೌಡ:–** ಇವತ್ತು ಇಳಿ ವಯಸ್ಸಿನ ಗಣಪತಿಯವರ ತಂದೆಗೆ ಗೊತ್ತಿಲ್ಲದ ಹಾಗೆ ಪೊಲೀಸ್‌ನವರೇ ದೂರನ್ನು ಬರೆದುಕೊಂಡು ಅವರ ತಂದೆಯವರಿಂದ ಅದಕ್ಕೆ ಸಹಿಯನ್ನು ತೆಗೆದುಕೊಂಡು ಎಫ್‌ಐಆರ್ ಮಾಡುವುದಾದರೆ ಅದಕ್ಕೆ ನಮ್ಮ ಧಿಕ್ಕಾರ ಇದೆ. ಇದು ಸರಿಯಲ್ಲ. ಗಣಪತಿಯವರ ಪತ್ನಿಯ ದೂರನ್ನು ಸ್ವೀಕಾರ ಮಾಡಬೇಕು ಮತ್ತು ಆ ದೂರಿನ ಮೇಲೆ ಎಫ್‌ಐಆರ್ ದಾಖಲು ಮಾಡಬೇಕು. ಗಣಪತಿಯವರು ಸಾವಿಗೆ ಮುನ್ನಾ ಏನು ಹೇಳಿಕೆ ಮಾಡಿದ್ದಾರೋ ಅದನ್ನು ಪರಿಗಣಿಸಬೇಕು. ಅದಕ್ಕೆ ಪುರಸ್ಕಾರ ಸಿಗಬೇಕು. ಶ್ರೀಮಾನ್ ಜಾರ್ಜ್‌ರವರು ಕೂಡಲೇ ರಾಜೀನಾಮೆ ನೀಡಬೇಕು ಮತ್ತು ಗಣಪತಿಯವರ ಸಾವಿನ ಬಗ್ಗೆ ಸಿಬಿಐ ತನಿಖೆ ಆಗಲೇಬೇಕು ಎನ್ನುವಂತಹ ದಿಸೆಯಲ್ಲಿ ಸರ್ಕಾರ ಹೆಜ್ಜೆ ಇಡಬೇಕು. ಇಡೀ ರಾಜ್ಯದ ಜನ ಮೆಚ್ಚುವ ಹಾಗೆ ಒಂದು ನ್ಯಾಯಾಂಗ ತನಿಖೆ ಹಾಗೂ ಸಿಬಿಐ ತನಿಖೆಯಾಗಬೇಕು. ಸರ್ಕಾರ ಈ ಬಗ್ಗೆ ಒಂದು ನಿರ್ಣಯವನ್ನು ತೆಗೆದುಕೊಳ್ಳಬೇಕು ನಾವು ಕೂಡ ಈ ಧರಣಿಗೆ ಕೈಜೋಡಿಸುತ್ತೇವೆ ಎನ್ನುವಂಥ ಮಾತನ್ನು ಅತ್ಯಂತ ಸ್ಪಷ್ಟವಾಗಿ ಹೇಳಬಯಸುತ್ತೇನೆ.

**(ಈ ಹಂತದಲ್ಲಿ ಜೆ.ಡಿ.(ಎಸ್) ಪಕ್ಷದ ಸದಸ್ಯರುಗಳು ಸದನದ ಬಾವಿಗೆ ಬಂದು ಧರಣಿಯಲ್ಲಿ ನಿರತರಾದರು)**

**ಸಭಾಪತಿಯವರು:–** ಸಾಕಷ್ಟು ವಿಷಯಗಳನ್ನು ಕೇಳಲಾಯಿತು. ಚರ್ಚೆ, ವಾದ–ವಿವಾದ, ಪ್ರಶ್ನೆ, ಉತ್ತರ ಎಲ್ಲಾ ನಡೆದಿದೆ. ಆದರೆ ನಾನು ಸದನವನ್ನು ಸುಸೂತ್ರವಾಗಿ ನಡೆಸಬೇಕಾಗಿದೆ. ದಯಮಾಡಿ ಧರಣಿ ನಿರತ ಎಲ್ಲಾ ಸದಸ್ಯರು ತಮ್ಮ ತಮ್ಮ ಸ್ಥಾನಗಳಿಗೆ ತೆರಳಿ ಸದನ ನಡೆಸುವುದಕ್ಕೆ ಅನುವು ಮಾಡಿಕೊಡಿ ಎಂದು ಕೇಳಿಕೊಳ್ಳುತ್ತೇನೆ. ನಾನು ನಿಟ್ಟಿನಲ್ಲಿ ನಾನೂ ಕೂಡ ಪ್ರಯತ್ನ ಮಾಡುತ್ತಿದ್ದೇನೆ.

**ಶ್ರೀ ಪುಟ್ಟಣ್ಣ:–** ಒಂದು ರೀತಿಯಲ್ಲಿ ಹೇಳುವುದಾದರೆ, ಈಗ ನಾವು ಧರಣಿ ಮಾಡುವುದಕ್ಕೆ ಸರ್ಕಾರದವರೇ ಪ್ರಚೋದನೆ ಮಾಡುತ್ತಿದ್ದಾರೆಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಮಾನ್ಯ ಮಾಜಿ ಗೃಹ ಸಚಿವರು ರಾಜೀನಾಮೆ ಕೊಡಲಿ ಅವರ ಮೇಲೆ ಕಾನೂನು ಕ್ರಮ ಕೈಗೊಳ್ಳಲಿ. ಆಗ ನಾವು ಈ ಧರಣಿಯನ್ನು ಕೈಬಿಡುತ್ತೇವೆ.

**ಸಭಾಪತಿಗಳು:–** ದಯಮಾಡಿ ಧರಣಿ ನಿಲ್ಲಿಸಿ. ನಂತರ ನೋಡೋಣ

**(ಸದನದ ಬಾವಿಯಲ್ಲಿ ಧರಣಿನಿರತರಾಗಿದ್ದ ವಿರೋಧ ಪಕ್ಷದ ಸದಸ್ಯರುಗಳು ಸರ್ಕಾರದ ವಿರುದ್ಧ ಘೋಷಣೆಯನ್ನು ಕೂಗುತ್ತಿದ್ದರು. )**

**ಸಭಾಪತಿಯವರು:–** ಧರಣಿ ನಿರತ ಸದಸ್ಯರುಗಳು ಘೋಷಣೆಯನ್ನು ಕೂಗುವುದು ಬೇಡ. ಸದನವನ್ನು ನಡೆಸುವುದಕ್ಕೆ ಅವಕಾಶ ಮಾಡಿಕೊಡಿ. ಇದು ಸರಿಯಲ್ಲ.

**(ಗೊಂದಲ)**

**ಶ್ರೀ ಐವಾನ್ ಡಿಸೋಜಾ:–** ಇಲ್ಲಿ ಧರಣಿ ಕುಳಿತರೆ ಸರಿಯಾಗುವುದಿಲ್ಲ. ಅದರ ಅವಶ್ಯಕತೆ ಇಲ್ಲ. ಇಲ್ಲಿ ರಾಜಕಾರಣ ಮಾಡುವುದು ಅವರ ಉದ್ದೇಶವಾಗಿದೆ. ಇದರಲ್ಲಿ ರಾಜಕೀಯ ಮಾಡಬೇಕೆಂಬುದು ಅವರ ಉದ್ದೇಶವಷ್ಟೇ. . . .

**(ಗೊಂದಲ)**

**ಪ್ರಕಟಣೆ**

**ಸಭಾಪತಿಯವರು:–** ನಮ್ಮ ಸದನದ ಗೌರವಾನ್ವಿತ ಸದಸ್ಯರಾದ ಮಾನ್ಯ ಸೀತಾರಾಂ ಅವರು ಸಚಿವರಾಗಿದ್ದಾರೆ. ಅವರು ನೂತನ ಸಚಿವರಾಗಿರುವ ಪ್ರಯುಕ್ತ ಮೇಲ್ಮನೆ ಮತ್ತು ಕೆಳಮನೆಯ ಎಲ್ಲಾ

ಸದಸ್ಯರುಗಳಿಗೂ ಭೋಜನ ಕೂಟವನ್ನು ಏರ್ಪಾಡು ಮಾಡಿದ್ದಾರೆ. ಎಲ್ಲಾರೂ ಭೋಜನಕೂಟದಲ್ಲಿ ಪಾಲ್ಗೊಳ್ಳಬೇಕೆಂದು ತಿಳಿಸಿದ್ದಾರೆ. ಅದನ್ನು ನಾನು ಗಮನದಲ್ಲಿಟ್ಟುಕೊಂಡು ಸದನವನ್ನು ಮಧ್ಯಾಹ್ನ 3.30 ತನಕ ಮುಂದೂಡಿದ್ದೇನೆ.

**( ಭೋಜನ ವಿರಾಮಕ್ಕಾಗಿ 1 ಗಂಟೆ 51 ನಿಮಿಷಕ್ಕೆ ಮುಕ್ತಾಯಗೊಂಡು ಸದನವು ಮತ್ತೆ ಮಧ್ಯಾಹ್ನ 3 ಗಂಟೆ 30 ನಿಮಿಷಕ್ಕೆ ಸೇರಲು ನಿಶ್ಚಯಿಸಿತು)**

(ಭೋಜನ ವಿರಾಮದ ನಂತರ ಸದನವು ಪುನಃ ಸದನವು ಮಧ್ಯಾಹ್ನ 3 ಗಂಟೆ 47 ನಿಮಿಷಕ್ಕೆ ಸಮಾವೇಶಗೊಂಡಿತು. ಮಾನ್ಯ ಸಭಾಪತಿಯವರು ಪೀಠದಲ್ಲಿ ಉಪಸ್ಥಿತರಿದ್ದರು )

ಸದನ ಪ್ರಾರಂಭಗೊಳ್ಳುತ್ತಿದ್ದಂತೆ ಬಿ.ಜೆ.ಪಿ ಮತ್ತು ಜೆ.ಡಿ.ಎಸ್ ಪಕ್ಷಗಳ ಎಲ್ಲಾ ಸದಸ್ಯರುಗಳು ಸದನದ ಬಾವಿಯೊಳಗೆ ಬಂದು ಧರಣಿಯಲ್ಲಿ ನಿಂತಿದ್ದರು.)

**ಶ್ರೀ ಕೆ.ಎಸ್.ಈಶ್ವರಪ್ಪ:–** ಸನ್ಮಾನ್ಯ ಸಭಾಪತಿಯವರೇ, ನಮ್ಮ ಗೃಹ ಸಚಿವರಾಧ ಜಿ.ಪರಮೇಶ್ವರವರು ಹೋರಾಟ ಮಾಡಿ ಗೃಹಮಂತ್ರಿ ಸ್ಥಾನ ಪಡೆದುಕೊಂಡರು. ಇಂತಹ ಸಂದರ್ಭದಲ್ಲಿ ಇಡೀ ಕರ್ನಾಟಕ ರಾಜ್ಯದ ಜನರು ಅವರನ್ನು ನೋಡುತ್ತಿದ್ದಾರೆ. ಅವರು ನ್ಯಾಯದ ಪರವಾಗಿದ್ದಾರೋ, ಅಥವಾ ಅವರು ತಮ್ಮ ಕುರ್ಚಿ ಉಳಿಸಿಕೊಳ್ಳುವುದಕ್ಕೋಸ್ಕರ ಪ್ರಯತ್ನ ನಡೆಸುತಿದ್ದಾರೋ ಎಂದು ನೋಡುತ್ತಿದ್ದಾರೆ. ಅಥವಾ ಅವರು ಮುಖ್ಯ ಮಂತ್ರಿಗಳನ್ನು ತೃಪ್ತಿಪಡಿಸುವಂತಹ ಪ್ರಯತ್ನ ನಡೆಸುತ್ತಿದ್ದಾರೋ, . . ..

(ಈ ಹಂತದಲ್ಲಿ ಬಿ.ಜೆ.ಪಿ ಮತ್ತು ಜೆ.ಡಿ.ಎಸ್ ಪಕ್ಷದ ಎಲ್ಲಾ ಸದಸ್ಯರುಗಳು ಸರ್ಕಾರದ ವಿರುದ್ಧ ಘೋಷಣೆ ಕೂಗುತ್ತಿದ್ದರು.)

ಮುಖ್ಯ ಮಂತ್ರಿಗಳ ಬಹಳ ಹತ್ತಿರ ಇರುವಂತಹ ಜಾರ್ಜ್‌ರವರನ್ನು ಉಳಿಸಿ ಸೋನಿಯಾ ಗಾಂಧಿಯವರನ್ನು ಸಂತೃಪ್ತಿ ಮಾಡಿಸುವಂತಹ ಪ್ರಯತ್ನ ನಡೆಸುತ್ತಾ ಇದ್ದಾರೋ, ಇಡೀ ಕರ್ನಾಟಕ ರಾಜ್ಯ ನೋಡುತ್ತಿರುವಂತಹ ಸಂದರ್ಭದಲ್ಲಿ ಗೃಹ ಮಂತ್ರಿ ಇದನ್ನು ಒಂದು ರೀತಿಯ ಸವಾಲು ರೂಪದಲ್ಲಿ ಸ್ವೀಕಾರ ಮಾಡಬೇಕಾಗಿತ್ತು.

ಅವರು ನ್ಯಾಯದ ಪರವಾಗಿ ಇದ್ದಾರೆಯೋ, ಅವರ ಕುರ್ಚಿ ಉಳಿಸಿಕೊಳ್ಳುವುದಕೋಸ್ಕರ ಪ್ರಯತ್ನ ನಡೆಸುತ್ತಿದ್ದಾರೆಯೋ, ಮುಖ್ಯಮಂತ್ರಿಯವರನ್ನು ತೃಪ್ತಿಪಡಿಸುವ ಪ್ರಯತ್ನ ನಡೆಸುತ್ತಿದ್ದಾರೆಯೋ, ಮುಖ್ಯಮಂತ್ರಿಯವರಿಗೆ ಬಹಳ ಹತ್ತಿರ ಇರುವಂತಹ ಜಾರ್ಜ್‌ರವರನ್ನು ಉಳಿಸಿ ಸೋನಿಯಾಗಾಂಧಿಯವರನ್ನು ಸಂತೃಪ್ತಿಗೊಳಿಸುವ ಪ್ರಯತ್ನ ನಡೆಸುತ್ತಿದ್ದಾರೆಯೋ, ಇಡೀ ಕರ್ನಾಟಕ ರಾಜ್ಯ ನೋಡುತ್ತಿರುವಂತಹ ಸಂದರ್ಭದಲ್ಲಿ ಗೃಹ ಮಂತ್ರಿಯವರು ಇದನ್ನು ಒಂದು ರೀತಿ ಸವಾಲು ರೂಪದಲ್ಲಿ ಸ್ವೀಕಾರ ಮಾಡಬೇಕಾಗಿತ್ತು. ಯಾವ ಒಬ್ಬ ಪ್ರಾಮಾಣಿಕ ಡಿವೈಎಸ್‌ಪಿ ಅವರು ಡೆತ್‌ನೋಟ್ ಬರೆದು ಟಿ.ವಿ.ಗಳಿಗೆ ಸಂದರ್ಶನ ಕೊಟ್ಟು ನನ್ನ ಆತ್ಮಹತ್ಯೆಗೆ ಕಾರಣ ಜಾರ್ಜ್ ಅವರು ಎಂದು ಹೇಳಿದ ನಂತರವೂ ಕೂಡ ಇವರು ಅವರ ಬಗ್ಗೆ ಎಫ್.ಐ.ಆರ್., ಹಾಕಲಿಲ್ಲ. ಹೋಗಲಿ, ಡಿವೈಎಸ್‌ಪಿ ಅವರ ಮಗ ಮತ್ತು ಅವರ ಹೆಂಡತಿ ಇಬ್ಬರೂ ಕೂಡ ಅಲ್ಲಿ ಧರಣಿ ಕೂತು ಎಫ್.ಐ.ಆರ್., ಹಾಕಿ ಎಂದು ಹೇಳಿದರೂ ಕೂಡ ಇಡೀ ಕರ್ನಾಟಕ ರಾಜ್ಯ ನೋಡುತ್ತಿರುವಂತಹ ಸಂದರ್ಭದಲ್ಲಿ ಎಫ್.ಐ.ಆರ್., ಹಾಕುವುದಕ್ಕೂ ಇವರು ತಯಾರಿಲ್ಲ. ಎಫ್.ಐ.ಆರ್., ಹಾಕದೆ ಕ್ರಿಮಿನಲ್ ಕೇಸ್ ಹಾಕುವುದಕ್ಕೆ ಆಗುವುದಿಲ್ಲ. ಇವರು ಕ್ರಿಮಿನಲ್ ಕೇಸ್ ಹಾಕದೆ ಅವರ ಬಗ್ಗೆ ಸಚಿವ ಸಂಪುಟದವರೆಲ್ಲರೂ ನಿಂತಿದ್ದಾರೆ. ಸ್ವತಃ ಮುಖ್ಯಮಂತ್ರಿಗಳು ಸಚಿವ ಸಂಪುಟದವರೆಲ್ಲರೂ ಕೂಡ ಜಾರ್ಜ್ ಅವರ ಬೆಂಬಲಕ್ಕೆ

ನಿಂತುಕೊಳ್ಳಿ ಎಂದು ಹೇಳುತ್ತಾರೆ. ಇದು ಸರ್ಕಾರವೇ, ಜನಪರವಾಗಿರುವಂತಹ ಸರ್ಕಾರವೇ, ಜಾರ್ಜ್ ಪರ ಸರ್ಕಾರವೇ, ಜಾರ್ಜ್ ಪರ ಸರ್ಕಾರ ಅನಿಸಿದರೆ ಇದರ ಅರ್ಥ ಆತ್ಮಹತ್ಯೆ ಮಾಡಿಕೊಂಡವರಿಗೆ ಬೆಂಬಲವನ್ನು ಕೊಡುತ್ತಿರುವಂಥ ಕೊಲೆಗಡುಕರ ಸರ್ಕಾರವೇ ಎಂದು ಅನುಮಾನ ಬರುತ್ತಿದೆ. ಅದಕೋಸ್ಕರ ನಾನು ಮಾನ್ಯ ಗೃಹ ಮಂತ್ರಿಗಳಿಗೆ ಪ್ರಾರ್ಥನೆ ಮಾಡುತ್ತೇನೆ, ವಿಧಾನ ಪರಿಷತ್ತನ್ನು ಕರ್ನಾಟಕ ರಾಜ್ಯದ ಜನತೆ ನೋಡುತ್ತಿರುವಂತಹ ಸಂದರ್ಭದಲ್ಲಿ ಬೇರೆ ಬೇರೆ ವಿಷಯಕ್ಕೆ ನಾವು ಹೋಗೋಣ. ನಾನು ಇವರಿಗೆ ಕೈಮುಗಿದು ಪ್ರಾರ್ಥನೆ ಮಾಡುತ್ತೇನೆ. ಈ ಸಂದರ್ಭದಲ್ಲಿ ತಾವು ಬೆಳಿಗ್ಗೆಯಿಂದ ಗಮನಿಸುತ್ತಿದ್ದೀರಿ. ಎಲ್ಲರೂ ವಾದ ಮಾಡಿದ್ದಾರೆ. ಯಾರಾದರೂಬ್ಬರ ವಾದದಲ್ಲಿ ಇದು ಸುಳ್ಳು ಎನ್ನುವ ಪ್ರಶ್ನೆ ಇಲ್ಲ. ಮಾನ್ಯ ರಮೇಶ್‌ಕುಮಾರ್ ಅಂಥವರು ಕೂಡ ವಿಲಿವಿಲಿ ಒದ್ದಾಡಿ ಹೋದರು. ಅವರೇನು ಮೌಲ್ಯಾಧಾರಿತ ರಾಜಕಾರಣ ಮಾಡುತ್ತೇನೆ ಅಂದುಕೊಂಡು ಹೇಳಿದರು. ಆರೋಗ್ಯ ಇಲಾಖೆ ಬಗ್ಗೆ ಅವರು ಹೇಳುವಂತಹ ಸಂದರ್ಭದಲ್ಲಿ ನಮಗೆಲ್ಲಾ ಕರೆ ಕೊಟ್ಟರು. ಅದೇನೆಂದರೆ, ಸಾಮಾನ್ಯ ರೋಗಿಗಳ ರೂಪದಲ್ಲಿ ಎಲ್ಲಾ ಶಾಸಕರು, ಎಲ್ಲಾ ಮಂತ್ರಿಗಳು ಸರ್ಕಾರಿ ಆಸ್ಪತ್ರೆಗೆ ಹೋಗಬೇಕು. ಮಂತ್ರಿಗಳು, ಶಾಸಕರು ವಿಶೇಷ ಅಂದುಕೊಳ್ಳಬೇಡಿ. ಸಾಮಾನ್ಯ ಜನರು ಸರ್ಕಾರಿ ಆಸ್ಪತ್ರೆಗೆ ಹೋಗಬೇಕು ಎಂದು ಕರೆ ಕೊಟ್ಟಂಥ ಮಾನ್ಯ ರಮೇಶ್ ಕುಮಾರ್‌ರವರು ಇವತ್ತು ಆ ಮಂತ್ರಿಗೆ ಒಂದು ವ್ಯವಸ್ಥೆ, ಸಾಮಾನ್ಯ ಜನರಿಗೆ ಒಂದು ವ್ಯವಸ್ಥೆ, ಆ ಮಂತ್ರಿ ಪರವಾಗಿ ಹೇಳಿಕೊಳ್ಳುವಂತಹ ಪರಿಸ್ಥಿತಿ ಇವತ್ತು ಮಾನ್ಯ ರಮೇಶ್‌ಕುಮಾರ್‌ರವರಿಗೆ ಬಂತು. ಇದು ಎಂತಹ ವಿಚಿತ್ರ, ಇದು ಯಾವ ಮೌಲ್ಯ? ಸಾಮಾನ್ಯ ಜನ ಯಾವ ರೀತಿ ಸರ್ಕಾರಿ ಆಸ್ಪತ್ರೆಗೆ ಹೋಗುತ್ತಾರೆಯೋ ಅದೇ ರೀತಿ ಎಲ್ಲಾ ಮಂತ್ರಿಗಳು, ಶಾಸಕರುಗಳು ಹೋಗಿ ಎಂದು ಹೇಳಿದಂಥವರು ಏನು ಮೌಲ್ಯದ ವಿಚಾರವನ್ನು ಪ್ರಸ್ತಾಪ ಮಾಡಿದರೋ ಇವತ್ತು ಮಾನ್ಯ ರಮೇಶ್ ಕುಮಾರ್‌ರವರು ರಾಜ್ಯದ ಜನರ ಕ್ಷಮೆ ಕೇಳಬೇಕಾಗುತ್ತದೆ. ಮಾನ್ಯ ರಮೇಶ್ ಕುಮಾರ್‌ರವರು ಸಾಮಾನ್ಯ ಜನರ ಪರವಾಗಿ ಎಲ್ಲಾ ಮಂತ್ರಿಗಳು ಸರ್ಕಾರಿ ಆಸ್ಪತ್ರೆಗೆ ಬನ್ನಿ ಎಲ್ಲರೂ ಒಂದೆ ಎನ್ನುವ ಭಾವನೆ ತನ್ನಿ ಎಂದು ಹೇಳಿದರು. ಹಾಗಾದರೆ ಅವರ ಮೌಲ್ಯ ಏನು?

**ಶ್ರೀ ಐವನ್ ಡಿ'ಸೋಜಾ (ಸರ್ಕಾರದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ಈಗ ವಿಷಯಾಂತರ ಆಗುವುದು ಬೇಡ. ಪಾಯಿಂಟ್ ಆಫ್ ಆರ್ಡರ್. ನಿಲುವಳಿ ಸೂಚನೆ ಏತಕ್ಕೆ, ಅವರು ಮಾತನಾಡುತ್ತಿರುವ ವಿಚಾರ ಏನು, ಅವರು ಧರಣಿಯಲ್ಲಿದ್ದಾರೆ, this House is not in order.

**(ಗೊಂದಲ)**

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಹೇಳುವುದು ಆಚಾರ, ತಿನ್ನುವುದು ಬದನೆಕಾಯಿ ಎನ್ನುವ ರೀತಿಯ ಪರಿಸ್ಥಿತಿ ಬಂದೊಗಿದೆ. ಮಾನ್ಯ ರಮೇಶ್‌ಕುಮಾರ್‌ರವರು ಮೊನ್ನೆ ಉಪನ್ಯಾಸ.....(ಗೊಂದಲ) ಮಾನ್ಯ ಗೃಹ ಮಂತ್ರಿಗಳಿಗೆ ನಾನು ಪ್ರಾರ್ಥನೆ ಮಾಡುತ್ತೇನೆ, ಇವತ್ತು ಇಡೀ ಕರ್ನಾಟಕ ರಾಜ್ಯ ನೋಡುತ್ತಿದೆ. ಜಾರ್ಜ್ ಅವರ ಮೇಲೆ ಕ್ರಿಮಿನಲ್ ಕೇಸ್ ಹಾಕಿ ಸಿ.ಬಿ.ಐ. ತನಿಖೆ ಮಾಡಿ ಅವರನ್ನು ಮಂತ್ರಿ ಮಂಡಲದಿಂದ ಇಳಿಸಬೇಕೆನ್ನುವ ಒತ್ತಾಯವನ್ನು ನಾವೆಲ್ಲರು ಮಾಡುತ್ತಿದ್ದೇವೆ. ಧರಣಿ ಕುಳಿತಂಥ ಸಂದರ್ಭದಲ್ಲಿ ನಾವು ಸುಮ್ಮನೆ ಸಮಯ ಹಾಳು ಮಾಡುವುದಕ್ಕೆ ಕುಳಿತ್ತಿಲ್ಲ. ಕರ್ನಾಟಕದ ಮೌಲ್ಯ ಜಾಸ್ತಿ ಮಾಡುವುದಕ್ಕೆ ಧರಣಿ ಮಾಡುತ್ತಿದ್ದೇವೆ. ಕರ್ನಾಟಕ ರಾಜ್ಯದಲ್ಲಿ ಕೊಲೆಗಡುಕರ ಸರ್ಕಾರ ಆಗುತ್ತಿದೆ.

**ಸಭಾಪತಿಯವರು:–** ಧರಣಿ ನಿರತ ಎಲ್ಲಾ ಗೌರವಾನ್ವಿತ ಸದಸ್ಯರುಗಳು ತಮ್ಮ ತಮ್ಮ ಸ್ಥಾನಗಳಿಗೆ ತೆರಳಿ ಸದನ ನಡೆಸುವುದಕ್ಕೆ ಅವಕಾಶ ಮಾಡಿಕೊಡಿ. ತಾವು ಎತ್ತಿರತಕ್ಕಂಥ ಬಹು ಮುಖ್ಯವಾಗಿರುವಂತಹ ವಿಷಯದ ಬಗ್ಗೆಯೂ ಕೂಡ ಯಾವ ರೀತಿ ಚರ್ಚೆ ಮಾಡಿಸಬೇಕೆನ್ನುವುದರ ಬಗ್ಗೆ ನನ್ನ ತೀರ್ಪನ್ನು ನಾನು ಹೇಳುವನಿದ್ದೇನೆ. ಆದರೆ ಸದನ ಸರಿಯಾದ ಸ್ಥಿತಿಯಲ್ಲಿರಬೇಕಾಗುತ್ತದೆ. ಧರಣಿ ನಿರತರು ದಯಮಾಡಿ ತಾವೆಲ್ಲಾ ತಮ್ಮ ತಮ್ಮ ಸ್ಥಾನಗಳಿಗೆ ತೆರಳಿದರೆ ಸದನ ನಡೆಸುವುದಕ್ಕೆ ಅನುಕೂಲವಾಗುತ್ತದೆ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ಕರ್ನಾಟಕ ಸರ್ಕಾರದಲ್ಲಿ ಅನೇಕ ಪ್ರಾಮಾಣಿಕ ಅಧಿಕಾರಿಗಳು ಪೊಲೀಸ್ ಇಲಾಖೆಯಲ್ಲಿ, ಕಂದಾಯ ಇಲಾಖೆಯಲ್ಲಿ ಇದ್ದಾರೆ. ಅವರಿಗೆ ರಕ್ಷಣೆ ಕೊಡುವವರು ಯಾರು? ರಕ್ಷಣೆ ಕೊಡುತ್ತೇವೆಂದು ಮಾನ್ಯ ಗೃಹ ಸಚಿವರು ಹೇಳಲಿ.

**ಡಾ॥ಜಿ.ಪರಮೇಶ್ವರ್(ಸಭಾನಾಯಕರು ಹಾಗೂ ಗೃಹ ಸಚಿವರು):–** ಮಾನ್ಯ ಸಭಾಪತಿಯವರೆ, ಶ್ರೀ ಗಣಪತಿಯವರ ಸಾವು ಅವರಿಗಷ್ಟೇ ನೋವು ತಂದಿಲ್ಲ. ನಮಗೂ ಕೂಡ ನೋವು ತಂದಿದೆ. ಅವರ ಕುಟುಂಬದವರ ಜೊತೆಯಲ್ಲಿ ಎಲ್ಲಾ ರೀತಿಯ ಅನುಕಂಪ ಇದೆ. ಸರ್ಕಾರ ಇದನ್ನು ಲಘುವಾಗಿ ತೆಗೆದುಕೊಂಡಿದೆ. ತಾವು ದಯಮಾಡಿ ಕ್ಷಮಿಸಬೇಕು. ಅವರು ಆ ರೀತಿ ಅರ್ಥ ಬರುವ ರೀತಿಯಲ್ಲಿ ಹೇಳುತ್ತಿದ್ದಾರೆ. ಸರ್ಕಾರ ಬಹಳ ಗಂಭೀರವಾಗಿ ತೆಗೆದುಕೊಂಡಿದೆ. ನಿಜ, ಅವರ ಹೇಳಿಕೆಯಲ್ಲಿ ಇಬ್ಬರು ಅಧಿಕಾರಿಗಳ ಹೆಸರು, ಒಬ್ಬ ಸಚಿವರ ಹೆಸರನ್ನು ಹೇಳಿದ್ದಾರೆ. ಹೇಳುವಾಗ ಅವರು ಏನು ಹೇಳಿಕೆಯನ್ನು ಕೊಟ್ಟಿದ್ದಾರೆಂದು ಬಹಳ ಕೂಲಂಕುಷವಾಗಿ, ಸೂಕ್ಷ್ಮವಾಗಿ ನೋಡಬೇಕಾಗುತ್ತದೆ. ಅವರು ನಾನು ಸಾಯುತ್ತೇನೆ ಎಂದು ಹೇಳಿದ್ದಾರೆಯೇ, ನಾನು ಆತ್ಮಹತ್ಯೆ ಮಾಡಿಕೊಳ್ಳುತ್ತೇನೆ ಎಂದು ಹೇಳಿದ್ದಾರೆಯೇ, ಇವೆಲ್ಲಾ ನೋಡಬೇಕಾಗುತ್ತದೆ. ಅದರ ಚರ್ಚೆಗೆ ನಾನು ಹೋಗುವುದಿಲ್ಲ. ಆದರೆ ನಮಗೆ ನಿಜ ಸ್ಥಿತಿ ಏನು, ಸತ್ಯ ಏನು ಎನ್ನುವುದು ನಮಗೂ ಕೂಡ ಗೊತ್ತಾಗಬೇಕು. ಈಗ ಅಲ್ಲಿ unnatural death ಎಂದು ಅವರೇನು ವಿಶ್ಲೇಷಣೆ ಮಾಡುತ್ತಿದ್ದಾರೆ ಅದರಲ್ಲಿ ತತಕ್ಷಣ ರಾತ್ರಿ 11.30 ಗಂಟೆಗೆ ಅದನ್ನು ನಾವು ಸಿ.ಐ.ಡಿ.ಗೆ ಕೊಟ್ಟಿದ್ದೇವೆ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಗೃಹ ಸಚಿವರೆ, ದಯವಿಟ್ಟು ಅರ್ಥ ಮಾಡಿಕೊಳ್ಳಿ. ಎಫ್.ಐ.ಆರ್., ಏಕೆ ಹಾಕಲಿಲ್ಲ?

**(ಗೊಂದಲ)**

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ಇಡೀ ರಾಜ್ಯದಲ್ಲಿ ಯಾವುದೇ ಒಬ್ಬ ಸಾಮಾನ್ಯ ಪ್ರಜೆ ಪೊಲೀಸ್ ಸ್ಟೇಷನ್‌ಗೆ ಹೋಗಿ ದೂರು ಕೊಟ್ಟರೆ ಎಫ್.ಐ.ಆರ್., ಹಾಕಬೇಕು. ಎಫ್.ಐ.ಆರ್., ಏಕೆ ಹಾಕಲಿಲ್ಲ ಎಂಬುದನ್ನು ಹೇಳಿ? ಅದು ಬಿಟ್ಟು ಬೇರೆ ಹರಿಕಥೆ ಬೇಡ. ಬೆಳಿಗ್ಗೆಯಿಂದ ಮಧ್ಯಾಹ್ನದವರೆಗೆ ಮಾನ್ಯ ರಮೇಶ್‌ಕುಮಾರ್‌ರವರ ಹರಿಕಥೆ. ಈಗ ಶಿಫ್ಟ್ ಬದಲಾವಣೆಯಾಗಿದೆ. ಮಧ್ಯಾಹ್ನದಿಂದ ಸಂಜೆವರೆಗೆ ಗೃಹ ಮಂತ್ರಿಗಳ ಹರಿಕಥೆ. ನಾವು ಹರಿಕಥೆ ಕೇಳುವುದಕ್ಕೆ ಬರುತ್ತಿಲ್ಲ. ಕಂಪ್ಲೇಂಟ್‌ಗೆ ಎಫ್.ಐ.ಆರ್., ಏಕೆ ಹಾಕಿಲ್ಲ? ಅವರ ಹೆಂಡತಿ, ಮಕ್ಕಳು ಎಫ್.ಐ.ಆರ್., ಹಾಕಿ ಎಂದು ಅಂಗಲಾಚಿ ಬೇಡುತ್ತಿದ್ದಾರೆ.

**(ಗೊಂದಲ)**

**ಡಾ॥ಜಿ.ಪರಮೇಶ್ವರ್:–** ಮಾನ್ಯ ಸಭಾಪತಿಯವರೇ, ಅದೆಲ್ಲಾ ಹೇಳಲಿ. ನಮ್ಮದೇನು ತಕರಾರು ಇಲ್ಲ. ಅವರೇನು ನಿಯಮ 59ರ ಅಡಿಯಲ್ಲಿ ಪ್ರಸ್ತಾಪ ಮಾಡಿದ್ದಾರೆ ಅದರ ಬಗ್ಗೆ ತೀರ್ಮಾನ ತೆಗೆದುಕೊಂಡು ನಿಯಮ 68ರ ಅಡಿಯಲ್ಲಿ ಚರ್ಚೆ ಮಾಡುವುದಕ್ಕೆ ಅವರಿಗೆ ಅವಕಾಶ ಕೊಡಿ. ಅದರಲ್ಲಿ ಏನು ವಿಷಯ ಹೇಳುತ್ತಾರೆ ಹೇಳಲಿ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ಮೊದಲು ಜಾರ್ಜ್‌ರವರ ರಾಜೀನಾಮೆಯನ್ನು ತೆಗೆದುಕೊಳ್ಳಿ. ಆಮೇಲೆ ಚರ್ಚೆ. ಜಾರ್ಜ್‌ರವರು ರಾಜೀನಾಮೆ ಕೊಡುವವರೆಗೂ ನಮ್ಮ ಹೋರಾಟ ನಿಲ್ಲುವುದಿಲ್ಲ. ಇಡೀ ಕರ್ನಾಟಕ ರಾಜ್ಯದಲ್ಲಿ ಹೋರಾಟ ಮಾಡುತ್ತೇವೆ. ಇದನ್ನು ನಾವು ಬಿಡುವುದಿಲ್ಲ.

**ಡಾ॥ಜಿ.ಪರಮೇಶ್ವರ್:–** ನಿಮ್ಮ ಸ್ಥಾನಗಳಿಗೆ ಹೋಗಿ ಚರ್ಚೆ ಮಾಡಿ. ನಿಮ್ಮ ಹತ್ತಿರ ಏನೆಲ್ಲಾ ಮಾಹಿತಿ ಇದೆ ಅದನ್ನೆಲ್ಲಾ ಹೇಳಿ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಇದು ಚರ್ಚೆ ಮಾಡುವ ಅಂಶವೇ? ಗೃಹ ಮಂತ್ರಿಗಳು ಮಾದರಿಯಾಗಿರಬೇಕು.

**ಸಭಾಪತಿಯವರು:–** ಈಗ ಧರಣಿ ನಿರತರು ತಮ್ಮ ತಮ್ಮ ಸ್ಥಾನಗಳಿಗೆ ತೆರಳಿ. ನಾನು ತೀರ್ಪನ್ನು ಕೊಟ್ಟ ತಕ್ಷಣ ಚರ್ಚೆ ಯಾವ ರೀತಿ ಮಾಡಬೇಕು ಎನ್ನುವುದರ ಬಗ್ಗೆ ತಿಳಿಸುತ್ತೇನೆ. ಆ ರೀತಿ ಮಾಡೋಣ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ನಾನು ಬಹಳ ಸ್ಪಷ್ಟವಾಗಿ ಹೇಳುತ್ತಿದ್ದೇನೆ. ನಾನು ಗೃಹ ಮಂತ್ರಿಯವರಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಕಂಪ್ಲೇಂಟ್ ಕೊಟ್ಟ ತಕ್ಷಣ ಎಫ್.ಐ.ಆರ್., ಹಾಕಬೇಕೆನ್ನುವ ಅಂಶ ಕಾನೂನಿನಲ್ಲಿ ಇದೆಯೇ, ಕಂಪ್ಲೇಂಟ್ ಕೊಟ್ಟರೆ ಎಫ್.ಐ.ಆರ್., ಹಾಕಲೇಬೇಕು ಎಂದು ಇರಬೇಕಾದರೆ ಒಬ್ಬೊಬ್ಬರಿಗೆ ಒಂದು ಕಾನೂನು ಇದೆಯೇ, ಮಂತ್ರಿಗೆ ಒಂದು, ಸಾಮಾನ್ಯ ಜನಕ್ಕೆ ಒಂದು ಕಾನೂನು ಇದೆಯೇ?

**ಡಾ||ಜಿ.ಪರಮೇಶ್ವರ್:–** ಮಾನ್ಯ ಸಭಾಪತಿಯವರೇ, ಅವರು ಚರ್ಚೆ ಮಾಡಲಿ. ನಾನು ಉತ್ತರ ಕೊಡುತ್ತೇನೆ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಏನು ಉತ್ತರ ಕೊಡುತ್ತೀರಿ? ಇದೊಂದಕ್ಕೆ ಉತ್ತರ ಕೊಡಿ.

**(ಗೊಂದಲ)**

**ಡಾ||ಜಿ.ಪರಮೇಶ್ವರ್:–** ಸರ್ಕಾರ ಉತ್ತರ ಕೊಡುತ್ತದೆ. ನೀವು ವಾಪಸ್ ಹೋಗಿ ಚರ್ಚೆ ಮಾಡಿ, ನಿಮ್ಮ ಹತ್ತಿರ ಇರುವ ಎಲ್ಲಾ ಮಾಹಿತಿಯನ್ನು ಹೇಳಿ.

**(ಗೊಂದಲ)**

**ಶ್ರೀ ಕೆ.ಎಸ್.ಈಶ್ವರಪ್ಪ:–** ಕಂಪ್ಲೇಂಟ್ ಕೊಟ್ಟ ಮೇಲೆ ಎಫ್.ಐ.ಆರ್., ಹಾಕಬೇಕೋ ಬೇಡವೋ?

**ಡಾ||ಜಿ.ಪರಮೇಶ್ವರ್:–** ಏತಕ್ಕಾಗಿ ಎಫ್.ಐ.ಆರ್., ಹಾಕಲಿಲ್ಲ ಎನ್ನುವುದನ್ನು ಹೇಳುತ್ತೇನೆ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಕರ್ನಾಟಕ ರಾಜ್ಯದ ಗೃಹ ಮಂತ್ರಿಯಾಗಿ ಇವರಿಗೆ ಎಷ್ಟರ ಮಟ್ಟಿಗೆ ಶಕ್ತಿ ಇದೆ, ಯೋಗ್ಯತೆ ಇದೆ? ಕಂಪ್ಲೇಂಟ್ ಕೊಟ್ಟರೆ ಎಫ್.ಐ.ಆರ್., ಹಾಕಬೇಕೋ ಬೇಡವೋ ಎನ್ನುವುದಕ್ಕೆ ಉತ್ತರ ಕೊಡುವುದಕ್ಕೆ ಆಗದಿರುವ ಗೃಹ ಮಂತ್ರಿ, ಅವರು ಗೃಹ ಮಂತ್ರಿ ಸ್ಥಾನದಲ್ಲಿ ಇರಬೇಕೆ?

**ಡಾ||ಜಿ.ಪರಮೇಶ್ವರ್:–** ಮಾನ್ಯ ಸಭಾಪತಿಯವರೆ, UDR (Unnatural Death Report) ಹಾಕುವುದರ ಮೂಲಕ the law has already set in motion.

**ಶ್ರೀ ಕೆ.ಎಸ್.ಈಶ್ವರಪ್ಪ:–** ಎಲ್ಲಿದೆ? ಎಫ್.ಐ.ಆರ್., ಏಕೆ ಹಾಕಲಿಲ್ಲ?

**ಡಾ||ಜಿ.ಪರಮೇಶ್ವರ್:–** ಸರ್ಕಾರ ಈಗಾಗಲೇ ಕ್ರಮ ತೆಗೆದುಕೊಂಡಿದೆ. ಸಿ.ಐ.ಡಿ. ತನಿಖೆ ಪ್ರಾರಂಭವಾಗಿದೆ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಕಂಪ್ಲೇಂಟ್ ಕೊಟ್ಟರೆ ಎಫ್.ಐ.ಆರ್., ಏಕೆ ಹಾಕಲಿಲ್ಲ? ಇದೊಂದು ಪ್ರಶ್ನೆಗೆ ಉತ್ತರ ಕೊಡಲಿ ಸಾಕು. ಕಂಪ್ಲೇಂಟ್ ಕೊಟ್ಟರೆ ಎಫ್.ಐ.ಆರ್., ಏಕೆ ಹಾಕಲಿಲ್ಲ?

**ಸಭಾಪತಿಯವರು:–** ಸದನವನ್ನು ಸುಲಲಿತವಾಗಿ ನಡೆಸುವುದಕ್ಕೆ ಧರಣಿ ನಿರತರು ತಮ್ಮ ಸ್ಥಾನಗಳಿಗೆ ತೆರಳಿದರೆ ಚರ್ಚೆ ಪ್ರಾರಂಭ ಮಾಡೋಣ. ಚರ್ಚೆ ಯಾವ ರೀತಿ ನಡೆಸಬೇಕು ಎನ್ನುವುದನ್ನು ನನ್ನ ತೀರ್ಪಿನಲ್ಲಿ ಹೇಳುತ್ತೇನೆ. ದಯಮಾಡಿ ತಮ್ಮ ತಮ್ಮ ಸ್ಥಾನಗಳಿಗೆ ತೆರಳಿ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಸ್ವಾಮಿ, ನಮಗೆ ನ್ಯಾಯ ಬೇಕು.

**(ಈ ಹಂತದಲ್ಲಿ ನ್ಯಾಯ ಬೇಕೇ ಬೇಕು ಎಂದು ಧರಣಿ ನಿರತರು ಸರ್ಕಾರದ ವಿರುದ್ಧ ಘೋಷಣೆ ಕೂಗುತ್ತಿದ್ದರು)**

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಕಂಪ್ಲೇಂಟ್‌ಗೆ ಎಫ್.ಐ.ಆರ್., ಹಾಕುವ ಪದ್ಧತಿ ಇಲ್ಲ ಎಂದು ಮಾನ್ಯ ಗೃಹ ಸಚಿವರು ತೀರ್ಮಾನ ಮಾಡುತ್ತಿರಬೇಕಾದರೆ ಇಡೀ ಕರ್ನಾಟಕ ರಾಜ್ಯದ ಜನತೆಗೆ ಸಂದೇಶ ಹೋಗುತ್ತದೆ.

**ಶ್ರೀ ಕೆ.ಎಸ್. ಈಶ್ವರಪ್ಪ:–** ಅನ್ಯಾಯ ಆದಂಥ ಸಂದರ್ಭದಲ್ಲಿ ನೀವು ಹೇಳಬೇಕು. ಯಾರಿಗೆ ಅನ್ಯಾಯ ಆಗಿದೆ, ಬನ್ನಿ complaint ಕೊಡಿ ನಾವು FIR ಹಾಕುತ್ತೇವೆ, ತನಿಖೆ ಮಾಡುತ್ತೇವೆ. ಅದಿಲ್ಲ ಇವರೇನೇನೋ ಹರಿಕಥೆ ಮಾಡುತ್ತಿದ್ದಾರೆ. ಜಾರ್ಜ್ ಒಬ್ಬ ಮಂತ್ರಿ ಎನ್ನುವ ಒಂದೇ ಕಾರಣಕ್ಕೋಸ್ಕರ ಇಷ್ಟರಮಟ್ಟಿಗೆ ಸರ್ಕಾರ ಮಾಡುವಂತಹ ಸ್ಥಿತಿ ಈ ಸರ್ಕಾರಕ್ಕೆ ಬಂದಿದೆ. ಅಂಥಹದ್ದರ ಬಗ್ಗೆ ತಾವು

ಸಭಾಪತಿಯವರು: ದಯಮಾಡಿ ತಮ್ಮ ತಮ್ಮ ಸ್ಥಾನಗಳಿಗೆ ತೆರಳಿ ಸದನ ನಡೆಸುವುದಕ್ಕೆ ಅನುವು ಮಾಡಿಕೊಡಿ.

**ಶ್ರೀ ಕೆ.ಎಸ್. ಈಶ್ವರಪ್ಪ:–** ಅದರ ಬಗ್ಗೆ ಕೂಡ ವಿರೋಧ ಇದೆ. ಯಾತಕ್ಕೆ ಸದನ ನಡೆಸಬೇಕು.

**(ಗೊಂದಲ)**

**ಶ್ರೀ ಐವನ್ ಡಿ'ಸೋಜ:** ಮಾನ್ಯ ಸಬಾಪತಿಯವರೆ, ಹೀಗೆ ಮುಂದುವರೆದರೆ ಸದನ ಹೇಗೆ ನಡೆಸಬೇಕು?

**ಸಭಾಪತಿಯವರು:** ಸದನವನ್ನು ಹದಿನೈದು ನಿಮಿಷಗಳ ಕಾಲ ಮುಂದೂಡಿದ್ದೇವೆ.

**(ಸದನವನ್ನು 4 ಗಂಟೆ 15 ನಿಮಿಷಗಳ ಕಾಲ ಮುಂದೂಡಲಾಯಿತು)**

**(ಸದನವು ಪುನ: 4 ಗಂಟೆ 44 ನಿಮಿಷಕ್ಕೆ ಪುನರಾರಂಭವಾಯಿತು)**

**(ಸಭಾಪತಿಗಳಾದ ಶ್ರೀ ಡಿ.ಹೆಚ್.ಶಂಕರಮೂರ್ತಿಯವರು ಪೀಠವನ್ನು ಅಲಂಕರಿಸಿದರು)**

**(ಈ ಹಂತದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರನ್ನು ಹೊರತುಪಡಿಸಿ ವಿರೋಧ ಪಕ್ಷದ ಎಲ್ಲಾ ಸದಸ್ಯರುಗಳು ಸದನದ ಭಾವಿಯಲ್ಲಿ ಧರಣಿಯಲ್ಲಿ ನಿರತರಾಗಿದ್ದರು)**

**ಸಭಾಪತಿಯವರು:–** ಈಗ ನನ್ನ ಕೊಠಡಿಯಲ್ಲಿ ಒಂದು ಸಣ್ಣ ಪ್ರಯತ್ನ ಮಾಡಿದೆ. ಪ್ರಯತ್ನದ ಫಲ ಏನು ಎಂದು ನನಗೆ ಹೇಳುವುದಕ್ಕೆ ಇಷ್ಟವಿಲ್ಲ. ನಾನು ಧರಣಿ ನಿರತ ಎಲ್ಲಾ ಗೌರವಾನ್ವಿತ ಸದಸ್ಯರಿಗೆ ತಮ್ಮ ತಮ್ಮ ಸ್ಥಾನಗಳಿಗೆ ತೆರಳಿಬೇಕು ಸದನ ನಡೆಸುವುದಕ್ಕೆ ಅನುವು ಮಾಡಿಕೊಡಬೇಕೆಂದು ಹೇಳಿ ಮತ್ತೊಮ್ಮೆ ನಾನು ವಿನಂತಿಸುತ್ತೇನೆ.

**ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೆ, ಸದನ ನಡೆಸಬೇಕು ಎನ್ನುವ ಆಸೆ ನಮ್ಮೆಲ್ಲರಿಗೂ ಇದೆ. ಸೂತಕದ ಮನೆಯಲ್ಲಿ ಗಂಡನ ಕಳೆದುಕೊಂಡು ನನ್ನ ಗಂಡ ಸತ್ತಿರುವುದಕ್ಕೆ ಯಾರು ಕಾರಣ, ಅದರ ಬಗ್ಗೆ ನನಗೆ ನ್ಯಾಯ ಕೊಡಿ ಎಂದು ಪೊಲೀಸ್ ಠಾಣೆಗೆ ಹೋಗಿ ದೂರು ಕೊಟ್ಟರೆ, ಅದನ್ನು ತೆಗೆದುಕೊಂಡು ಆ ವಿಧವೆಗೆ ನ್ಯಾಯ ಕೊಡುವುದಕ್ಕೂ ಈ ಸರ್ಕಾರ ತಯಾರಿಲ್ಲ ಎನ್ನುವುದಾದರೆ ಇದನ್ನು ಸರ್ಕಾರ ಎಂದು ಕರೆಯಬೇಕೇ? ಇಲ್ಲಿ ನಾವು ಏನು ಚರ್ಚೆ ಮಾಡಬೇಕು? ದೂರು ಕೊಟ್ಟರೆ ಸ್ವೀಕರಿಸುವುದಿಲ್ಲ, ಪ್ರಥಮ ವರ್ತಮಾನ ವರದಿ ದಾಖಲಿಸುವುದಿಲ್ಲ, ಸಂಬಂಧಪಟ್ಟವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸುವುದಿಲ್ಲ, ಒಬ್ಬ ವಿಧವೆ ಅದು ಪೊಲೀಸ್ ಅಧಿಕಾರಿ ಹೆಂಡತಿಗೆ ನ್ಯಾಯವನ್ನು ಒದಗಿಸುವುದಿಲ್ಲವೆಂದರೆ ನಾವು ಇಲ್ಲಿ ಯಾವುದರ ಬಗ್ಗೆ ಚರ್ಚೆ ಮಾಡಬೇಕು?

**ಶ್ರೀ ಐವನ್ ಡಿ'ಸೋಜ (ಸರ್ಕಾರದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೆ, ಇದರ ಬಗ್ಗೆ ಚರ್ಚೆ ಮಾಡಲು ಸರ್ಕಾರ ರೆಡಿ ಇದೆ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಸದನದಲ್ಲಿ ಈಗ ಮಾನ್ಯ ಗೃಹಮಂತ್ರಿಗಳು ಇದ್ದಾರೆ

**ಶ್ರೀ ಐವನ್ ಡಿ'ಸೋಜ:–** ಮಾನ್ಯ ಸಭಾಪತಿಯವರೆ, ಸರ್ಕಾರ ಚರ್ಚೆ ಮಾಡುವುದಕ್ಕೆ ತಯಾರಿದೆ. ಚರ್ಚೆಗೆ ತೆಗೆದುಕೊಳ್ಳೋಣ ಚರ್ಚೆಗೆ ಹೋಗೋಣ. ಚರ್ಚೆ ಮಾಡುವುದಕ್ಕೆ ಸರ್ಕಾರ ರೆಡಿ ಇದೆ ಎಂದು ಈಗಾಗಲೇ ಹೇಳಿದೆ.

**(ಗೊಂದಲ)**

**(ಸದನದ ಬಾವಿಯಲ್ಲಿದ್ದ ವಿರೋಧ ಪಕ್ಷದ ಸದಸ್ಯರುಗಳು ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗುತ್ತಿದ್ದರು)**

**ಡಾ॥ ಜಿ.ಪರಮೇಶ್ವರ:–** ಮಾನ್ಯ ಸಭಾಪತಿಯವರೆ, ನಾನು ಆಗಲೇ ಹೇಳಿದ್ದೇನೆ ಚರ್ಚೆ ಮಾಡುವುದಕ್ಕೆ ಸರ್ಕಾರ ತಯಾರು ಇದೆ ಎಂದು ಹೇಳಿದ್ದೇನೆ. ಇದರ ಬಗ್ಗೆ ನ್ಯಾಯ ದೊರಕಿಸಿ ಕೊಡುವುದಕ್ಕೆ ಸರ್ಕಾರವು ತಯಾರಿದೆ. ಮಾನ್ಯ ಸದಸ್ಯರುಗಳ ಹತ್ತಿರ ಏನೆಲ್ಲಾ ಮಾಹಿತಿ ಇದೆ, ಅದನ್ನು ಉಪಯೋಗ ಮಾಡಿ ಸದನದಲ್ಲಿ ಚರ್ಚೆ ಮಾಡಿ. ಚರ್ಚೆಯಲ್ಲಿ ಅಗತ್ಯವಾದ ಮಾಹಿತಿಗಳನ್ನೆಲ್ಲಾ ಕೊಡಿ. ಅದರ ಬಗ್ಗೆ ಸಿ.ಐ.ಡಿ.ಯಿಂದ ಈಗ ಏನು ತನಿಖೆ ಪ್ರಾರಂಭವಾಗಿದೆ ಅದು ಸತ್ಯಾಸತ್ಯೆಗಳನ್ನು ಹೊರತರುವುದಕ್ಕೆ ಸಹಾಯ ಆಗುತ್ತದೆ. ದಯಮಾಡಿ ತಾವು ತಮ್ಮ ತಮ್ಮ ಸ್ಥಾನಗಳಿಗೆ ಹೋಗಿ ಚರ್ಚೆಗೆ ಅವಕಾಶ ಮಾಡಿ ಕೊಡಿ. ಕೆಳಮನೆಯಲ್ಲಿ ಚರ್ಚೆಯಾಗುತ್ತಿದೆ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ನಾವು ಚರ್ಚೆಗೆ ತಯಾರು ಇದ್ದೇವೆ

**(ಗೊಂದಲ)**

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೆ, ಕೆಳಮನೆಯಲ್ಲಿ ಚರ್ಚೆಗೆ ಅವಕಾಶವನ್ನು ಮಾಡಿಕೊಟ್ಟಿದ್ದಾರೆ.

**ಡಾ॥ ಜಿ.ಪರಮೇಶ್ವರ:–** ಮಾನ್ಯ ಸಭಾಪತಿಯವರೆ, ತಮಲ್ಲಿ ಲಭ್ಯವಿರುವ ಮಾಹಿತಿಯನ್ನು ತಾವು ಸದನಕ್ಕೆ ಕೊಡಬಹುದು.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ನಾವು ಇದರ ಚರ್ಚೆ ಮಾಡುವುದಕ್ಕೆ ನಾವು ತಯಾರಿದ್ದೇವೆ. ಪ್ರಶ್ನೋತ್ತರ ವೇಳೆಯನ್ನು ಕೆಳಮನೆಯಲ್ಲಿ ಬದಿಗೊತ್ತಿ ಕರ್ನಾಟಕದ ರಾಜ್ಯದ ಒಬ್ಬ ಪ್ರಾಮಾಣಿಕ ಪೊಲೀಸ್ ಅಧಿಕಾರಿಗೆ ನ್ಯಾಯ ಕೊಡಬೇಕೆಂದು ಹೇಳಿ ಪ್ರಶ್ನೋತ್ತರವನ್ನು ಪಕ್ಕಕ್ಕೆ ಸರಿಸಿ ಚರ್ಚೆಗೆ ಅಲ್ಲಿ ಅವಕಾಶ ಕೊಟ್ಟಿದ್ದಾರೆ. ನಾವು ಇಲ್ಲಿಯೂ ಅದರ ಬಗ್ಗೆ ಚರ್ಚೆ ಮಾಡುವುದಕ್ಕೆ ತಯಾರಿದ್ದೇವೆ. ಪ್ರಶ್ನೋತ್ತರವನ್ನು ಪಕ್ಕಕೆ ಸರಿಸಿ ದಯವಿಟ್ಟು ನಮಗೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಿ. ನಾವು ತಯಾರು ಇದ್ದೇವೆ.

**ಡಾ॥ ಜಿ.ಪರಮೇಶ್ವರ:–** ಸನ್ಮಾನ್ಯ ಸಭಾಪತಿಯವರೆ, ಇಲ್ಲಿನ ಸಂಪ್ರದಾಯ ಇದೆ. ಯಾವುದೇ ಕಾರಣಕ್ಕೂ ಕೂಡ ಇಲ್ಲಿ ಪ್ರಶ್ನೋತ್ತರಗಳನ್ನು ಮುಂದಕ್ಕೆ ಹಾಕುವುದಕ್ಕೆ ಇಲ್ಲಿ ಅವಕಾಶ ಇಲ್ಲ. ಆದರೆ ಒಂದು ಬಾರಿ ಅದನ್ನು exception ಮಾಡಿ, ನಿಲುವಳಿ ಸೂಚನೆಯ ಮೇಲೆ ಪೂರ್ವಭಾವಿ ಚರ್ಚೆ ಮಾಡುವುದಕ್ಕೆ ತಾವು ಅನುಮತಿ ಕೊಟ್ಟು ಅವಕಾಶ ಕೊಟ್ಟಿದ್ದೀರಿ. ಆದರೆ, ಆ ಸಂದರ್ಭದಲ್ಲಿ ತಾವು ಹೇಳಿದ್ದೀರಿ ಇದನ್ನು precedence ಮಾಡಿಕೊಡಬೇಡಿ. ಇದನ್ನೇ ಪದೇ ಪದೇ ಮಾಡುವುದಕ್ಕೆ ಆಗುವುದಿಲ್ಲ ಎನ್ನುವಂತಹ ಮಾತನ್ನು ತಾವು ಆ ಸ್ಥಾನದಿಂದ ಹೇಳಿದ್ದೀರಿ. ಹಾಗಾಗಿ ಪ್ರಶ್ನೋತ್ತರ ಒಂದು ಗಂಟೆ ಸಮಯದಲ್ಲಿ ಪ್ರಶ್ನೆಗಳನ್ನು ಮುಗಿಸಿ, ನಂತರ ಚರ್ಚೆ ಪ್ರಾರಂಭ ಮಾಡಬಹುದು. ದಯಮಾಡಿ ಆ ಕೆಲಸ ಮಾಡಿಕೊಡಬೇಕೆಂದು ವಿರೋಧ ಪಕ್ಷದ ನಾಯಕರಿಗೆ ತಮ್ಮ ಮುಖಾಂತರ ಮನವಿ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

**ಶ್ರೀ ಪುಟ್ಟಣ್ಣ:–** ಮಾನ್ಯ ಸಭಾಪತಿಯವರೆ, ದಯಮಾಡಿ ಈ ಪ್ರಶ್ನೋತ್ತರಗಳನ್ನು ತೆಗೆದುಕೊಳ್ಳಿ ನಂತರ ಇದರ ಬಗ್ಗೆ ಚರ್ಚೆ ಮಾಡೋಣ ಎಂದು ಸಭಾನಾಯಕರು ಹೇಳುತ್ತಿದ್ದಾರೆ. ಸರಿ ಒಪ್ಪಿಕೊಳ್ಳುತ್ತೇವೆ. ನಮಗೂ ಕೂಡ ಅಜೆಂಡಾ ಪ್ರಕಾರ ಸದನವನ್ನು ನಡೆಸಬೇಕೆಂದು ಬಹಳ ಕಾತುರ

ಇದೆ. ಆದರೆ ಗಂಡ ಸತ್ತು ಹೋಗಿದ್ದಾರೆ ಅದರ ಬಗ್ಗೆ ನ್ಯಾಯ ಕೊಡಿಸಬೇಕೆಂದು ಅವರ ಹೆಂಡತಿ ಪೊಲೀಸ್ ಠಾಣೆಯ ಮುಂದೆ ಕುಳಿತ್ತಿದ್ದಾರೆ. ಇದರ ಬಗ್ಗೆ ಸರ್ಕಾರ ಈಗ ಏನು ಕ್ರಮವನ್ನು ತೆಗೆದುಕೊಂಡಿದೆ? ದೂರು ಕೊಟ್ಟರೆ ಸ್ವೀಕರಿಸುವುದಕ್ಕೆ ಅಲ್ಲಿ ತಯಾರಿಲ್ಲ.

**ಡಾ॥ ಜಿ.ಪರಮೇಶ್ವರ:–** ಮಾನ್ಯ ಸಭಾಪತಿಯವರೆ, ಒಂದು ನಿಮಿಷ...

**ಶ್ರೀ ಪುಟ್ಟಣ್ಣ:–** ಮಾನ್ಯ ಸಭಾಪತಿಯವರೆ, ಮೃತರ ಪತ್ನಿಯ ದೂರಿನ ಮೇಲೆ ಪ್ರಥಮ ವರ್ತಮಾನ ವರದಿ ದಾಖಲಿಸಲು ಅಲ್ಲಿ ತಯಾರಿರುವುದಿಲ್ಲ.

**ಡಾ॥ ಜಿ.ಪರಮೇಶ್ವರ್:–** ಮಾನ್ಯ ಸಭಾಪತಿಯವರೆ, ಕೊಟ್ಟಿರುವ ದೂರನ್ನು ಕೂಡ ಸಿ.ಐ.ಡಿ. ತನಿಖೆಗಾಗಿ ವರ್ಗಾವಣೆ ಮಾಡಿದ್ದಾರೆ.

**(ಗೊಂದಲ)**

**ಶ್ರೀ ಐವನ್ ಡಿ'ಸೋಜ:–** ಮಾನ್ಯ ಸಭಾಪತಿಯವರೆ, ಅವರ ಕೊಟ್ಟಿರುವ ದೂರನ್ನು ಪೊಲೀಸ್ ಠಾಣೆಯಲ್ಲಿ ಸ್ವೀಕಾರ ಮಾಡಿದ್ದಾರೆ. ತಪ್ಪು ಸಂದೇಶ ಕೊಡಬೇಡಿ.

**(ಗೊಂದಲ)**

**ಶ್ರೀ ಕೆ.ಎಸ್.ಈಶ್ವರಪ್ಪ:–** ನೀವು ಸಿ.ಬಿ.ಐ ತನಿಖೆ ಮಾಡಿ ಎಂದು ಹೇಳಿದರೆ, ಸಿ.ಐ.ಡಿ. ತನಿಖೆಗೆ ವಹಿಸಿದ್ದೇವೆಂದು ಹೇಳುತ್ತೀರಿ. ದೂರು ಸ್ವೀಕಾರ ಮಾಡಿಲ್ಲ. ಮತ್ತೆ ಸಿ.ಐ.ಡಿ.ಯವರು ಸರ್ಕಾರದ ಕೈ ಕೆಳಗೆ ಇರುವಂತಹ ಅಧಿಕಾರಿಗಳು. ನೀವು ಹೇಳಿದಂತೆ ಕೇಳುವ ಗುಮಾಸ್ತರು. ಅವರಿಂದ ತನಿಖೆಯನ್ನು ಮಾಡಿದರೆ ಏನು ನ್ಯಾಯ ಸಿಗುತ್ತದೆ? ಸಿ.ಬಿ.ಐ.ನಿಂದ ತನಿಖೆಯನ್ನು ಮಾಡಿಸಿ ಎಂದರೆ, ಸಿ.ಐ.ಡಿ.ಗೆ ಕೊಟ್ಟಿದ್ದೇವೆಂದರೆ ಇದು ನ್ಯಾಯವೇ?

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೆ, ಪೊಲೀಸ್ ಠಾಣೆಯಲ್ಲಿ ದೂರು ಸ್ವೀಕಾರ ಮಾಡಲಾಗಿದೆ. ಆದರೆ ದೂರು ಸ್ವೀಕಾರ ಮಾಡಿಲ್ಲವೆಂದು ಹೇಳುತ್ತಿದ್ದಾರೆ. ಇದರಿಂದ ಈ ರಾಜ್ಯದ ಜನತೆಗೆ ತಪ್ಪು ಸಂದೇಶ ಹೋಗುವುದು ಬೇಡ.

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಎಫ್.ಐ.ಆರ್. ಹಾಕಲಾಗಿದೆಯೇ?

**(ಗೊಂದಲ)**

**ಸಭಾಪತಿಗಳು:–** ಈಗ ಸದನವನ್ನು ನಾಳೆ ಬೆಳಿಗ್ಗೆ 11.00 ಗಂಟೆಯವರೆಗೆ ಮುಂದೂಡಿದ್ದೇನೆ.

**(ಸದನವು ಸಂಜೆ 4 ಗಂಟೆ 49 ನಿಮಿಷಕ್ಕೆ ಮುಕ್ತಾಯಗೊಂಡು ಪುನ: ದಿನಾಂಕ 12 ನೇ ಜುಲೈ ಮಾಹೆಯ 2016 ರ ಮಂಗಳವಾರದಂದು ಬೆಳಿಗ್ಗೆ 11.00 ಗಂಟೆಗೆ ಸೇರಲು ನಿಶ್ಚಯಿಸಿತು)**